Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

सं. १ नई दिल्ली, सोमवार, जून ८, २०२० ज्येष्ठ २६, १९४२ (शाका) खंड ५०
No. 1 New Delhi, Monday, June 8, 2020 Jyeshta 26, 1942 (Saka) Vol. 50
ನಂ. ೧ ನವ ದೆಹಲಿ, ಸೋಮವಾರ, ಜೂನ್ ೮, ೨೦೨೦ ಜ್ಯೇಷ್ಠ ೨೬, ೧೯೪೨ (ಶಕ) ಸಂಪುಟ ೫೦

**Ministry of Law and Justice**
Legislative Department
New Delhi, 08th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 08ನೇ ಜೂನ್ 2020**

The Translation in Kannada of the following Acts, namely:- (1) The Official Trustees Act, 1913 (2 of 1913) (2) The Factories Act, 1948 (63 of 1948) (3) The Chit Funds Act, 1982 ( 40 of 1982) (4) The Sexual Harassment of Women at Work Place (Prevention, Prohibition and Redressal) Act, 2013 (14 of 2013) (5) The National Food Security Act, 2013 (20 of 2013) - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 (1913ರ 2) (2) ಕಾರ್ಖಾನೆಗಳ ಅಧಿನಿಯಮ, 1948 (1948ರ 63) (3) ಚಿಟ್ ಫಂಡ್‌ಗಳ ಅಧಿನಿಯಮ, 1982 (1982ರ 40) (4) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 (2013ರ 14) (5) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (2013ರ 20)- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕಾರ್ಖಾನೆಗಳ ಅಧಿನಿಯಮ, 1948

(1948ರ ಅಧಿನಿಯಮ ಸಂಖ್ಯೆ 63)

[23 ಸೆಪ್ಟೆಂಬರ್, 1948]

ಕಾರ್ಖಾನೆಗಳಲ್ಲಿ ದುಡಿಮೆಯನ್ನು ವಿನಿಯಮನಗೊಳಿಸುವ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ

ಕಾರ್ಖಾನೆಗಳಲ್ಲಿ ದುಡಿಮೆಯನ್ನು ವಿನಿಯಮನಗೊಳಿಸುವ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಅದನ್ನು ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ – I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕಾರ್ಖಾನೆಗಳ ಅಧಿನಿಯಮ, 1948 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1949ರ ಏಪ್ರಿಲ್ 1ನೇ ದಿವಸದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆ.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದದ್ದು ಏನಾದರೂ ಇದ್ದ ಹೊರತು,–

(ಎ) "ವಯಸ್ಕ" ಎಂದರೆ ಹದಿನೆಂಟು ವರ್ಷ ವಯಸ್ಸು ತುಂಬಿರುವ ವ್ಯಕ್ತಿ;

(ಬಿ) "ತರುಣ/ತರುಣಿ" ಎಂದರೆ ಹದಿನೈದು ವರ್ಷ ವಯಸ್ಸು ತುಂಬಿರುವ, ಆದರೆ ಹದಿನೆಂಟು ವರ್ಷ ವಯಸ್ಸು ತುಂಬಿರದ ವ್ಯಕ್ತಿ;

(ಬಿಬಿ) "ಕ್ಯಾಲೆಂಡರ್ ವರ್ಷ" ಎಂದರೆ ಯಾವುದೇ ವರ್ಷದಲ್ಲಿ ಜನವರಿ ಮೊದಲ ದಿವಸದೊಂದಿಗೆ ಪ್ರಾರಂಭವಾಗುವ ಹನ್ನೆರಡು ತಿಂಗಳುಗಳ ಅವಧಿ;

(ಸಿ) "ಬಾಲಕ/ಬಾಲಕಿ" ಎಂದರೆ ಹದಿನೈದು ವರ್ಷ ವಯಸ್ಸು ತುಂಬಿರದ ವ್ಯಕ್ತಿ;

(ಸಿಎ) ಈ ಅಧಿನಿಯಮದ ಯಾವುದೇ ಉಪಬಂಧದ ಸಂಬಂಧದಲ್ಲಿ "ಸಕ್ಷಮ ವ್ಯಕ್ತಿ" ಎಂದರೆ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕಾರ್ಖಾನೆಯಲ್ಲಿ ಮಾಡಬೇಕಾದ ಪ್ರಯೋಗಗಳನ್ನು, ಪರೀಕ್ಷೆಗಳನ್ನು ಮತ್ತು ಪರಿವೀಕ್ಷಣೆಗಳನ್ನು ಮಾಡುವ ಉದ್ದೇಶಗಳಿಗಾಗಿ, ಚೀಫ್ ಇನ್ಸ್‌ಪೆಕ್ಟರ್‌ರು,–

(i) ವ್ಯಕ್ತಿಯ ಅರ್ಹತೆಗಳನ್ನು ಮತ್ತು ಅನುಭವವನ್ನು ಮತ್ತು ಆತನಲ್ಲಿ ದೊರೆಯಬಹುದಾದ ಸೌಲಭ್ಯಗಳನ್ನು; ಅಥವಾ

(ii) ಅಂಥ ಸಂಸ್ಥೆಯಲ್ಲಿ ನಿಯೋಜಿಸಿಕೊಂಡಿರುವ ವ್ಯಕ್ತಿಗಳ ಅರ್ಹತೆಗಳನ್ನು ಮತ್ತು ಅನುಭವವನ್ನು ಮತ್ತು ಅಲ್ಲಿ ದೊರೆಯಬಹುದಾದ ಸೌಲಭ್ಯಗಳನ್ನು

– ಗಮನದಲ್ಲಿಟ್ಟುಕೊಂಡು ಅಂಥ ಪ್ರಯೋಗಗಳನ್ನು, ಪರೀಕ್ಷೆಗಳನ್ನು ಮತ್ತು ಪರಿಶೀಲನೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಚೀಫ್ ಇನ್ಸ್‌ಪೆಕ್ಟರ್‌ರು ಯಾವ ವ್ಯಕ್ತಿಗೆ ಅಥವಾ ಯಾವ ಸಂಸ್ಥೆಗೆ ಮಾನ್ಯತೆ ನೀಡಿರುವರೋ ಆ ವ್ಯಕ್ತಿ ಅಥವಾ ಆ ಸಂಸ್ಥೆ ಮತ್ತು ಕಾರ್ಖಾನೆಗೆ ಸಂಬಂಧಿಸಿದಂತೆ ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳನ್ನು ಅಥವಾ ಒಂದಕ್ಕಿಂತ ಹೆಚ್ಚು ಸಂಸ್ಥೆಗಳನ್ನು ಸಕ್ಷಮ ವ್ಯಕ್ತಿಯೆಂದು ಮಾನ್ಯತೆ ನೀಡಬಹುದು;

(ಸಿಬಿ) ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಕೈಗಾರಿಕೆಗೆ ಸಂಬಂಧಿಸಿದಂತೆ "ಅಪಾಯಕಾರಿ ಕಾರ್ಯವಿಧಾನ" ಎಂದರೆ ಯಾವ ಪ್ರಕ್ರಿಯೆಯಲ್ಲಿ ಅಥವಾ ಚಟುವಟಿಕೆಯಲ್ಲಿ ಬಳಸಿದ ಕಚ್ಚಾ ಸಾಮಗ್ರಿಗಳು ಅಥವಾ ಮಧ್ಯಂತರ ಉತ್ಪನ್ನ ಅಥವಾ ಸಿದ್ಧ ಉತ್ಪನ್ನಗಳು, ಉಪ ಉತ್ಪನ್ನಗಳು ಅಥವಾ ಅದರ ನಿರುಪಯುಕ್ತ ವಸ್ತುಗಳು ಅಥವಾ ತ್ಯಾಜ್ಯಗಳು, ವಿಶೇಷ ಎಚ್ಚರಿಕೆ ವಹಿಸಿದ ಹೊರತು,–

(i) ಆ ಯಾವ ಪ್ರಕ್ರಿಯೆಯಲ್ಲಿ ಅಥವಾ ಚಟುವಟಿಕೆಯಲ್ಲಿ ತೊಡಗಿರುವ ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳ ಆರೋಗ್ಯಕ್ಕೆ ತೀವ್ರ ಧಕ್ಕೆಯುಂಟು ಮಾಡುತ್ತವೋ; ಅಥವಾ

(ii) ಸಾಮಾನ್ಯ ಪರಿಸರವನ್ನು ಮಲಿನಗೊಳಿಸುವ ಪರಿಣಾಮ ಉಂಟುಮಾಡುತ್ತವೋ

– ಆ ಯಾವುದೇ ಪ್ರಕ್ರಿಯೆ ಅಥವಾ ಚಟುವಟಿಕೆ:

ಪರಂತು, ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಮೊದಲನೇ ಅನುಸೂಚಿಯನ್ನು, ಆ ಅನುಸೂಚಿಗೆ ಯಾವುದೇ ಕೈಗಾರಿಕೆಯನ್ನು ಸೇರಿಸುವ, ಆ ಅನುಸೂಚಿಯಿಂದ ಯಾವುದೇ ಕೈಗಾರಿಕೆಯನ್ನು ಬಿಟ್ಟುಬಿಡುವ ಅಥವಾ ಆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೈಗಾರಿಕೆಯನ್ನು ವ್ಯತ್ಯಸ್ಥಗೊಳಿಸುವ ಮೂಲಕ ತಿದ್ದುಪಡಿ ಮಾಡಬಹುದು.

(ಡಿ) "ಕಿರಿಯ ವಯಸ್ಸಿನ ವ್ಯಕ್ತಿ" ಎಂದರೆ, ಬಾಲಕ/ಬಾಲಕಿ ಅಥವಾ ತರುಣ;

(ಇ) "ದಿವಸ" ಎಂದರೆ ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಇಪ್ಪತ್ತನಾಲ್ಕು ಗಂಟೆಗಳ ಅವಧಿ ಎಂದು ಅರ್ಥ;

(ಎಫ್) "ವಾರ" ಎಂದರೆ, ಶನಿವಾರ ಮಧ್ಯರಾತ್ರಿಯಿಂದ ಅಥವಾ ಕಾರ್ಖಾನೆಗಳ ಚೀಫ್ ಇನ್ಸ್‌ಪೆಕ್ಟರನು, ನಿರ್ದಿಷ್ಟ ಪ್ರದೇಶಕ್ಕಾಗಿ ಲಿಖಿತದಲ್ಲಿ ಅನುಮೋದಿಸಬಹುದಾದಂಥ ಮಧ್ಯರಾತ್ರಿಯಿಂದ ಪ್ರಾರಂಭವಾಗುವ ಏಳು ದಿವಸಗಳ ಅವಧಿ;

(ಜಿ) "ಶಕ್ತಿ" ಎಂದರೆ ವಿದ್ಯುಚ್ಛಕ್ತಿ ಅಥವಾ ಯಾಂತ್ರಿಕವಾಗಿ ಪ್ರಸರಣ ಮಾಡುವ ಮತ್ತು ಮಾನವನಿಂದ ಅಥವಾ ಪ್ರಾಣಿಯಿಂದ ಉತ್ಪಾದಿತವಾಗದಂಥ ಯಾವುದೇ ಇತರ ರೂಪದ ಶಕ್ತಿ;

(ಹೆಚ್) "ಪ್ರೈಂ ಮೂವರ್" ಎಂದರೆ ಶಕ್ತಿಯನ್ನು ಉತ್ಪಾದಿಸುವ ಅಥವಾ ಅನ್ಯಥಾ ಅದನ್ನು ಒದಗಿಸುವಂಥ ಯಾವುದೇ ಎಂಜಿನ್, ಮೋಟಾರ್ ಅಥವಾ ಎಲ್ಲ ಇತರ ಸಾಧನಗಳು;

(ಐ) "ಪ್ರಸರಣ ಯಂತ್ರೋಪಕರಣಗಳು" ಎಂದರೆ ಪ್ರೈಂ ಮೂವರ್‌ನ ಚಾಲಕ ಬಲವನ್ನು ಯಾವುದೇ ಯಂತ್ರೋಪಕರಣಕ್ಕೆ ಅಥವಾ ಸಲಕರಣೆಗೆ ಪ್ರಸರಣ ಮಾಡುವ ಅಥವಾ ಆ ಯಾವುದೇ ಯಂತ್ರೋಪಕರಣವು ಅಥವಾ ಸಲಕರಣೆಯು ಆ ಬಲವನ್ನು ಸ್ವೀಕರಿಸುವಂತೆ ಮಾಡುವ ಯಾವುದೇ ಶಾಫ್ಟ್, ವೀಲ್, ಡ್ರಮ್, ಪುಲ್ಲಿ, ಪುಲ್ಲಿ ಸಿಸ್ಟಂ, ಕಪ್ಲಿಂಗ್, ಕ್ಲಚ್, ಡ್ರೈವಿಂಗ್ ಬೆಲ್ಟ್ ಅಥವಾ ಇತರೆ ಸಲಕರಣೆ ಅಥವಾ ಸಾಧನ;

(ಜೆ) "ಯಂತ್ರೋಪಕರಣ"ವು, ಯಾವ ಪ್ರೈಂ ಮೂವರ್‌ದಿಂದ ಪ್ರಸರಣ ಯಂತ್ರೋಪಕರಣದಿಂದ ಅಥವಾ ಎಲ್ಲ ಇತರ ಸಲಕರಣೆಗಳಿಂದ ಶಕ್ತಿಯನ್ನು ಉತ್ಪಾದಿಸಲಾಗುವುದೋ, ಶಕ್ತಿಯ ಹರಿವನ್ನು ರೂಪಾಂತರಿಸಲಾಗುವುದೋ ಅಥವಾ ಬಳಕೆ ಮಾಡಲಾಗುತ್ತದೋ ಆ ಪ್ರೈಂ ಮೂವರ್‌ಗಳನ್ನು, ಪ್ರಸರಣ ಯಂತ್ರೋಪಕರಣಗಳನ್ನು ಮತ್ತು ಇತರ ಎಲ್ಲ ಇತರೆ ಸಲಕರಣೆಗಳನ್ನು ಒಳಗೊಳ್ಳುತ್ತದೆ;

(ಕೆ) "ತಯಾರಿಕಾ ಪ್ರಕ್ರಿಯೆ" ಎಂದರೆ,-

(i) ಬಳಸುವ, ಮಾರಾಟ ಮಾಡುವ, ಸಾಗಣೆ ಮಾಡುವ, ತಲುಪಿಸುವ ಅಥವಾ ವಿಲೆ ಮಾಡುವ ಉದ್ದೇಶಕ್ಕಾಗಿ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ತಯಾರಿಸುವ, ಪರಿವರ್ತಿಸುವ, ದುರಸ್ತಿ ಮಾಡುವ, ಅಂದಗೊಳಿಸುವ, ಒಪ್ಪಗೊಳಿಸುವ, ಪ್ಯಾಕಿಂಗ್ ಮಾಡುವ, ತೈಲದಿಂದ ಸಂಸ್ಕರಿಸುವ, ತೊಳೆಯುವ, ಸ್ವಚ್ಛಗೊಳಿಸುವ, ಒಡೆದು ಹಾಕುವ, ನಾಶಗೊಳಿಸುವ ಅಥವಾ ಅನ್ಯಥಾ ಸಂಸ್ಕರಿಸುವ ಅಥವಾ ಸರಿಹೊಂದಿಸಿಕೊಳ್ಳುವ; ಅಥವಾ

(ii) ತೈಲವನ್ನು, ನೀರನ್ನು, ಚರಂಡಿ ನೀರನ್ನು ಅಥವಾ ಯಾವುದೇ ಇತರ ಪದಾರ್ಥವನ್ನು ಪಂಪು ಮಾಡುವ; ಅಥವಾ

(iii) ಶಕ್ತಿಯನ್ನು ಉತ್ಪಾದಿಸುವ, ಶಕ್ತಿಯ ಹರಿವನ್ನು ರೂಪಾಂತರಿಸುವ ಅಥವಾ ಪ್ರಸರಣ ಮಾಡುವ; ಅಥವಾ

(iv) ಮುದ್ರಣಕ್ಕಾಗಿ ಅಚ್ಚುಮೊಳೆ ಜೋಡಿಸುವ, ಲೆಟರ್ ಪ್ರೆಸ್‌ನಿಂದ ಮುದ್ರಣ ಮಾಡುವ, ಕಲ್ಲಚ್ಚು ವಿಧಾನದಿಂದ, ಫೋಟೋ ಮುದ್ರಣ ವಿಧಾನದಿಂದ ಅಥವಾ ಇತರ ಅಂಥದೇ ಪ್ರಕ್ರಿಯೆಯಿಂದ ಮುದ್ರಣ ಮಾಡುವ ಅಥವಾ ಪುಸ್ತಕವನ್ನು ಬೈಂಡ್ ಮಾಡುವ; ಅಥವಾ

(v) ಹಡಗುಗಳನ್ನು ಅಥವಾ ನೌಕೆಗಳನ್ನು ನಿರ್ಮಿಸುವ, ಪುನರ್ ನಿರ್ಮಿಸುವ, ದುರಸ್ತಿ ಮಾಡುವ, ಪುನಃ ಜೋಡಿಸುವ, ಒಪ್ಪಮಾಡುವ ಅಥವಾ ಒಡೆದುಹಾಕುವ; ಅಥವಾ

(vi) ಶೈತ್ಯಾಗಾರದಲ್ಲಿ ಯಾವುದೇ ವಸ್ತುವನ್ನು ಸಂರಕ್ಷಿಸುವ ಅಥವಾ ದಾಸ್ತಾನು ಮಾಡುವ

– ಬಗೆಗಿನ ಯಾವುದೇ ಪ್ರಕ್ರಿಯೆ;

(ಎಲ್) "ಕೆಲಸಗಾರ" ಎಂದರೆ ಯಾವುದೇ ತಯಾರಿಕಾ ಪ್ರಕ್ರಿಯೆಯಲ್ಲಿ ಅಥವಾ ಯಂತ್ರೋಪಕರಣದ ಯಾವುದೇ ಭಾಗವನ್ನು ಅಥವಾ ತಯಾರಿಕಾ ಪ್ರಕ್ರಿಯೆಗಾಗಿ ಬಳಸಿದ ಆವರಣವನ್ನು ಸ್ವಚ್ಛಗೊಳಿಸಲು ಅಥವಾ ತಯಾರಿಕಾ ಪ್ರಕ್ರಿಯೆಗೆ ಅಥವಾ ತಯಾರಿಕಾ ಪ್ರಕ್ರಿಯೆಯ ವಿಷಯಕ್ಕೆ ಪ್ರಾಸಂಗಿಕವಾದ ಅಥವಾ ಅದಕ್ಕೆ ಸಂಬಂಧಪಟ್ಟ ಯಾವುದೇ ಇತರ ಬಗೆಯ ಕೆಲಸದಲ್ಲಿ ಪರಿಶ್ರಮಧನಕ್ಕಾಗಿ ಅಥವಾ ಅದಿಲ್ಲದೇ ನೇರವಾಗಿ ಅಥವಾ (ಗುತ್ತಿಗೆದಾರನನ್ನು ಒಳಗೊಂಡು) ಯಾವುದೇ ಏಜೆನ್ಸಿಯಿಂದ ಅಥವಾ ಅದರ ಮೂಲಕ ಪ್ರಧಾನ ನಿಯೋಜಕನಿಗೆ ಗೊತ್ತಿದ್ದು ಅಥವಾ ಗೊತ್ತಿಲ್ಲದೆ ನಿಯೋಜಿತನಾದ ವ್ಯಕ್ತಿ. ಆದರೆ, ಅದು, ಒಕ್ಕೂಟದ ಸಶಸ್ತ್ರ ಬಲಗಳ ಯಾರೇ ಸದಸ್ಯನನ್ನು ಒಳಗೊಳ್ಳುವುದಿಲ್ಲ.

(ಎಂ) "ಕಾರ್ಖಾನೆ" ಎಂದರೆ ಪ್ರಾಕಾರಗಳೂ ಸೇರಿದಂತೆ ಯಾವ ಆವರಣಗಳಲ್ಲಿ,-

(i) ಹತ್ತು ಅಥವಾ ಹೆಚ್ಚು ಕೆಲಸಗಾರರು ಕೆಲಸ ಮಾಡುತ್ತಿರುವರೋ ಅಥವಾ ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿವಸದಂದು ಕೆಲಸ ಮಾಡುತ್ತಿದ್ದರೋ ಮತ್ತು ಅದರ ಯಾವುದೇ ಭಾಗದಲ್ಲಿ ಶಕ್ತಿಯ ನೆರವಿನಿಂದ ತಯಾರಿಕಾ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೋ ಅಥವಾ ಸಾಮಾನ್ಯವಾಗಿ ಹಾಗೆ ನಡೆಸಲಾಗುವುದೋ; ಅಥವಾ

(ii) ಇಪ್ಪತ್ತು ಅಥವಾ ಹೆಚ್ಚು ಕೆಲಸಗಾರರು ಕೆಲಸ ಮಾಡುತ್ತಿರುವರೋ ಅಥವಾ ಹಿಂದಿನ ಹನ್ನೆರಡು ತಿಂಗಳುಗಳ ಯಾವುದೇ ದಿವಸದಂದು ಕೆಲಸ ಮಾಡುತ್ತಿದ್ದರೋ ಮತ್ತು ಅದರ ಯಾವುದೇ ಭಾಗದಲ್ಲಿ ಶಕ್ತಿಯ ನೆರವಿಲ್ಲದೇ ತಯಾರಿಕಾ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆಯೋ ಅಥವಾ ಸಾಮಾನ್ಯವಾಗಿ ಹಾಗೆ ನಡೆಸಲಾಗುವುದೋ

– ಆ ಯಾವುವೇ ಆವರಣಗಳು.

ಆದರೆ, ಗಣಿಗಳ ಅಧಿನಿಯಮ, 1952 (1952ರ 35)ರ ಜಾರಿಗೆ ಒಳಪಟ್ಟಿರುವ, ಗಣಿಯನ್ನು ಅಥವಾ ಒಕ್ಕೂಟದ ಸಶಸ್ತ್ರ ಬಲಗಳಿಗೆ ಸೇರಿದ ಸಂಚಾರಿ ಘಟಕವನ್ನು, ರೈಲ್ವೆ ರನ್ನಿಂಗ್ ಶೆಡ್‌ನ್ನು ಅಥವಾ ಹೋಟೆಲನ್ನು, ಉಪಹಾರ ಗೃಹವನ್ನು ಅಥವಾ ಭೋಜನ ಗೃಹವನ್ನು ಅದು ಒಳಗೊಳ್ಳುವುದಿಲ್ಲ.

**ವಿವರಣೆ – I:** ಈ ಖಂಡದ ಉದ್ದೇಶಗಳಿಗಾಗಿ, ಕೆಲಸಗಾರರ ಸಂಖ್ಯೆಯನ್ನು ಲೆಕ್ಕ ಹಾಕುವುದಕ್ಕಾಗಿ ಒಂದು ದಿವಸದಲ್ಲಿ ಬೇರೆ ಬೇರೆ ಗುಂಪುಗಳಲ್ಲಿನ ಮತ್ತು ಸರದಿ ತಂಡಗಳಲ್ಲಿನ ಎಲ್ಲ ಕೆಲಸಗಾರರನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

**ವಿವರಣೆ – II:** ಈ ಖಂಡದ ಉದ್ದೇಶಗಳಿಗಾಗಿ, ಯಾವುದೇ ಆವರಣದಲ್ಲಿ ಅಥವಾ ಅದರ ಭಾಗದಲ್ಲಿ ವಿದ್ಯುನ್ಮಾನ ದತ್ತಾಂಶ ಸಂಸ್ಕರಣಾ ಘಟಕವನ್ನು ಅಥವಾ ಗಣಕ ಯಂತ್ರ ಘಟಕವನ್ನು ಸ್ಥಾಪಿಸಲಾಗಿದೆ ಎಂಬ ಸಂಗತಿ ಮಾತ್ರದಿಂದಲೇ ಅಂಥ ಆವರಣದಲ್ಲಿ ಅಥವಾ ಅದರ ಭಾಗದಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆ ನಡೆಯುತ್ತಿರದಿದ್ದರೆ, ಅದನ್ನು ಕಾರ್ಖಾನೆಯೆಂದು ಅರ್ಥೈಸತಕ್ಕದ್ದಲ್ಲ.

(ಎನ್) ಕಾರ್ಖಾನೆಯ "ಅಧಿಭೋಗದಾರ" ಎಂದರೆ ಕಾರ್ಖಾನೆಯ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿ:

ಪರಂತು,–

(i) ಫರ್ಮ್ ಅಥವಾ ವ್ಯಕ್ತಿಗಳ ಇತರ ಸಂಘದ ಸಂದರ್ಭದಲ್ಲಿ, ಅದರ ಯಾರೇ ಒಬ್ಬ ಪಾಲುದಾರನನ್ನು ಅಥವಾ ಸದಸ್ಯನನ್ನು ಅಧಿಭೋಗದಾರನೆಂದು ಭಾವಿಸತಕ್ಕದ್ದು;

(ii) ಕಂಪನಿಯ ಸಂದರ್ಭದಲ್ಲಿ, ಯಾರೇ ನಿರ್ದೇಶಕನನ್ನು ಅಧಿಭೋಗದಾರನೆಂದು ಭಾವಿಸತಕ್ಕದ್ದು;

(iii) ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಕಾರ್ಖಾನೆಯ ಸಂದರ್ಭದಲ್ಲಿ, ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ ಅಥವಾ ಸಂದರ್ಭಾನುಸಾರ ಸ್ಥಳೀಯ ಪ್ರಾಧಿಕಾರದಿಂದ, ಕಾರ್ಖಾನೆಯ ವ್ಯವಹಾರಗಳನ್ನು ನೋಡಿಕೊಳ್ಳಲು ನೇಮಕಗೊಂಡ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಅಧಿಭೋಗದಾರರೆಂದು ಭಾವಿಸತಕ್ಕದ್ದು:

ಮತ್ತೂ ಪರಂತು, ಬಾಡಿಗೆಗಾಗಿ ಲಭ್ಯವಿರುವಂಥ ಒಣ ಹಡಗು ಕಟ್ಟೆಯಲ್ಲಿ ಯಾವ ಹಡಗಿನ ದುರಸ್ತಿ ಆಗುತ್ತಿದೆಯೋ ಅಥವಾ ಯಾವ ಹಡಗಿನ ಮೇಲೆ ಸುಸ್ಥಿತಿ ಕಾಮಗಾರಿಗಳನ್ನು ನಡೆಸಲಾಗುತ್ತಿದೆಯೋ ಆ ಯಾವುದೇ ಹಡಗಿನ ಸಂದರ್ಭದಲ್ಲಿ,–

(1) ಆ ಹಡಗು ಕಟ್ಟೆಯ ಒಡೆಯನನ್ನು,–

(ಎ) 6ನೇ ಪ್ರಕರಣದ, 7ನೇ ಪ್ರಕರಣದ, 7ಎ ಪ್ರಕರಣದ, 7ಬಿ ಪ್ರಕರಣದ, 11ನೇ ಪ್ರಕರಣದ ಅಥವಾ 12ನೇ ಪ್ರಕರಣದ;

(ಬಿ) ಆ ಹಡಗು ಕಟ್ಟೆಯಲ್ಲಿ ಅಥವಾ ಅದರ ಸುತ್ತಮುತ್ತ ಸಾಕಷ್ಟು ಸಮಯ ಸೂಕ್ತ ದೀಪದ ವ್ಯವಸ್ಥೆಯನ್ನು ಒದಗಿಸುವುದಕ್ಕೆ ಮತ್ತು ಸುಸ್ಥಿತಿಯಲ್ಲಿಡುವುದಕ್ಕೆ 17ನೇ ಪ್ರಕರಣವು ಸಂಬಂಧಪಡುವಷ್ಟರಮಟ್ಟಿಗೆ ಆ 17ನೇ ಪ್ರಕರಣದ;

(ಸಿ) ಅಂಥ ದುರಸ್ತಿಗಾಗಿ ಅಥವಾ ಸುಸ್ಥಿತಿ ಕಾಮಗಾರಿಗಾಗಿ ನಿಯೋಜಿತರಾದ ಕೆಲಸಗಾರರಿಗೆ ಸಂಬಂಧಪಟ್ಟಂತೆ 18ನೇ ಪ್ರಕರಣದ, 19ನೇ ಪ್ರಕರಣದ, 42ನೇ ಪ್ರಕರಣದ, 46ನೇ ಪ್ರಕರಣದ, 47ನೇ ಪ್ರಕರಣದ ಅಥವಾ 49ನೇ ಪ್ರಕರಣದ

– ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ಯಾವುದೇ ವಿಷಯದ ಉದ್ದೇಶಗಳಿಗಾಗಿ ಅಧಿಭೋಗದಾರನೆಂದು ಭಾವಿಸತಕ್ಕದ್ದು.

(2) ಹಡಗಿನ ಒಡೆಯನನ್ನು ಅಥವಾ ಅವನ ಏಜೆಂಟ್‌ನನ್ನು ಅಥವಾ ಮಾಸ್ಟರ್‌ನನ್ನು ಅಥವಾ ಆ ಹಡಗಿನ ಪ್ರಭಾರವನ್ನು ಹೊಂದಿರುವ ಇತರ ಅಧಿಕಾರಿಯನ್ನು ಅಥವಾ ಅಂಥ ಒಡೆಯ, ಏಜೆಂಟ್ ಅಥವಾ ಮಾಸ್ಟರ್ ಅಥವಾ ಆ ಹಡಗಿನ ಪ್ರಭಾರದಲ್ಲಿರುವ ಇತರ ಅಧಿಕಾರಿಯೊಂದಿಗೆ, ದುರಸ್ತಿ ಅಥವಾ ಸುಸ್ಥಿತಿ ಕಾಮಗಾರಿಯನ್ನು ಮಾಡಲು ಕರಾರು ಮಾಡಿಕೊಳ್ಳುವ ಯಾರೇ ವ್ಯಕ್ತಿಯನ್ನು,–

(ಎ) ಅವನಿಂದ ನೇರವಾಗಿ ಅಥವಾ ಯಾವುದೇ ಏಜೆನ್ಸಿಯಿಂದ ಅಥವಾ ಅದರ ಮೂಲಕ ನಿಯೋಜಿತರಾದ ಕೆಲಸಗಾರರಿಗೆ;

(ಬಿ) ಅಂಥ ಒಡೆಯನು, ಏಜೆಂಟ್‌ನು, ಮಾಸ್ಟರ್ ಅಥವಾ ಆ ಹಡಗಿನ ಪ್ರಭಾರವನ್ನು ಹೊಂದಿರುವ ಇತರ ಅಧಿಕಾರಿಯು ಅಥವಾ ವ್ಯಕ್ತಿಯು ಅಂಥ ದುರಸ್ತಿ ಅಥವಾ ಸುಸ್ಥಿತಿ ಕಾಮಗಾರಿಯನ್ನು ಮಾಡುವ ಉದ್ದೇಶಕ್ಕಾಗಿ ಬಳಕೆಯಲ್ಲಿರುವ ಯಂತ್ರೋಪಕರಣಕ್ಕೆ, ಸ್ಥಿರಯಂತ್ರಕ್ಕೆ ಅಥವಾ ಆವರಣಕ್ಕೆ

– ಸಂಬಂಧಪಟ್ಟಂತೆ 13ನೇ ಪ್ರಕರಣದ, 14ನೇ ಪ್ರಕರಣದ, 16ನೇ ಪ್ರಕರಣದ ಅಥವಾ 17ನೇ ಪ್ರಕರಣದ (ಈ ಪರಂತುಕದಲ್ಲಿ ಅನ್ಯಥಾ ಉಪಬಂಧಿಸಿರುವಂತೆ ಹೊರತು) ಅಥವಾ IVನೇ ಅಧ್ಯಾಯದ (27ನೇ ಪ್ರಕರಣವನ್ನು ಹೊರತುಪಡಿಸಿ) ಅಥವಾ 43ನೇ ಪ್ರಕರಣದ, 44ನೇ ಪ್ರಕರಣದ ಅಥವಾ 45ನೇ ಪ್ರಕರಣದ, VIನೇ ಅಧ್ಯಾಯದ, VIIನೇ ಅಧ್ಯಾಯದ, VIIIನೇ ಅಧ್ಯಾಯದ ಅಥವಾ IXನೇ ಅಧ್ಯಾಯದ ಅಥವಾ 108ನೇ ಪ್ರಕರಣದ, 109ನೇ ಪ್ರಕರಣದ, 110ನೇ ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ಉಪಬಂಧಿಸಿದ ಯಾವುದೇ ವಿಷಯದ ಉದ್ದೇಶಗಳಿಗಾಗಿ ಅಧಿಭೋಗದಾರನೆಂದು ಭಾವಿಸತಕ್ಕದ್ದು.

(ಒ) [X X X]

(ಪಿ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಕ್ಯೂ) [X X X]

(ಆರ್) ದಿವಸದ ಬೇರೆ ಬೇರೆ ಅವಧಿಗಳಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರ ಎರಡು ಅಥವಾ ಹೆಚ್ಚು ಕೆಲಸಗಾರರ ಗುಂಪುಗಳು, ಒಂದೇ ಬಗೆಯ ಕೆಲಸವನ್ನು ಮಾಡುತ್ತಿದ್ದರೆ, ಅಂಥ ಪ್ರತಿಯೊಂದು ಗುಂಪನ್ನು "ತಂಡ ಅಥವಾ ಸರದಿ ತಂಡ" ಎಂದು ಕರೆಯಲಾಗುವುದು ಮತ್ತು ಅಂಥ ಪ್ರತಿಯೊಂದು ಅವಧಿಯನ್ನು "ಪಾಳಿ" ಎಂದು ಕರೆಯಲಾಗುವುದು.

**3. ದಿವಸದ ಸಮಯಕ್ಕೆ ಉಲ್ಲೇಖಗಳು.**– ಈ ಅಧಿನಿಯಮದಲ್ಲಿ ದಿವಸದ ಕಾಲಮಾನಕ್ಕೆ ಮಾಡಿದ ಉಲ್ಲೇಖಗಳು, ಗ್ರಿನಿಚ್ ಮೀನ್ ಟೈಂಗೆ ಐದೂವರೆ ಗಂಟೆಗಳಷ್ಟು ಮುಂದೆ ಇರುವ ಭಾರತೀಯ ಕಾಲಮಾನಕ್ಕೆ ಮಾಡಿದ ಉಲ್ಲೇಖಗಳಾಗಿರುತ್ತವೆ:

ಪರಂತು, ಭಾರತೀಯ ಕಾಲಮಾನವನ್ನು ಸಾಮಾನ್ಯವಾಗಿ ಯಾವ ಪ್ರದೇಶದಲ್ಲಿ ಅನುಸರಿಸುತ್ತಿಲ್ಲವೋ ಆ ಯಾವುದೇ ಪ್ರದೇಶಕ್ಕಾಗಿ ರಾಜ್ಯ ಸರ್ಕಾರವು,–

(ಎ) ಆ ಪ್ರದೇಶವನ್ನು ನಿರ್ದಿಷ್ಟಪಡಿಸಿ;

(ಬಿ) ಆ ಪ್ರದೇಶದಲ್ಲಿ ಸಾಮಾನ್ಯವಾಗಿ ಅನುಸರಿಸುತ್ತಿರುವ ಲೋಕಲ್ ಮೀನ್‌ಟೈಮ್‌ನ್ನು ನಿರ್ಧರಿಸಿ; ಮತ್ತು

(ಸಿ) ಆ ಪ್ರದೇಶದಲ್ಲಿರುವ ಎಲ್ಲಾ ಕಾರ್ಖಾನೆಗಳಲ್ಲಿ ಅಥವಾ ಯಾವುದೇ ಕಾರ್ಖಾನೆಯಲ್ಲಿ ಅನುಸರಿಸಬೇಕಾದಂಥ ವೇಳೆಯನ್ನು ಅನುಮತಿಸಿ

– ನಿಯಮಗಳನ್ನು ರಚಿಸಬಹುದು.

**4. ಬೇರೆ ಬೇರೆ ವಿಭಾಗಗಳನ್ನು ಪ್ರತ್ಯೇಕ ಕಾರ್ಖಾನೆಯೆಂದು ಅಥವಾ ಎರಡು ಅಥವಾ ಹೆಚ್ಚು ಕಾರ್ಖಾನೆಗಳನ್ನು ಒಂದೇ ಕಾರ್ಖಾನೆಯೆಂದು ಘೋಷಿಸಲು ಅಧಿಕಾರ.**– ರಾಜ್ಯ ಸರ್ಕಾರವು, ತಾನಾಗಿಯೇ ಅಥವಾ ಆ ಬಗ್ಗೆ ಅಧಿಭೋಗದಾರನು ಲಿಖಿತ ಅರ್ಜಿ ಸಲ್ಲಿಸಿದಾಗ, ಆದೇಶದ ಮೂಲಕ ಮತ್ತು ಸೂಕ್ತವೆಂದು ತಾನು ಭಾವಿಸುವಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉದ್ದೇಶಗಳಿಗಾಗಿ, ಆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅಧಿಭೋಗದಾರನ ಕಾರ್ಖಾನೆಯ ಬೇರೆ ಬೇರೆ ವಿಭಾಗಗಳನ್ನು ಅಥವಾ ಶಾಖೆಗಳನ್ನು ಪ್ರತ್ಯೇಕ ಕಾರ್ಖಾನೆಗಳೆಂದು ಪರಿಗಣಿಸತಕ್ಕದ್ದೆಂದು ಅಥವಾ ಆ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಅಧಿಭೋಗದಾರನ ಎರಡು ಅಥವಾ ಹೆಚ್ಚು ಕಾರ್ಖಾನೆಗಳನ್ನು ಒಂದೇ ಕಾರ್ಖಾನೆ ಎಂದು ಪರಿಗಣಿಸತಕ್ಕದ್ದೆಂದು ನಿರ್ದೇಶಿಸಬಹುದು:

ಪರಂತು, ಅಧಿಭೋಗದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ಹೊರತು ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ತಾನಾಗಿಯೇ ಯಾವುದೇ ಆದೇಶ ಮಾಡತಕ್ಕದ್ದಲ್ಲ.

**5. ಸಾರ್ವಜನಿಕ ತುರ್ತುಪರಿಸ್ಥಿತಿಯ ಅವಧಿಯಲ್ಲಿ ವಿನಾಯಿತಿ ನೀಡಲು ಅಧಿಕಾರ.**– ಸಾರ್ವಜನಿಕ ತುರ್ತುಪರಿಸ್ಥಿತಿಯ ಯಾವುದೇ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ, ಅಧಿಸೂಚನೆ ಮೂಲಕ, ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ 67ನೇ ಪ್ರಕರಣದ ಉಪಬಂಧಗಳನ್ನು ಹೊರತುಪಡಿಸಿ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳು ಅನ್ವಯವಾಗದಂತೆ, ಸೂಕ್ತವೆಂದು ತಾನು ಆಲೋಚಿಸಬಹುದಾದಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ವಿನಾಯಿತಿ ನೀಡಬಹುದು:

ಪರಂತು, ಅಂಥ ಯಾವುದೇ ಅಧಿಸೂಚನೆಯನ್ನು ಒಂದು ಬಾರಿಗೆ ಮೂರು ತಿಂಗಳುಗಳಿಗೆ ಮೀರಿದ ಅವಧಿಗಾಗಿ ಮಾಡತಕ್ಕದ್ದಲ್ಲ.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ "ಸಾರ್ವಜನಿಕ ತುರ್ತುಪರಿಸ್ಥಿತಿ" ಎಂದರೆ ಯುದ್ಧದಿಂದಾಗಲಿ ಅಥವಾ ಬಾಹ್ಯ ಆಕ್ರಮಣದಿಂದಾಗಲಿ ಅಥವಾ ಆಂತರಿಕ ಗಲಭೆಯಿಂದಾಗಲಿ ಭಾರತದ ಅಥವಾ ಅದರ ರಾಜ್ಯಕ್ಷೇತ್ರದ ಯಾವುದೇ ಭಾಗದ ಭದ್ರತೆಗೆ ಬೆದರಿಕೆ ಉಂಟಾಗಿದೆಯೋ ಆ ಗಂಭೀರ ತುರ್ತುಪರಿಸ್ಥಿತಿ ಎಂದು ಅರ್ಥ.

**6. ಕಾರ್ಖಾನೆಗಳಿಗೆ ಅನುಮೋದನೆ, ಲೈಸೆನ್ಸ್ ನೀಡುವುದು ಮತ್ತು ಅವುಗಳ ನೋಂದಣಿ.**– (1) ರಾಜ್ಯ ಸರ್ಕಾರವು,–

(ಎ) ಈ ಅಧಿನಿಯಮದ ಉದ್ದೇಶಗಳಿಗಾಗಿ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳ ನಕ್ಷೆಗಳನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಅಥವಾ ರಾಜ್ಯ ಸರ್ಕಾರಕ್ಕೆ ಒಪ್ಪಿಸಬೇಕೆಂದು ಅಗತ್ಯಪಡಿಸುವ;

(ಎಎ) ಕಾರ್ಖಾನೆಯು ಯಾವ ನಿವೇಶನದಲ್ಲಿ ಇರಬೇಕೋ ಆ ನಿವೇಶನಕ್ಕಾಗಿ ಮತ್ತು ಯಾವುದೇ ಕಾರ್ಖಾನೆಯ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳ ನಿರ್ಮಾಣಕ್ಕಾಗಿ ಅಥವಾ ವಿಸ್ತರಣೆಗಾಗಿ

ರಾಜ್ಯ ಸರ್ಕಾರದಿಂದ ಅಥವಾ ಚೀಫ್ ಇನ್ಸ್‌ಪೆಕ್ಟರ್‌ನಿಂದ ಮುಂಚಿತವಾಗಿಯೇ ಲಿಖಿತ ಅನುಮತಿಯನ್ನು ಪಡೆದುಕೊಳ್ಳಬೇಕೆಂದು ಅಗತ್ಯಪಡಿಸುವ;

(ಬಿ) ಅಂಥ ಅನುಮತಿಗಾಗಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ನಕ್ಷೆಗಳನ್ನು ಮತ್ತು ತಪಶೀಲುಗಳನ್ನು ಒಪ್ಪಿಸುವಂತೆ ಅಗತ್ಯಪಡಿಸುವ;

(ಸಿ) ಅಂಥ ನಕ್ಷೆಗಳ ಮತ್ತು ತಪಶೀಲುಗಳ ಸ್ವರೂಪವನ್ನು ಮತ್ತು ಯಾರಿಂದ ಅವುಗಳು ಪ್ರಮಾಣಿತವಾಗತಕ್ಕದ್ದು ಎಂಬುದನ್ನು ನಿಯಮಿಸುವ;

(ಡಿ) ಕಾರ್ಖಾನೆಗಳನ್ನು ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳನ್ನು ನೋಂದಣಿ ಮಾಡುವುದನ್ನು ಮತ್ತು ಲೈಸೆನ್ಸ್ ನೀಡುವುದನ್ನು ಅಗತ್ಯಪಡಿಸಿರುವ ಮತ್ತು ಅಂಥ ನೋಂದಣಿಗೆ ಮತ್ತು ಲೈಸೆನ್ಸ್ ನೀಡಿಕೆಗೆ ಮತ್ತು ಲೈಸೆನ್ಸುಗಳ ನವೀಕರಣಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸುವ;

(ಇ) 7ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ನೋಟೀಸನ್ನು ಕೊಟ್ಟ ಹೊರತು, ಯಾವುದೇ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲವೆಂದು ಅಥವಾ ನವೀಕರಿಸತಕ್ಕದ್ದಲ್ಲವೆಂದು ಅಗತ್ಯಪಡಿಸುವ

– ನಿಯಮಗಳನ್ನು ರಚಿಸಬಹುದು.

(2) ಉಪಪ್ರಕರಣ (1)ರ ಖಂಡ (ಬಿ) ಮೇರೆಗೆ ರಚಿಸಿದ ನಿಯಮಗಳ ಮೂಲಕ ಅಗತ್ಯಪಡಿಸಿರುವ ನಕ್ಷೆಗಳೊಂದಿಗೆ ಮತ್ತು ತಪಶೀಲುಗಳೊಂದಿಗೆ, ಆ ಉಪಪ್ರಕರಣದ (ಎಎ) ಖಂಡದಲ್ಲಿ ಉಲ್ಲೇಖಿಸಿದ, ಅನುಮತಿಗಾಗಿ ಸಲ್ಲಿಸಿದ ಅರ್ಜಿಯನ್ನು ನೋಂದಾಯಿತ ಅಂಚೆಯ ಮೂಲಕ ರಾಜ್ಯ ಸರ್ಕಾರಕ್ಕೆ ಅಥವಾ ಚೀಫ್ ಇನ್ಸ್‌ಪೆಕ್ಟರ್‌ನಿಗೆ ಕಳುಹಿಸಿದ್ದರೆ, ಹಾಗೆ ಅದನ್ನು ಕಳುಹಿಸಿದ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ಅರ್ಜಿದಾರನಿಗೆ ಯಾವುದೇ ಆದೇಶವನ್ನು ತಿಳಿಸದೆ ಇದ್ದರೆ, ಆ ಅರ್ಜಿಯಲ್ಲಿ ಕೇಳಿಕೊಂಡಿರುವ ಅನುಮತಿಯು ಮಂಜೂರಾಗಿರುವುದಾಗಿ ಭಾವಿಸತಕ್ಕದ್ದು.

(3) ರಾಜ್ಯ ಸರ್ಕಾರವು ಅಥವಾ ಚೀಫ್ ಇನ್ಸ್‌ಪೆಕ್ಟರ್‌ನು ಕಾರ್ಖಾನೆಯ ನಿವೇಶನಕ್ಕೆ, ನಿರ್ಮಾಣಕ್ಕೆ ಅಥವಾ ವಿಸ್ತರಣೆಗೆ ಅಥವಾ ಕಾರ್ಖಾನೆಯ ನೋಂದಣಿಗೆ ಮತ್ತು ಲೈಸೆನ್ಸು ನೀಡುವುದಕ್ಕೆ ಅನುಮತಿ ಕೊಡಲು ನಿರಾಕರಿಸಿದರೆ ಅರ್ಜಿದಾರನು, ಯಾವ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸಲಾಗುವುದೋ, ಆ ತೀರ್ಮಾನವು ರಾಜ್ಯ ಸರ್ಕಾರದ ತೀರ್ಮಾನವಾಗಿದ್ದರೆ ಅಪೀಲನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಯಾವುದೇ ಇತರ ಸಂದರ್ಭದಲ್ಲಿ ಅಪೀಲನ್ನು ರಾಜ್ಯ ಸರ್ಕಾರಕ್ಕೆ, ಹಾಗೆ ನಿರಾಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳ ಒಳಗಾಗಿ ಸಲ್ಲಿಸಬಹುದು.

**ವಿವರಣೆ** :– ಕಾರ್ಖಾನೆಯನ್ನು, ಅದರಲ್ಲಿ ಯಾವುದೇ ಸ್ಥಿರಯಂತ್ರವನ್ನು ಅಥವಾ ಯಂತ್ರೋಪಕರಣವನ್ನು ಬದಲಾಯಿಸಿದ ಅಥವಾ ನಿಯಮಿಸಬಹುದಾದಂಥ ಪರಿಮಿತಿಗಳೊಳಗೆ ಯಾವುದೇ ಸ್ಥಿರಯಂತ್ರದ ಅಥವಾ ಯಂತ್ರೋಪಕರಣದ ಹೆಚ್ಚಳ ಆಗಿದೆಯೆಂಬ ಕಾರಣ ಮಾತ್ರದಿಂದಲೇ, ಅಂಥ ಬದಲಾವಣೆಯಿಂದ ಅಥವಾ ಹೆಚ್ಚಳದಿಂದ ಆ ಸ್ಥಿರಯಂತ್ರದ ಅಥವಾ ಯಂತ್ರೋಪಕರಣದ ಸುತ್ತಮುತ್ತ ಸುರಕ್ಷಿತವಾಗಿ ಕೆಲಸ ಮಾಡುವುದಕ್ಕೆ ಅಗತ್ಯವಿರುವ ಕನಿಷ್ಠ ಮುಕ್ತ ಜಾಗ ಕಡಿಮೆ ಆಗದಿದ್ದರೆ ಅಥವಾ ಆರೋಗ್ಯಕ್ಕೆ ಹಾನಿಕಾರಕವಾದ ಆವಿ, ಶಾಖ ಅಥವಾ ಧೂಳು ಅಥವಾ ಹೊಗೆ ಹೊರಬರುವುದರಿಂದ ಅಥವಾ ಹೊರಸೂಸುವುದರಿಂದ ಪರಿಸರದ ಸ್ಥಿತಿಗಳಿಗೆ ಪ್ರತಿಕೂಲ ಪರಿಣಾಮವನ್ನು ಉಂಟುಮಾಡದಿದ್ದರೆ, ಈ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ವಿಸ್ತರಣೆ ಆಗಿರುವುದಾಗಿ ಭಾವಿಸತಕ್ಕದ್ದಲ್ಲ.

**7. ಅಧಿಭೋಗದಾರನಿಂದ ನೋಟೀಸು.**– (1) ಅಧಿಭೋಗದಾರನು, ಯಾವುದೇ ಆವರಣವನ್ನು ಕಾರ್ಖಾನೆಯಂತೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಥವಾ ಅದನ್ನು ಬಳಸಲು ಪ್ರಾರಂಭಿಸುವುದಕ್ಕೆ ಕನಿಷ್ಠ ಹದಿನೈದು ದಿವಸಗಳ ಮುಂಚೆ,–

(ಎ) ಕಾರ್ಖಾನೆಯ ಹೆಸರನ್ನು ಮತ್ತು ಅದಿರುವ ಸ್ಥಳವನ್ನು;

(ಬಿ) ತನ್ನ ಹೆಸರನ್ನು ಮತ್ತು ವಿಳಾಸವನ್ನು;

(ಬಿಬಿ) 93ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆವರಣದ ಅಥವಾ ಕಟ್ಟಡದ (ಅದರ ಪ್ರಾಕಾರಗಳನ್ನು ಒಳಗೊಂಡು) ಒಡೆಯನ ಹೆಸರನ್ನು ಮತ್ತು ವಿಳಾಸವನ್ನು;

(ಸಿ) ಕಾರ್ಖಾನೆಗೆ ಸಂಬಂಧಿಸಿದ ಕಾಗದಪತ್ರಗಳನ್ನು ಯಾವ ವಿಳಾಸಕ್ಕೆ ಕಳುಹಿಸಬಹುದೋ ಆ ವಿಳಾಸವನ್ನು;

(ಡಿ) ತಯಾರಿಕಾ ಪ್ರಕ್ರಿಯೆಯ ಸ್ವರೂಪವನ್ನು ಎಂದರೆ,–

(i) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಕಾರ್ಖಾನೆಗಳ ಸಂದರ್ಭದಲ್ಲಿ ಹಿಂದಿನ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಕಾರ್ಖಾನೆಯಲ್ಲಿ ನಡೆಸಲಾದ; ಮತ್ತು

(ii) ಎಲ್ಲ ಕಾರ್ಖಾನೆಗಳ ಸಂದರ್ಭದಲ್ಲಿ ಮುಂದಿನ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಕಾರ್ಖಾನೆಯಲ್ಲಿ ನಡೆಸಲಾಗುವ

– ತಯಾರಿಕಾ ಪ್ರಕ್ರಿಯೆಯ ಸ್ವರೂಪವನ್ನು;

(ಇ) ಕಾರ್ಖಾನೆಯಲ್ಲಿ ಸ್ಥಾಪಿಸಿದ ಅಥವಾ ಸ್ಥಾಪಿಸಬೇಕಾದ, ಒಟ್ಟು ನಿಗದಿತ ಅಶ್ವಶಕ್ತಿಯು, ತಕ್ಷಣದ ಬಳಕೆಗೆ ಸಿದ್ಧವಾಗಿರುವ ಯಾವುದೇ ಪ್ರತ್ಯೇಕ ಸ್ಥಿರ ಯಂತ್ರದ ನಿಗದಿತ ಅಶ್ವಶಕ್ತಿಯನ್ನು ಒಳಗೊಂಡಿರಬೇಕಾಗಿಲ್ಲವೋ ಆ ಒಟ್ಟು ನಿಗದಿತ ಅಶ್ವಶಕ್ತಿಯನ್ನು;

(ಎಫ್) ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾರ್ಖಾನೆಯ ವ್ಯವಸ್ಥಾಪಕನ ಹೆಸರನ್ನು;

(ಜಿ) ಕಾರ್ಖಾನೆಯಲ್ಲಿ ನಿಯೋಜಿತರಾಗುವ ಸಂಭವವಿರುವ ಕೆಲಸಗಾರರ ಸಂಖ್ಯೆಯನ್ನು;

(ಹೆಚ್) ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಕಾರ್ಖಾನೆಯ ಸಂದರ್ಭದಲ್ಲಿ, ಹಿಂದಿನ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಪ್ರತಿದಿನ ನಿಯೋಜಿತರಾದ ಕೆಲಸಗಾರರ ಸರಾಸರಿ ಸಂಖ್ಯೆಯನ್ನು;

(ಐ) ನಿಯಮಿಸಬಹುದಾದಂಥ ಇತರ ವಿವರಗಳನ್ನು

– ಒಳಗೊಂಡಿರುವ ಲಿಖಿತ ನೋಟೀಸನ್ನು ಚೀಫ್ ಇನ್ಸ್‌ಪೆಕ್ಟರನಿಗೆ ಕಳುಹಿಸತಕ್ಕದ್ದು.

(2) ಮೊದಲ ಬಾರಿಗೆ ಈ ಅಧಿನಿಯಮದ ವ್ಯಾಪ್ತಿಯೊಳಗೆ ಬರುವಂಥ ಎಲ್ಲಾ ಸ್ಥಾಪನೆಗಳಿಗೆ ಸಂಬಂಧಪಟ್ಟಂತೆ, ಅಧಿಭೋಗದಾರನು ಚೀಫ್ ಇನ್ಸ್‌ಪೆಕ್ಟರನಿಗೆ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡ ಲಿಖಿತ ನೋಟೀಸನ್ನು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಕಳುಹಿಸತಕ್ಕದ್ದು.

(3) ಸಾಮಾನ್ಯವಾಗಿ ವರ್ಷದಲ್ಲಿ ಒಂದು ನೂರ ಎಂಬತ್ತು ಕೆಲಸದ ದಿನಗಳಿಗಿಂತ ಕಡಿಮೆ ಇಲ್ಲದ ದಿನಗಳವರೆಗೆ ತಯಾರಿಕಾ ಪ್ರಕ್ರಿಯೆಯಲ್ಲಿ ತೊಡಗಿರುವ ಕಾರ್ಖಾನೆಯು ಕೆಲಸವನ್ನು ಪುನರಾರಂಭಿಸುವುದಕ್ಕೆ ಮುಂಚೆ, (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಒಳಗೊಂಡ ಲಿಖಿತ ನೋಟೀಸನ್ನು, ಕೆಲಸವು ಪ್ರಾರಂಭವಾಗುವ ದಿನಾಂಕಕ್ಕೆ ಕನಿಷ್ಠ ಮೂವತ್ತು ದಿವಸಗಳ ಮುಂಚೆ ಅಧಿಭೋಗದಾರನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಕಳುಹಿಸತಕ್ಕದ್ದು.

(4) ಹೊಸ ವ್ಯವಸ್ಥಾಪಕನು ನೇಮಕವಾದಾಗಲೆಲ್ಲಾ, ಅಧಿಭೋಗದಾರನು ಅಂಥ ವ್ಯಕ್ತಿಯು ಪ್ರಭಾರ ವಹಿಸಿಕೊಂಡ ದಿನಾಂಕದಿಂದ ಏಳು ದಿವಸಗಳೊಳಗೆ ಇನ್ಸ್‌ಪೆಕ್ಟರ್‌ರಿಗೆ ಲಿಖಿತ ನೋಟೀಸನ್ನು ಮತ್ತು ಚೀಫ್ ಇನ್ಸ್‌ಪೆಕ್ಟರ್‌ರಿಗೆ ಅದರ ಪ್ರತಿಯನ್ನು ಕಳುಹಿಸತಕ್ಕದ್ದು.

(5) ಯಾವ ಅವಧಿಗೆ ಯಾರೇ ವ್ಯಕ್ತಿಯನ್ನು ಕಾರ್ಖಾನೆಯ ವ್ಯವಸ್ಥಾಪಕನಾಗಿ ಹೆಸರಿಸಿರುವುದಿಲ್ಲವೋ ಅಥವಾ ಹೆಸರಿಸಿದ ವ್ಯಕ್ತಿಯು ಯಾವ ಅವಧಿಯಲ್ಲಿ ಕಾರ್ಖಾನೆಯ ವ್ಯವಸ್ಥಾಪನೆಯನ್ನು ಮಾಡಲಿಲ್ಲವೋ ಆ ಯಾವುದೇ ಅವಧಿಯಲ್ಲಿ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿರುವುದಾಗಿ ಕಂಡುಬಂದ ಯಾರೇ ವ್ಯಕ್ತಿಯನ್ನು, ಅಥವಾ ಅಂಥ ವ್ಯಕ್ತಿಯು ಕಂಡುಬರದಿದ್ದರೆ ಸ್ವಯಂ ಅಧಿಭೋಗದಾರನನ್ನೇ, ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾರ್ಖಾನೆಯ ವ್ಯವಸ್ಥಾಪಕನೆಂದು ಭಾವಿಸತಕ್ಕದ್ದು.

## ಅಧ್ಯಾಯ – II

## ಪರಿಶೀಲನಾ ಸಿಬ್ಬಂದಿ

**7ಎ. ಅಧಿಭೋಗದಾರನ ಸಾಮಾನ್ಯ ಕರ್ತವ್ಯಗಳು.–** (1) ಪ್ರತಿಯೊಬ್ಬ ಅಧಿಭೋಗದಾರನು ಯುಕ್ತವಾಗಿ ಕಾರ್ಯಸಾಧ್ಯವಿರುವಷ್ಟರಮಟ್ಟಿಗೆ, ಕಾರ್ಖಾನೆಯಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರು, ಕೆಲಸ ಮಾಡುತ್ತಿರುವಾಗ ಅವರ ಆರೋಗ್ಯ, ಸುರಕ್ಷತೆ ಮತ್ತು ಕ್ಷೇಮವನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು.

(2) ಉಪಪ್ರಕರಣ (1)ರ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ಕರ್ತವ್ಯವು ವ್ಯಾಪ್ತವಾಗುವ ಎಲ್ಲ ವಿಷಯಗಳಲ್ಲಿ,–

(ಎ) ಕಾರ್ಖಾನೆಯಲ್ಲಿ ಸ್ಥಿರಯಂತ್ರದ ಮತ್ತು ಕಾರ್ಯಪದ್ಧತಿಯ ಏರ್ಪಾಡು ನಿರ್ವಹಣೆಯು ಸುರಕ್ಷಿತವಾಗಿರುವುದು ಮತ್ತು ಆರೋಗ್ಯಕ್ಕೆ ಅಪಾಯಕಾರಿಯಾಗಿಲ್ಲದಿರುವುದು;

(ಬಿ) ವಸ್ತುಗಳ ಮತ್ತು ಪದಾರ್ಥಗಳ ಬಳಕೆ, ನಿರ್ವಹಣೆ, ಸಂಗ್ರಹಣೆ ಮತ್ತು ಸಾಗಣೆ ಮಾಡುವಾಗ ಸುರಕ್ಷತೆಯನ್ನು ಮತ್ತು ಆರೋಗ್ಯಕ್ಕೆ ಅಪಾಯವಿಲ್ಲದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಕಾರ್ಖಾನೆಯಲ್ಲಿ ಮಾಡಿರುವ ವ್ಯವಸ್ಥೆಗಳು;

(ಸಿ) ಕೆಲಸದ ಮೇಲಿರುವ ಎಲ್ಲಾ ಕೆಲಸಗಾರರ ಆರೋಗ್ಯವನ್ನು ಮತ್ತು ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಅವಶ್ಯಕವಾಗಿರುವಂಥ ಮಾಹಿತಿಗೆ, ಸೂಚನೆಗೆ, ತರಬೇತಿಗೆ ಮತ್ತು ಮೇಲ್ವಿಚಾರಣೆಗೆ ಮಾಡಿರುವ ಏರ್ಪಾಟು;

(ಡಿ) ಕಾರ್ಖಾನೆಯಲ್ಲಿ ಕೆಲಸದ ಎಲ್ಲಾ ಸ್ಥಳಗಳನ್ನು ಸುರಕ್ಷಿತ ಮತ್ತು ಆರೋಗ್ಯಕ್ಕೆ ಅಪಾಯವಿಲ್ಲದಂಥ ಸ್ಥಿತಿಯ ನಿರ್ವಹಣೆ ಮತ್ತು ಸುರಕ್ಷಿತವಾಗಿ ಮತ್ತು ಆರೋಗ್ಯಕ್ಕೆ ಅಪಾಯವಾಗದಂತೆ ಆ ಸ್ಥಳಗಳಿಗೆ ಪ್ರವೇಶಿಸಲು ಅಥವಾ ಅಲ್ಲಿಂದ ಹೊರಬರಲು ಮಾಡಿರುವ ಸಾಧನಗಳ ವ್ಯವಸ್ಥೆ ಮತ್ತು ನಿರ್ವಹಣೆ;

(ಇ) ಕಾರ್ಖಾನೆಯಲ್ಲಿ ಕಾರ್ಮಿಕರಿಗಾಗಿ ಸುರಕ್ಷಿತವಾದ, ಆರೋಗ್ಯಕ್ಕೆ ಅಪಾಯಕಾರಿಯಲ್ಲದ ಮತ್ತು ಕೆಲಸ ಮಾಡುವಾಗ ಅವರ ಕ್ಷೇಮಕ್ಕಾಗಿ ಸೌಲಭ್ಯಗಳಿಗೆ ಮತ್ತು ಏರ್ಪಾಡುಗಳಿಗೆ ಸಂಬಂಧಿಸಿದಂತೆ ಸಮರ್ಪಕವಾಗಿರುವಂಥ ಕೆಲಸದ ಪರಿಸರದ ವ್ಯವಸ್ಥೆಯನ್ನು, ನಿರ್ವಹಣೆಯನ್ನು ಅಥವಾ ಮೇಲ್ವಿಚಾರಣೆ

– ಇವು ಒಳಗೊಂಡಿರತಕ್ಕದ್ದು.

(3) ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಹೊರತು, ಪ್ರತಿಯೊಬ್ಬ ಅಧಿಭೋಗದಾರನು, ಕೆಲಸ ಮಾಡುತ್ತಿರುವ ಕೆಲಸಗಾರರ ಆರೋಗ್ಯಕ್ಕೆ ಮತ್ತು ಸುರಕ್ಷತೆಗೆ ಸಂಬಂಧಿಸಿದ ತನ್ನ ಸಾಮಾನ್ಯ ನೀತಿಯನ್ನು ಮತ್ತು ಆ ನೀತಿಯನ್ನು ಜಾರಿಗೆ ತರುವುದಕ್ಕಾಗಿ ತತ್ಕಾಲದಲ್ಲಿ ಚಾಲ್ತಿಯಲ್ಲಿರುವ ಸಂಘಟನೆಯ ಮತ್ತು ಏರ್ಪಾಡುಗಳ ಬಗ್ಗೆ ಒಂದು ಲಿಖಿತ ಹೇಳಿಕೆಯನ್ನು

ತಯಾರಿಸತಕ್ಕದ್ದು ಮತ್ತು ಸಮುಚಿತವೆಂದು ತಾನು ಭಾವಿಸಿದಾಗ ಆಗಿಂದಾಗ್ಗೆ ಅದನ್ನು ಪರಿಷ್ಕರಿಸತಕ್ಕದ್ದು ಮತ್ತು ಆ ಹೇಳಿಕೆಯನ್ನು ಮತ್ತು ಅದರ ಯಾವುದೇ ಪರಿಷ್ಕರಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಎಲ್ಲಾ ಕೆಲಸಗಾರರ ಗಮನಕ್ಕೆ ತರತಕ್ಕದ್ದು.

7ಬಿ. **ಕಾರ್ಖಾನೆಯಲ್ಲಿ ಬಳಕೆಗಾಗಿ ಇರುವ ವಸ್ತುಗಳಿಗೆ ಮತ್ತು ಪದಾರ್ಥಗಳಿಗೆ ಸಂಬಂಧಿಸಿದಂತೆ, ತಯಾರಕರು, ಮುಂತಾದವರ ಸಾಮಾನ್ಯ ಕರ್ತವ್ಯಗಳು.–** (1) ಯಾವುದೇ ಕಾರ್ಖಾನೆಯಲ್ಲಿ ಬಳಕೆಗಾಗಿ ಯಾವುದೇ ವಸ್ತುವನ್ನು ವಿನ್ಯಾಸಗೊಳಿಸುವ, ತಯಾರಿಸುವ, ಆಮದು ಮಾಡಿಕೊಳ್ಳುವ ಅಥವಾ ಸರಬರಾಜು ಮಾಡುವ ಪ್ರತಿಯೊಬ್ಬ ವ್ಯಕ್ತಿಯು,–

(ಎ) ಯುಕ್ತವಾಗಿ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ, ಹಾಗೆ ವಿನ್ಯಾಸಗೊಳಿಸಿದ ಮತ್ತು ನಿರ್ಮಿಸಿದ ವಸ್ತುವು ಸುರಕ್ಷಿತವಾದುದೆಂಬುದನ್ನು ಮತ್ತು ಕೆಲಸಗಾರರು ಅದನ್ನು ಸಮರ್ಪಕವಾಗಿ ಬಳಕೆ ಮಾಡಿದರೆ ಅವರ ಆರೋಗ್ಯಕ್ಕೆ ಅಪಾಯವಿಲ್ಲವೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳತಕ್ಕದ್ದು;

(ಬಿ) ಖಂಡ (ಎ)ಯ ಉಪಬಂಧಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅವಶ್ಯಕವೆಂದು ಪರ್ಯಾಲೋಚಿಸಬಹುದಾದಂಥ ಪ್ರಯೋಗಗಳನ್ನು ಮತ್ತು ಪರೀಕ್ಷೆಯನ್ನು ನಡೆಸತಕ್ಕದ್ದು ಅಥವಾ ನಡೆಸುವುದಕ್ಕಾಗಿ ವ್ಯವಸ್ಥೆ ಮಾಡತಕ್ಕದ್ದು;

(ಸಿ) ಸಮರ್ಪಕ ಮಾಹಿತಿಯು, ಎಂದರೆ,–

(i) ಯಾವುದೇ ಕಾರ್ಖಾನೆಯಲ್ಲಿ ವಸ್ತುವಿನ ಬಳಕೆಗೆ ಸಂಬಂಧಿಸಿದಂತೆ;

(ii) ಯಾವ ಬಳಕೆಗಾಗಿ ಅದನ್ನು ವಿನ್ಯಾಸಗೊಳಿಸಲಾಗಿದೆಯೋ ಮತ್ತು ಪರೀಕ್ಷಿಸಲಾಗಿದೆಯೋ ಆ ಬಳಕೆ ಬಗ್ಗೆ; ಮತ್ತು

(iii) ಆ ವಸ್ತುವನ್ನು ಬಳಕೆ ಮಾಡಿದಾಗ ಅದು ಸುರಕ್ಷಿತವಾಗಿರುವುದು ಮತ್ತು ಕೆಲಸಗಾರರ ಆರೋಗ್ಯಕ್ಕೆ ಅಪಾಯಕಾರಿಯಾಗಿಲ್ಲವೆಂಬುದನ್ನು ಸುನಿಶ್ಚಿತ ಪಡಿಸಿಕೊಳ್ಳಲು ಅವಶ್ಯಕವಾದ ಯಾವುದೇ ಪರಿಸ್ಥಿತಿಗಳ ಬಗ್ಗೆ

– ಸಮರ್ಪಕ ಮಾಹಿತಿಯು ಲಭ್ಯವಿರುವುದೆಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಅವಶ್ಯಕವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಆ ವಸ್ತುವನ್ನು ಭಾರತದ ಹೊರಗೆ ವಿನ್ಯಾಸಗೊಳಿಸಿದ್ದರೆ ಅಥವಾ ತಯಾರಿಸಿದ್ದರೆ,–

(ಎ) ಆ ವಸ್ತುವು, ಅದನ್ನು ಭಾರತದಲ್ಲಿ ತಯಾರಿಸಿದ್ದಿದ್ದರೆ ಹೇಗೆ ಗುಣಮಟ್ಟಕ್ಕೆ ಅನುಗುಣವಾಗಿರುತ್ತಿತ್ತೋ ಹಾಗೆ ಅದೇ ರೀತಿಯ ಗುಣಮಟ್ಟಕ್ಕೆ ಅನುಗುಣವಾಗಿದೆಯೆಂಬುದನ್ನು;

(ಬಿ) ಆ ವಸ್ತುವಿನ ತಯಾರಿಕೆಗಾಗಿ ಹೊರ ದೇಶದಲ್ಲಿ ಅಳವಡಿಸಿಕೊಳ್ಳಲಾದ ಗುಣಮಟ್ಟಗಳು ಭಾರತದಲ್ಲಿ ಅಳವಡಿಸಿಕೊಳ್ಳಲಾದ ಗುಣಮಟ್ಟಗಳಿಗಿಂತ ಮೇಲ್ಮಟ್ಟದವುಗಳಾಗಿದ್ದರೆ ಆ ವಸ್ತುವು ಅಂಥ ಗುಣಮಟ್ಟಗಳಿಗೆ ಅನುಗುಣವಾಗಿದೆ ಎಂಬುದನ್ನು

– ಗಮನಿಸುವುದು ಆಮದು ಮಾಡಿಕೊಳ್ಳುವವನ ಬಾಧ್ಯತೆಯಾಗಿರತಕ್ಕದ್ದು.

(2) ಯಾವುದೇ ಕಾರ್ಖಾನೆಯಲ್ಲಿ ಬಳಕೆಗಾಗಿ ಯಾವುದೇ ವಸ್ತುವನ್ನು ವಿನ್ಯಾಸಗೊಳಿಸುವ ಅಥವಾ ತಯಾರಿಸುವ ಪ್ರತಿಯೊಬ್ಬ ವ್ಯಕ್ತಿಯು, ಆ ವಿನ್ಯಾಸವು ಅಥವಾ ವಸ್ತುವು ಕೆಲಸಗಾರರ ಆರೋಗ್ಯಕ್ಕೆ ಅಥವಾ ಸುರಕ್ಷತೆಗೆ ಉಂಟುಮಾಡಬಹುದಾದ ಯಾವುದೇ ಅಪಾಯಗಳನ್ನು ಕಂಡುಹಿಡಿಯುವ ಮತ್ತು ಯುಕ್ತವಾಗಿ ಸಾಧ್ಯವಾಗುವಷ್ಟರಮಟ್ಟಿಗೆ ತೊಡೆದುಹಾಕುವ ಅಥವಾ ಕಡಿಮೆ ಮಾಡುವ ದೃಷ್ಟಿಯಿಂದ ಅವಶ್ಯಕ ಸಂಶೋಧನೆಯನ್ನು ನಡೆಸಬಹುದು ಅಥವಾ ನಡೆಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು.

(3) ಉಪಪ್ರಕರಣ (1)ರಲ್ಲಿ ಮತ್ತು (2)ರಲ್ಲಿ ಒಳಗೊಂಡಿರುವ ಯಾವುದನ್ನೂ, ಯಾರೇ ವ್ಯಕ್ತಿಯು ತನ್ನ ಹೊರತು ಅನ್ಯಥಾ ಅಥವಾ ತನ್ನ ಸೂಚನೆ ಮೇರೆಗೆ ಮಾಡಿದ್ದ ಪ್ರಯೋಗವನ್ನು, ಪರೀಕ್ಷೆಯನ್ನು ಅಥವಾ ಸಂಶೋಧನೆಯನ್ನು, ಅವುಗಳ ಫಲಿತಾಂಶಗಳನ್ನು ಆ ಉಪಪ್ರಕರಣಗಳ ಉದ್ದೇಶಗಳಿಗಾಗಿ ತಾನು ಅವಲಂಬಿಸುವುದು ಸಮಂಜಸವೆನಿಸಿದರೆ ಆ ಮಟ್ಟಿಗೆ, ಪುನಃ ಮಾಡಬೇಕೆಂದು ಅಗತ್ಯಪಡಿಸುತ್ತದೆಂದು ಅರ್ಥೈಸತಕ್ಕದ್ದಲ್ಲ.

(4) ಉಪಪ್ರಕರಣ (1)ರ ಮತ್ತು (2)ರ ಮೂಲಕ ಯಾರೇ ವ್ಯಕ್ತಿಯ ಮೇಲೆ ವಿಧಿಸಿದ ಯಾವುದೇ ಕರ್ತವ್ಯವು, ಅವನು ವ್ಯವಹಾರಗಳನ್ನು ನಡೆಸುವಾಗ ಮಾಡಿದ ಕಾರ್ಯಕ್ಕೆ ಮತ್ತು ಅವನ ನಿಯಂತ್ರಣದೊಳಗಿನ ವಿಷಯಗಳಿಗೆ ಮಾತ್ರ ವ್ಯಾಪ್ತವಾಗತಕ್ಕದ್ದು.

(5) ಯಾರೇ ವ್ಯಕ್ತಿಯು ಒಂದು ವಸ್ತುವನ್ನು, ಕೆಲಸಗಾರರು ಆ ವಸ್ತುವನ್ನು ಸರಿಯಾಗಿ ಬಳಸಿದಾಗ ಅದು ಕೆಲಸಗಾರರ ಆರೋಗ್ಯಕ್ಕೆ ಹಾನಿ ಮತ್ತು ಅಪಾಯ ಉಂಟುಮಾಡುವುದಿಲ್ಲವೆಂಬುದನ್ನು, ಸಮಂಜಸವಾಗಿ ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ, ಸುನಿಶ್ಚಿತಪಡಿಸಿಕೊಳ್ಳಲು ಆ ವಸ್ತುವಿನ ಬಳಕೆದಾರನು ಯಾವ ತನ್ನ ಲಿಖಿತ ವಾಗ್ದಾನದಲ್ಲಿ ನಿರ್ದಿಷ್ಟಪಡಿಸಿರುವ ಕ್ರಮಗಳನ್ನು ಕೈಗೊಳ್ಳುವುದಾಗಿ ವಾಗ್ದಾನ ಮಾಡಿರುವನೋ ಆ ಲಿಖಿತ ವಾಗ್ದಾನದ ಆಧಾರದ ಮೇಲೆ ವಿನ್ಯಾಸಗೊಳಿಸಿದ್ದರೆ, ತಯಾರಿಸಿದ್ದರೆ, ಆಮದು ಮಾಡಿಕೊಂಡಿದ್ದರೆ ಅಥವಾ ಸರಬರಾಜು ಮಾಡಿದ್ದರೆ, ಆ ವಸ್ತುವನ್ನು ವಿನ್ಯಾಸಗೊಳಿಸಿರುವ, ತಯಾರಿಸಿರುವ, ಆಮದು ಮಾಡಿಕೊಂಡಿರುವ ಅಥವಾ ಸರಬರಾಜು ಮಾಡಿರುವ ಆ ವ್ಯಕ್ತಿಯನ್ನು, ಆ ವಾಗ್ದಾನವು, ಅದರಲ್ಲಿರುವ ನಿಬಂಧನೆಗಳಿಗೆ ಸೂಕ್ತ ಗಮನ ಕೊಟ್ಟಾಗ, (1)ನೇ ಉಪಪ್ರಕರಣದ (ಎ) ಖಂಡವು ವಿಧಿಸಿರುವ ಕರ್ತವ್ಯದಿಂದ, ಎಷ್ಟರಮಟ್ಟಿಗೆ ಸಮಂಜಸವೋ ಅಷ್ಟರಮಟ್ಟಿಗೆ, ಬಿಡುಗಡೆ ಮಾಡುವ ಪರಿಣಾಮವನ್ನು ಹೊಂದಿರತಕ್ಕದ್ದು.

(6) ಈ ಪ್ರಕರಣದ ಉದ್ದೇಶಗಳಿಗಾಗಿ, ಆ ವಸ್ತುವನ್ನು ವಿನ್ಯಾಸ ಮಾಡಿರುವ, ತಯಾರಿಸಿರುವ, ಆಮದು ಮಾಡಿಕೊಂಡಿರುವ ಅಥವಾ ಸರಬರಾಜು ಮಾಡಿರುವ ವ್ಯಕ್ತಿಯು ಆ ವಸ್ತುವಿಗೆ ಸಂಬಂಧಿಸಿದಂತೆ ನೀಡಿರುವ ಯಾವುದೇ

ಮಾಹಿತಿಯನ್ನು ಅಥವಾ ಸಲಹೆಯನ್ನು ಗಮನಿಸದೆ ಅದನ್ನು ಬಳಕೆ ಮಾಡಿದ್ದರೆ, ಆ ವಸ್ತುವನ್ನು ಯುಕ್ತವಾಗಿ ಬಳಕೆ ಮಾಡಲಾಗಿದೆಯೆಂದು ಪರಿಗಣಿಸತಕ್ಕದ್ದಲ್ಲ.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ "ವಸ್ತು"ವಿನಲ್ಲಿ ಸ್ಥಿರಯಂತ್ರ ಮತ್ತು ಯಂತ್ರೋಪಕರಣಗಳು ಒಳಗೊಳ್ಳತಕ್ಕದ್ದು.

**8. ಇನ್ಸ್‌ಪೆಕ್ಟರ್‌ಗಳು.**– (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ನಿಯಮಿಸಿದ ಅರ್ಹತೆಯನ್ನು ಹೊಂದಿರುವಂಥ ವ್ಯಕ್ತಿಗಳನ್ನು ಇನ್ಸ್‌ಪೆಕ್ಟರ್‌ಗಳನ್ನಾಗಿ ನೇಮಕ ಮಾಡಬಹುದು ಮತ್ತು ಅದು ಸೂಕ್ತವೆಂದು ತಾನು ಭಾವಿಸಬಹುದಾದಂಥ ಸ್ಥಳೀಯ ಪರಿಮಿತಿಗಳನ್ನು ಅವರಿಗಾಗಿ ಗೊತ್ತುಮಾಡಬಹುದು.

(2) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾರೇ ವ್ಯಕ್ತಿಯನ್ನು ಚೀಫ್ ಇನ್ಸ್‌ಪೆಕ್ಟರ್‌ನನ್ನಾಗಿ ನೇಮಕ ಮಾಡಬಹುದು ಅವನು ಈ ಅಧಿನಿಯಮದ ಮೇರೆಗೆ ಚೀಫ್ ಇನ್ಸ್‌ಪೆಕ್ಟರ್‌ನಿಗೆ ಪ್ರದಾನ ಮಾಡಿದ ಅಧಿಕಾರಗಳ ಜೊತೆಗೆ ಇನ್ಸ್‌ಪೆಕ್ಟರ್‌ನ ಅಧಿಕಾರಗಳನ್ನು ರಾಜ್ಯದಾದ್ಯಂತ ಚಲಾಯಿಸತಕ್ಕದ್ದು.

(2ಎ) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಚೀಫ್ ಇನ್ಸ್‌ಪೆಕ್ಟರ್‌ನಿಗೆ ನೆರವಾಗಲು ಮತ್ತು ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಚೀಫ್ ಇನ್ಸ್‌ಪೆಕ್ಟರ್‌ನ ಅಧಿಕಾರಗಳನ್ನು ಚಲಾಯಿಸಲು ಸೂಕ್ತವೆಂದು ತಾನು ಯೋಚಿಸುವಷ್ಟು ಸಂಖ್ಯೆಯ ಅಡಿಷನಲ್ ಚೀಫ್ ಇನ್ಸ್‌ಪೆಕ್ಟರ್‌ಗಳನ್ನು, ಜಾಯಿಂಟ್ ಚೀಫ್ ಇನ್ಸ್‌ಪೆಕ್ಟರ್‌ಗಳನ್ನು ಮತ್ತು ಡೆಪ್ಯುಟಿ ಚೀಫ್ ಇನ್ಸ್‌ಪೆಕ್ಟರ್‌ಗಳನ್ನು ಮತ್ತು ಇತರ ಅಧಿಕಾರಿಗಳನ್ನು ನೇಮಕ ಮಾಡಬಹುದು;

(2ಬಿ) ಉಪಪ್ರಕರಣ (2ಎ)ಯ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಅಡಿಷನಲ್ ಚೀಫ್ ಇನ್ಸ್‌ಪೆಕ್ಟರ್‌ನು, ಜಾಯಿಂಟ್ ಚೀಫ್ ಇನ್ಸ್‌ಪೆಕ್ಟರ್‌ನು, ಡೆಪ್ಯೂಟಿ ಚೀಫ್ ಇನ್ಸ್‌ಪೆಕ್ಟರ್‌ನು ಮತ್ತು ಪ್ರತಿಯೊಬ್ಬ ಇತರ ಅಧಿಕಾರಿಯು, ಅವನನ್ನು ಯಾವ ಅಧಿಸೂಚನೆ ಮೂಲಕ ನೇಮಕ ಮಾಡಲಾಯಿತೋ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅಧಿಕಾರಗಳ ಜೊತೆಗೆ ರಾಜ್ಯದಾದ್ಯಂತ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) ಕಾರ್ಖಾನೆಯಲ್ಲಿ ಅಥವಾ ಅಲ್ಲಿ ನಡೆಸಲಾಗುತ್ತಿರುವ ಯಾವುದೇ ಪ್ರಕ್ರಿಯೆಯಲ್ಲಿ ಅಥವಾ ವ್ಯವಹಾರದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಪೇಟೆಂಟ್‌ನಲ್ಲಿ ಅಥವಾ ಯಂತ್ರೋಪಕರಣದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿರುವ ಅಥವಾ ಹೊಂದುವ ಯಾರೇ ವ್ಯಕ್ತಿಯನ್ನು (1)ನೇ ಉಪಪ್ರಕರಣದ, (2)ನೇ ಉಪಪ್ರಕರಣದ, (2ಎ) ಉಪಪ್ರಕರಣದ ಅಥವಾ (5)ನೇ ಉಪಪ್ರಕರಣದ ಮೇರೆಗೆ ನೇಮಕಮಾಡತಕ್ಕದ್ದಲ್ಲ ಅಥವಾ ಹಾಗೆ ಆತನು ನೇಮಕಗೊಂಡಿದ್ದರೆ ಆತನು ಆ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲ.

(4) ಪ್ರತಿಯೊಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟನು ಅವನ ಜಿಲ್ಲೆಗೆ ಇನ್ಸ್‌ಪೆಕ್ಟರ್ ಆಗಿರತಕ್ಕದ್ದು.

(5) ರಾಜ್ಯ ಸರ್ಕಾರವು ಮೇಲೆ ಹೇಳಿರುವ ಅಧಿಸೂಚನೆಯ ಮೂಲಕ ಸೂಕ್ತವೆಂದು ತಾನು ಯೋಚಿಸುವಂಥ ಸರ್ಕಾರಿ ಅಧಿಕಾರಿಗಳನ್ನು, ಅವರಿಗೆ ಅನುಕ್ರಮವಾಗಿ ಗೊತ್ತುಮಾಡಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಕ್ಕಾಗಿ ಅಡಿಷನಲ್ ಇನ್ಸ್‌ಪೆಕ್ಟರ್‌ಗಳನ್ನಾಗಿ ಸಹ ನೇಮಿಸಬಹುದು.

(6) ಯಾವುದೇ ಪ್ರದೇಶದಲ್ಲಿ ಒಬ್ಬನಿಗಿಂತ ಹೆಚ್ಚು ಇನ್ಸ್‌ಪೆಕ್ಟರ್‌ಗಳು ಇದ್ದರೆ, ರಾಜ್ಯ ಸರ್ಕಾರವು ಮೇಲೆ ಹೇಳಿರುವಂತೆ ಅಧಿಸೂಚನೆಯ ಮೂಲಕ ಅಂಥ ಇನ್ಸ್‌ಪೆಕ್ಟರ್‌ಗಳು ಅನುಕ್ರಮವಾಗಿ ಚಲಾಯಿಸಬೇಕಾದ ಅಧಿಕಾರಗಳನ್ನು ಮತ್ತು ನಿಯಮಿಸಿದ ನೋಟೀಸುಗಳನ್ನು ಯಾವ ಇನ್ಸ್‌ಪೆಕ್ಟರ್‌ನಿಗೆ ಕಳುಹಿಸಬೇಕೆಂಬುದನ್ನು ಘೋಷಿಸಬಹುದು.

(7) ಈ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಚೀಫ್ ಇನ್ಸ್‌ಪೆಕ್ಟರ್‌ನನ್ನು, ಅಡಿಷನಲ್ ಚೀಫ್ ಇನ್ಸ್‌ಪೆಕ್ಟರ್‌ನನ್ನು ಮತ್ತು ಜಾಯಿಂಟ್ ಚೀಫ್ ಇನ್ಸ್‌ಪೆಕ್ಟರ್‌ನನ್ನು, ಡೆಪ್ಯುಟಿ ಚೀಫ್ ಇನ್ಸ್‌ಪೆಕ್ಟರ್‌ನನ್ನು ಮತ್ತು ಇತರ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ (1860ರ 45)ರ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂಬುದಾಗಿ ಭಾವಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರಿಗೆ ಅವರು ಅಧಿಕೃತವಾಗಿ ಅಧೀನರಾಗಿರತಕ್ಕದ್ದು.

**9. ಇನ್ಸ್‌ಪೆಕ್ಟರ್‌ಗಳ ಅಧಿಕಾರಗಳು.**– ಈ ಬಗ್ಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಇನ್ಸ್‌ಪೆಕ್ಟರನು, ಯಾವ ಸ್ಥಳೀಯ ಪರಿಮಿತಿಗಳಿಗಾಗಿ ಅವನನ್ನು ನೇಮಿಸಲಾಗಿದೆಯೋ ಆ ಸ್ಥಳೀಯ ಪರಿಮಿತಿಗಳೊಳಗೆ,–

(ಎ) ಸರ್ಕಾರದ ಅಥವಾ ಯಾವುದೇ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳಾಗಿರುವ, ಸೂಕ್ತವೆಂದು ತಾನು ಯೋಚಿಸುವಂಥ ಸಹಾಯಕರೊಡನೆ ಅಥವಾ ತಜ್ಞರೊಡನೆ, ಕಾರ್ಖಾನೆಯಾಗಿ ಬಳಕೆ ಮಾಡುತ್ತಿರುವಂಥ ಅಥವಾ ಬಳಕೆ ಮಾಡಲಾಗುತ್ತಿದೆ ಎಂದು ತಾನು ನಂಬಲು ಕಾರಣವಿರುವಂಥ ಯಾವುದೇ ಸ್ಥಳವನ್ನು ಪ್ರವೇಶಿಸಬಹುದು;

(ಬಿ) ಆವರಣವನ್ನು, ಸ್ಥಿರಯಂತ್ರವನ್ನು, ಯಂತ್ರೋಪಕರಣವನ್ನು, ವಸ್ತುವನ್ನು ಅಥವಾ ಪದಾರ್ಥವನ್ನು ಪರೀಕ್ಷೆ ಮಾಡಬಹುದು;

(ಸಿ) ಯಾವುದೇ ಅಪಘಾತದ ಅಥವಾ ಅಪಾಯಕಾರಿ ಘಟನೆಯ, ಅದರ ಪರಿಣಾಮವಾಗಿ ದೈಹಿಕ ಕ್ಷತಿ, ಅಂಗವೈಕಲ್ಯ ಆಗಿರಲಿ ಅಥವಾ ಆಗಿರದಿರಲಿ, ಅದರ ವಿಚಾರಣೆ ಮಾಡಬಹುದು ಮತ್ತು ಅಂಥ ವಿಚಾರಣೆಗಾಗಿ ಅವಶ್ಯವೆಂದು ತಾನು ಪರ್ಯಾಲೋಚಿಸಬಹುದಾದಂಥ ಯಾರೇ ವ್ಯಕ್ತಿಯ ಹೇಳಿಕೆಗಳನ್ನು ಸ್ಥಳದಲ್ಲೇ ಅಥವಾ ಅನ್ಯಥಾ ತೆಗೆದುಕೊಳ್ಳಬಹುದು;

(ಡಿ) ಕಾರ್ಖಾನೆಗೆ ಸಂಬಂಧಿಸಿರುವ ಯಾವುದೇ ನಿಯಮಿಸಿದ ರಿಜಿಸ್ಟರನ್ನು ಅಥವಾ ಯಾವುದೇ ಇತರ ದಸ್ತಾವೇಜನ್ನು ಹಾಜರುಪಡಿಸಲು ಅಗತ್ಯಪಡಿಸಬಹುದು;

(ಇ) ಈ ಅಧಿನಿಯಮದ ಮೇರೆಗೆ ಯಾವ ಅಪರಾಧವು ನಡೆದಿದೆಯೆಂದು ತಾನು ನಂಬಲು ಕಾರಣವಿರುವುದೋ ಆ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಅವಶ್ಯಕವೆಂದು ತಾನು ಪರಿಗಣಿಸಬಹುದಾದಂಥ ಯಾವುದೇ ರಿಜಿಸ್ಟರ್‌ನ್ನು, ದಾಖಲೆಯನ್ನು ಅಥವಾ ಇತರ ದಸ್ತಾವೇಜನ್ನು ಅಥವಾ ಅದರ ಯಾವುದೇ ಭಾಗವನ್ನು ವಶಕ್ಕೆ ತೆಗೆದುಕೊಳ್ಳಬಹುದು ಅಥವಾ ಅವುಗಳ ಪ್ರತಿಗಳನ್ನು ತೆಗೆದುಕೊಳ್ಳಬಹುದು;

(ಎಫ್) ಯಾವುದೇ ಆವರಣವನ್ನು ಅಥವಾ ಅದರ ಯಾವುದೇ ಭಾಗವನ್ನು ಅಥವಾ ಅದರಲ್ಲಿರುವ ಯಾವುದೇ ವಸ್ತುವನ್ನು (ಬಿ) ಖಂಡದ ಮೇರೆಗಿನ ಯಾವುದೇ ಪರೀಕ್ಷೆಯ ಉದ್ದೇಶಕ್ಕಾಗಿ ಅವಶ್ಯಕವಾಗಿರುವ ಅವಧಿಯವರೆಗೆ ಯಥಾಸ್ಥಿತಿಯಲ್ಲಿಡತಕ್ಕದ್ದೆಂದು (ಸಾಮಾನ್ಯವಾಗಿಯಾಗಲಿ ಅಥವಾ ನಿರ್ದಿಷ್ಟ ಅಂಶಗಳಿಗೆ ಸಂಬಂಧಿಸಿದಂತೆ) ಅಧಿಭೋಗದಾರನಿಗೆ ನಿರ್ದೇಶಿಸಬಹುದು;

(ಜಿ) ಅಳತೆಗಳನ್ನು ಮತ್ತು ಛಾಯಾಚಿತ್ರಗಳನ್ನು ತೆಗೆದುಕೊಳ್ಳಬಹುದು ಮತ್ತು ಯಾವುದೇ ಅವಶ್ಯಕ ಉಪಕರಣವನ್ನು ಅಥವಾ ಸಾಧನವನ್ನು ತನ್ನೊಂದಿಗೆ ಒಯ್ದು (ಬಿ) ಖಂಡದ ಮೇರೆಗೆ ಯಾವುದೇ ಪರೀಕ್ಷೆಯ ಉದ್ದೇಶಕ್ಕಾಗಿ ಅವಶ್ಯವೆಂದು ತಾನು ಪರ್ಯಾಲೋಚಿಸುವಂಥ ದಾಖಲೆಗಳನ್ನು ತಯಾರಿಸಬಹುದು;

(ಹೆಚ್) ಯಾವುದೇ ಆವರಣದಲ್ಲಿ ಕಂಡುಬಂದ ಯಾವುದೇ ವಸ್ತುವು ಅಥವಾ ಪದಾರ್ಥವು ಕೆಲಸಗಾರರ ಆರೋಗ್ಯಕ್ಕೆ ಅಥವಾ ಸುರಕ್ಷತೆಗೆ ಅಪಾಯ ಉಂಟುಮಾಡುವುದಾಗಿ ಅಥವಾ ಮಾಡುವ ಸಂಭವವಿರುವ ವಸ್ತುವೆಂದು ಅಥವಾ ಪದಾರ್ಥವೆಂದು ಅವನಿಗೆ ಕಂಡುಬಂದರೆ ಆ ವಸ್ತುವನ್ನು ಅಥವಾ ಪದಾರ್ಥವನ್ನು ಬಿಚ್ಚುವಂತೆ ಅಥವಾ ಅದನ್ನು ಯಾವುದೇ ಪ್ರಕ್ರಿಯೆಗೆ ಅಥವಾ ಪರೀಕ್ಷೆಗೆ ಒಳಪಡಿಸುವಂತೆ ನಿರ್ದೇಶಿಸಬಹುದು (ಆದರೆ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅದಕ್ಕೆ ಹಾನಿಯುಂಟು ಮಾಡುವುದು ಅಥವಾ ಅದನ್ನು ನಾಶಪಡಿಸುವುದು ಅವಶ್ಯಕವಾದ ಸನ್ನಿವೇಶಗಳಲ್ಲಿ ಹೊರತು ಅದಕ್ಕೆ ಹಾನಿಯಾಗದಂತೆ ಅಥವಾ ನಾಶವಾಗದಂತೆ) ಮತ್ತು ಯಾವುದೇ ಅಂಥ ವಸ್ತುವನ್ನು ಅಥವಾ ಪದಾರ್ಥವನ್ನು ಅಥವಾ ಅದರ ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಮತ್ತು ಅದನ್ನು ಅಂಥ ಪರೀಕ್ಷೆಗಾಗಿ ಅವಶ್ಯಕವಾಗುವವರೆಗೆ ಇಟ್ಟುಕೊಳ್ಳಬಹುದು;

(ಐ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು:

ಪರಂತು, ಈ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯನ್ನು, ಅವನನ್ನು ಅಪರಾಧದಲ್ಲಿ ಸಿಕ್ಕಿಸಬಹುದಾದಂಥ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಅಥವಾ ಯಾವುದೇ ಸಾಕ್ಷ್ಯವನ್ನು ಕೊಡಲು ಒತ್ತಾಯಿಸತಕ್ಕದ್ದಲ್ಲ.

**10. ಪ್ರಮಾಣೀಕರಿಸುವ ಶಸ್ತ್ರವೈದ್ಯರು.-** (1) ರಾಜ್ಯ ಸರ್ಕಾರವು, ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗರನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವರಿಗೆ ಅನುಕ್ರಮವಾಗಿ ಅದು ಗೊತ್ತುಪಡಿಸಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಅಥವಾ ಅಂಥ ಕಾರ್ಖಾನೆಗಾಗಿ ಅಥವಾ ಅಂಥ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗಾಗಿ ಪ್ರಮಾಣೀಕರಿಸುವ ಶಸ್ತ್ರವೈದ್ಯರಾಗಿರಲು ನೇಮಕ ಮಾಡಬಹುದು.

(2) ಪ್ರಮಾಣೀಕರಿಸುವ ಶಸ್ತ್ರವೈದ್ಯನು ರಾಜ್ಯಸರ್ಕಾರದ ಅನುಮೋದನೆಯೊಂದಿಗೆ ಯಾರೇ ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗನನ್ನು, ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳಲ್ಲಿ ಯಾವುದೇ ಅಧಿಕಾರವನ್ನು, ನಿರ್ದಿಷ್ಟಪಡಿಸಬಹುದಾದಂಥ ಅವಧಿಯವರೆಗೆ ಮತ್ತು ವಿಧಿಸುವುದು ಸೂಕ್ತವೆಂದು ರಾಜ್ಯ ಸರ್ಕಾರವು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಚಲಾಯಿಸಲು ಅಧಿಕೃತಗೊಳಿಸಬಹುದು. ಈ ಅಧಿನಿಯಮದಲ್ಲಿ ಪ್ರಮಾಣೀಕರಿಸುವ ಶಸ್ತ್ರವೈದ್ಯನಿಗೆ ಮಾಡಿದ ಉಲ್ಲೇಖಗಳು, ಹಾಗೆ ಅಧಿಕೃತಗೊಳಿಸಿದಾಗ ಯಾರೇ ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗನಿಗೆ ಮಾಡಿದ ಉಲ್ಲೇಖಗಳನ್ನು ಒಳಗೊಳ್ಳುತ್ತವೆ ಎಂದು ಭಾವಿಸತಕ್ಕದ್ದು.

(3) ಕಾರ್ಖಾನೆಯ ಅಧಿಭೋಗದಾರನಾಗಿರುವ ಅಥವಾ ಅಧಿಭೋಗದಾರನಾಗುವ ಅಥವಾ ಅದರಲ್ಲಿ ನಡೆಸಲಾಗುತ್ತಿರುವ ಯಾವುದೇ ಪ್ರಕ್ರಿಯೆಯಲ್ಲಿ ಅಥವಾ ವ್ಯವಹಾರದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಪೇಟೆಂಟ್‌ನಲ್ಲಿ ಅಥವಾ ಯಂತ್ರೋಪಕರಣದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿದ ಅಥವಾ ಹಿತಾಸಕ್ತಿ ಹೊಂದುವ ಅಥವಾ ಆ ಕಾರ್ಖಾನೆಯಲ್ಲಿ ಅನ್ಯಥಾ ನಿಯೋಜಿತನಾಗಿರುವ ಯಾರೇ ವ್ಯಕ್ತಿಯನ್ನು, ಪ್ರಮಾಣೀಕರಿಸುವ ಶಸ್ತ್ರವೈದ್ಯನಾಗಿರಲು ನೇಮಕ ಮಾಡತಕ್ಕದ್ದಲ್ಲ ಅಥವಾ ಅವನ ಅಧಿಕಾರಗಳನ್ನು ಚಲಾಯಿಸಲು ಅಧಿಕೃತಗೊಳಿಸತಕ್ಕದ್ದಲ್ಲ ಅಥವಾ ಹಾಗೆ ನೇಮಕ ಮಾಡಿದ್ದರೆ ಅಥವಾ ಅಧಿಕೃತಗೊಳಿಸಿದ್ದರೆ ಅವನು ಅಂಥ ಅಧಿಕಾರಗಳನ್ನು ಚಲಾಯಿಸುವುದನ್ನು ಮುಂದುವರೆಸತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು ಲಿಖಿತ ಆದೇಶದ ಮೂಲಕ ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತಿಗೊಳಪಟ್ಟು, ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಈ ಉಪಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಗಳಿಗೆ ವಿನಾಯಿತಿ ನೀಡಬಹುದು.

(4) ಪ್ರಮಾಣೀಕರಿಸುವ ಶಸ್ತ್ರವೈದ್ಯನು,-

(ಎ) ಈ ಅಧಿನಿಯಮದ ಮೇರೆಗೆ ಕಿರಿಯ ವಯಸ್ಸಿನ ವ್ಯಕ್ತಿಗಳ ಪರೀಕ್ಷೆಗೆ ಮತ್ತು ಪ್ರಮಾಣೀಕರಣಕ್ಕೆ;

(ಬಿ) ನಿಯಮಿಸಬಹುದಾದಂಥ ಅಪಾಯಕಾರಿ ಉದ್ಯೋಗಗಳಲ್ಲಿ ಅಥವಾ ಪ್ರಕ್ರಿಯೆಗಳಲ್ಲಿ ಕಾರ್ಖಾನೆಗಳಲ್ಲಿ ತೊಡಗಿರುವಂಥ ವ್ಯಕ್ತಿಗಳ ಪರೀಕ್ಷೆಗೆ;

(ಸಿ) ಯಾವ ಕಾರ್ಖಾನೆಯಲ್ಲಿ ಅಥವಾ ಯಾವ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ,-

(i) ನಡೆಸುತ್ತಿರುವ ತಯಾರಿಕಾ ಪ್ರಕ್ರಿಯೆಯ ಸ್ವರೂಪದಿಂದಾಗಿ ಅಥವಾ ಅಲ್ಲಿ ಇರುವಂಥ ಕೆಲಸದ ಇತರ ಪರಿಸ್ಥಿತಿಗಳಿಂದಾಗಿ ಕಾಯಿಲೆಯ ಯಾವ ಪ್ರಕರಣಗಳು ಉಂಟಾಗಿರುವವೆಂದು ಸಮಂಜಸವಾಗಿ ನಂಬುವುದಕ್ಕೆ ಕಾರಣವಿದ್ದರೆ;

(ii) ನಡೆಸುತ್ತಿರುವ ತಯಾರಿಕಾ ಪ್ರಕ್ರಿಯೆಯಲ್ಲಿ ಅಥವಾ ಬಳಸಿದ ಪದಾರ್ಥಗಳಲ್ಲಿ ಯಾವುದೇ ಬದಲಾವಣೆಯ ಕಾರಣದಿಂದಾಗಿ ಅಥವಾ ಯಾವುದೇ ಹೊಸ ತಯಾರಿಕಾ ಪ್ರಕ್ರಿಯೆಯನ್ನು ಅಥವಾ ತಯಾರಿಕಾ ಪ್ರಕ್ರಿಯೆಯಲ್ಲಿ ಬಳಸುವುದಕ್ಕಾಗಿ ಯಾವುದೇ ಹೊಸ ಪದಾರ್ಥವನ್ನು ಅಳವಡಿಸಿಕೊಂಡಿರುವ ಕಾರಣದಿಂದಾಗಿ ಆ ತಯಾರಿಕಾ ಪ್ರಕ್ರಿಯೆಯಲ್ಲಿ ನಿಯೋಜಿತರಾಗಿರುವ ಕೆಲಸಗಾರರ ಆರೋಗ್ಯಕ್ಕೆ ಹಾನಿಯುಂಟಾಗುವ ಸಂಭವವಿದ್ದರೆ;

(iii) ಕಿರಿಯ ವಯಸ್ಸಿನ ವ್ಯಕ್ತಿಗಳ ಆರೋಗ್ಯಕ್ಕೆ ಹಾನಿಯುಂಟುಮಾಡುವ ಸಂಭವವಿರುವ ಯಾವುದೇ ಕೆಲಸದಲ್ಲಿ ಅವರನ್ನು ನಿಯೋಜಿಸಿಕೊಂಡಿದ್ದರೆ ಅಥವಾ ನಿಯೋಜಿಸಿಕೊಳ್ಳುವುದಿದ್ದರೆ ಆ ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಂಥ ವೈದ್ಯಕೀಯ ಮೇಲ್ವಿಚಾರಣೆಯನ್ನು ನಡೆಸುವುದಕ್ಕೆ, ಸಂಬಂಧಪಟ್ಟಂತೆ ನಿಯಮಿಸಬಹುದಾದಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದಲ್ಲಿ 'ಅರ್ಹತೆ ಪಡೆದ ವೈದ್ಯಕೀಯ ವೃತ್ತಿಗ' ಎಂದರೆ ಭಾರತೀಯ ವೈದ್ಯಕೀಯ ಸ್ನಾತಕ ಪದವಿಗಳ ಅಧಿನಿಯಮ, 1916 (1916ರ 7)ರ ಅನುಸೂಚಿಯಲ್ಲಿ, ಅಥವಾ ಭಾರತೀಯ ವೈದ್ಯಕೀಯ ಪರಿಷತ್ತು ಅಧಿನಿಯಮ, 1933 (1933ರ 27)ರ ಅನುಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಪ್ರದಾನ ಮಾಡಿದ ಅರ್ಹತೆಯನ್ನು ಹೊಂದಿರುವ ವ್ಯಕ್ತಿ.

## ಅಧ್ಯಾಯ – III
## ಆರೋಗ್ಯ

**11. ಸ್ವಚ್ಛತೆ.–** (1) ಪ್ರತಿಯೊಂದು ಕಾರ್ಖಾನೆಯನ್ನು ಸ್ವಚ್ಛವಾಗಿಡತಕ್ಕದ್ದು ಮತ್ತು ಯಾವುದೇ ಚರಂಡಿ, ಕಕ್ಕಸು ಅಥವಾ ಇತರ ಗಲೀಜಿನಿಂದ ಉಂಟಾಗುವ ದುರ್ಗಂಧ ಇಲ್ಲದಂತೆ ಶುದ್ಧವಾಗಿರತಕ್ಕದ್ದು ಮತ್ತು ಅದರಲ್ಲಿ ಮುಖ್ಯವಾಗಿ,–

(ಎ) ಸಂಗ್ರಹವಾಗಿರುವ ಧೂಳನ್ನು ಮತ್ತು ಕಸವನ್ನು ಪ್ರತಿನಿತ್ಯ ಗುಡಿಸಿ ಅಥವಾ ಇತರೆ ಪರಿಣಾಮಕಾರಿ ವಿಧಾನದ ಮೂಲಕ ಕೆಲಸದ ಕೊಠಡಿಗಳ ನೆಲಗಳಿಂದ ಮತ್ತು ಬೆಂಚುಗಳಿಂದ ಮತ್ತು ಮೆಟ್ಟಿಲುಗಳಿಂದ ಮತ್ತು ದಾರಿಗಳಿಂದ ತೆಗೆದುಹಾಕತಕ್ಕದ್ದು ಮತ್ತು ಸೂಕ್ತ ರೀತಿಯಲ್ಲಿ ಅದನ್ನು ವಿಲೆ ಮಾಡತಕ್ಕದ್ದು;

(ಬಿ) ಪ್ರತಿಯೊಂದು ಕೆಲಸದ ಕೊಠಡಿಯ ನೆಲವನ್ನು ಪ್ರತಿಯೊಂದು ವಾರದಲ್ಲಿ ಕನಿಷ್ಠ ಒಂದು ಬಾರಿ ತೊಳೆಯುವ ಅಗತ್ಯವಿದ್ದಲ್ಲಿ ಸೋಂಕು ನಾಶಕವನ್ನು ಬಳಸಿ ಅಥವಾ ಇತರ ಕೆಲವು ಪರಿಣಾಮಕಾರಿ ವಿಧಾನದ ಮೂಲಕ ಸ್ವಚ್ಛಗೊಳಿಸತಕ್ಕದ್ದು;

(ಸಿ) ಯಾವುದೇ ತಯಾರಿಕಾ ಪ್ರಕ್ರಿಯೆ ನಡೆಯುತ್ತಿರುವಾಗ ನೆಲದ ಮೇಲೆ ನೀರು ಹರಿದುಹೋಗುವಷ್ಟರಮಟ್ಟಿಗೆ ನೆಲ ತೇವವಾಗುವಂತಿದ್ದರೆ, ಹರಿದುಹೋಗುವುದಕ್ಕೆ ಪರಿಣಾಮಕಾರಿ ಸಾಧನಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಡಿ) ಕೊಠಡಿಗಳ ಎಲ್ಲಾ ಒಳಗೋಡೆಗಳಿಗೆ ಮತ್ತು ಅಡ್ಡಕಟ್ಟುಗಳಿಗೆ, ಎಲ್ಲಾ ಒಳಮಾಳಿಗೆಗಳಿಗೆ ಅಥವಾ ಮೇಲ್ಛಾವಣಿಗಳಿಗೆ ಮತ್ತು ದಾರಿಗಳ ಮತ್ತು ಮೆಟ್ಟಿಲುಗಳ ಎಲ್ಲಾ ಗೋಡೆಗಳಿಗೆ, ಇಕ್ಕೆಲಗಳಿಗೆ ಮತ್ತು ಮೇಲ್ಛಾವಣಿಗಳಿಗೆ,–

(i) ಅವುಗಳಿಗೆ ತೊಳೆಯಬಹುದಾದ ಜಲವರ್ಣದಿಂದಲ್ಲದೆ ಅನ್ಯಥಾ ಬಣ್ಣ ಬಳಿದಿದ್ದರೆ ಅಥವಾ ವಾರ್ನಿಷ್ ಹಾಕಿದ್ದರೆ ಅವುಗಳಿಗೆ ಐದು ವರ್ಷಗಳ ಅವಧಿಯಲ್ಲಿ ಕನಿಷ್ಠ ಒಂದು ಬಾರಿ ಪುನಃ ಬಣ್ಣ ಬಳಿಯತಕ್ಕದ್ದು ಅಥವಾ ಪುನಃ ವಾರ್ನಿಷ್ ಹಾಕತಕ್ಕದ್ದು.

(iಎ) ಅವುಗಳಿಗೆ ತೊಳೆಯಬಹುದಾದ ಜಲವರ್ಣದಿಂದ ಬಣ್ಣ ಬಳಿದಿರುವಲ್ಲಿ ಪ್ರತಿ ಮೂರು ವರ್ಷಗಳ ಅವಧಿಯಲ್ಲಿ ಕನಿಷ್ಠ ಒಂದು ಬಾರಿ ಪುನಃ ಅಂಥ ಬಣ್ಣದಿಂದ ಒಂದು ಕೋಟ್ ಬಣ್ಣ ಬಳಿಯತಕ್ಕದ್ದು ಮತ್ತು ಪ್ರತಿ ಆರು ತಿಂಗಳುಗಳ ಅವಧಿಯಲ್ಲಿ ಕನಿಷ್ಠ ಪಕ್ಷ ಒಂದು ಬಾರಿ ಅವುಗಳನ್ನು ತೊಳೆಯತಕ್ಕದ್ದು.

(ii) ಅವುಗಳಿಗೆ ಬಣ್ಣ ಬಳಿದಿದ್ದರೆ ಅಥವಾ ವಾರ್ನಿಷ್ ಹಾಕಿದ್ದರೆ ಅವುಗಳಲ್ಲಿ ನಯವಾದ ಸಲೀಸಾಗಿ ಒಳಹೋಗಲಾಗದ ಹೊರಮೈಗಳಿದ್ದರೆ ನಿಯಮಿಸಬಹುದಾದಂಥ ವಿಧಾನದ ಮೂಲಕ ಪ್ರತಿ ಹದಿನಾಲ್ಕು ತಿಂಗಳುಗಳ ಅವಧಿಯಲ್ಲಿ ಕನಿಷ್ಠ ಒಂದು ಬಾರಿ ಸ್ವಚ್ಛಗೊಳಿಸತಕ್ಕದ್ದು.

(iii) ಇತರೆ ಯಾವುದೇ ಸಂದರ್ಭದಲ್ಲಿ, ಸುಣ್ಣ ಅಥವಾ ಬಣ್ಣ ಬಳಿದಿರತಕ್ಕದ್ದು ಮತ್ತು ಪ್ರತಿ ಹದಿನಾಲ್ಕು ತಿಂಗಳುಗಳ ಅವಧಿಯಲ್ಲಿ ಕನಿಷ್ಠ ಪಕ್ಷ ಒಂದು ಬಾರಿ ಸುಣ್ಣ ಬಳಿಯತಕ್ಕದ್ದು ಅಥವಾ ಬಣ್ಣ ಬಳಿಯತಕ್ಕದ್ದು.

(ಡಿಡಿ) ಎಲ್ಲ ಬಾಗಿಲುಗಳಿಗೆ ಮತ್ತು ಕಿಟಕಿಗಳ ಚೌಕಟ್ಟುಗಳಿಗೆ ಮತ್ತು ಇತರ ಮರದ ಅಥವಾ ಲೋಹದ ಆಧಾರ ಚೌಕಟ್ಟುಗಳಿಗೆ ಮತ್ತು ಷಟರುಗಳಿಗೆ ಬಣ್ಣ ಬಳಿದಿರತಕ್ಕದ್ದು ಅಥವಾ ವಾರ್ನಿಷ್ ಹಾಕಿರತಕ್ಕದ್ದು ಮತ್ತು ಪ್ರತಿ ಐದು ವರ್ಷಗಳ ಅವಧಿಯಲ್ಲಿ ಕನಿಷ್ಠ ಪಕ್ಷ ಒಂದು ಬಾರಿ ಬಣ್ಣ ಬಳಿಯತಕ್ಕದ್ದು ಅಥವಾ ವಾರ್ನಿಷ್ ಹಾಕತಕ್ಕದ್ದು.

(ಇ) ಖಂಡ (ಡಿ)ಯಲ್ಲಿ ಅಗತ್ಯಪಡಿಸಿರುವ ಕ್ರಮಗಳನ್ನು ಕೈಗೊಂಡ ದಿನಾಂಕಗಳನ್ನು ನಿಯಮಿಸಿದ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು.

(2) ಕಾರ್ಖಾನೆಯಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ಅಥವಾ ಕಾರ್ಖಾನೆಯ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳ ಯಾವುದೇ ಭಾಗದಲ್ಲಿ ನಡೆಸುತ್ತಿರುವ ಕಾರ್ಯಾಚರಣೆಗಳ ಸ್ವರೂಪವನ್ನು ಪರಿಗಣಿಸಿದಾಗ, (1)ನೇ ಉಪಪ್ರಕರಣದ ಎಲ್ಲ ಅಥವಾ ಯಾವುದೇ ಉಪಬಂಧಗಳನ್ನು ಪಾಲಿಸುವುದು ಅಧಿಭೋಗದಾರನಿಗೆ ಸಾಧ್ಯವಾಗದಿದ್ದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ, ಅಂಥ ಕಾರ್ಖಾನೆಗೆ ಅಥವಾ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಅಥವಾ ಆ ಭಾಗಕ್ಕೆ ಆ ಉಪಪ್ರಕರಣದ ಯಾವುದೇ ಉಪಬಂಧವು ಅನ್ವಯವಾಗದಂತೆ ವಿನಾಯಿತಿ ಕೊಡಬಹುದು ಮತ್ತು ಆ ಕಾರ್ಖಾನೆಯನ್ನು ಸ್ವಚ್ಛ ಸ್ಥಿತಿಯಲ್ಲಿ ಇಡುವುದಕ್ಕಾಗಿ ಪರ್ಯಾಯ ವಿಧಾನಗಳನ್ನು ನಿರ್ದಿಷ್ಟಪಡಿಸಬಹುದು.

**12. ನಿರುಪಯುಕ್ತ ಹಾಗೂ ತ್ಯಾಜ್ಯವಸ್ತುಗಳ ವಿಲೆ.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ ನಡೆಸುತ್ತಿರುವ ತಯಾರಿಕಾ ಪ್ರಕ್ರಿಯೆಯಿಂದಾಗಿ ಉಂಟಾಗುವ ನಿರುಪಯುಕ್ತ ಮತ್ತು ತ್ಯಾಜ್ಯವಸ್ತುವನ್ನು ಅದು, ಅಪಾಯಕಾರಿಯಾಗದಂತೆ, ಅದನ್ನು ಸಂಸ್ಕರಿಸುವುದಕ್ಕೆ ಮತ್ತು ಅವುಗಳ ವಿಲೆಗಾಗಿ ಪರಿಣಾಕಾರಿ ಏರ್ಪಾಡುಗಳನ್ನು ಮಾಡತಕ್ಕದ್ದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಮಾಡಬೇಕಾದ ಏರ್ಪಾಡುಗಳನ್ನು ನಿಯಮಿಸಿರುವ ಅಥವಾ (1)ನೇ ಉಪಪ್ರಕರಣಕ್ಕನುಸಾರವಾಗಿ ಮಾಡಿದ ಏರ್ಪಾಡುಗಳನ್ನು ನಿಯಮಿಸಬಹುದಾದಂಥ ಪ್ರಾಧಿಕಾರವು ಅನುಮೋದಿಸತಕ್ಕದ್ದೆಂದು ಅಗತ್ಯಪಡಿಸಿರುವ ನಿಯಮಗಳನ್ನು ರಚಿಸಬಹುದು.

**13. ಗಾಳಿ ಬೆಳಕಿನ ವ್ಯವಸ್ಥೆ ಮತ್ತು ಉಷ್ಣಾಂಶ.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ, ಪ್ರತಿಯೊಂದು ಕೆಲಸದ ಕೊಠಡಿಯಲ್ಲಿ,–

(ಎ) ಶುದ್ಧಗಾಳಿಯ ಪರಿಚಲನೆ, ಸಾಕಷ್ಟು ಗಾಳಿ, ಬೆಳಕು; ಮತ್ತು

(ಬಿ) ಅದರಲ್ಲಿರುವ ಕೆಲಸಗಾರರಿಗೆ ಸಮಂಜಸವಾದ ಹಿತಕರ ವಾತಾವರಣ ಕಲ್ಪಿಸುವಂಥ ಮತ್ತು ಅವರ ಆರೋಗ್ಯಕ್ಕೆ ಹಾನಿಯಾಗುವುದನ್ನು ತಡೆಗಟ್ಟುವಂಥ ಉಷ್ಣಾಂಶ

– ಇರುವಂತೆ ಮತ್ತು ಸದಾ ಇರುವಂತೆ ಪರಿಣಾಮಕಾರಿ ಮತ್ತು ಸೂಕ್ತ ವ್ಯವಸ್ಥೆಯನ್ನು ಮಾಡತಕ್ಕದ್ದು ಮತ್ತು ಅದರಲ್ಲೂ ಮುಖ್ಯವಾಗಿ,–

(i) ಗೋಡೆಗಳು ಮತ್ತು ಛಾವಣಿಗಳು, ಉಷ್ಣಾಂಶವು ಹೆಚ್ಚಾಗದಂತೆ, ಆದರೆ, ಕಾರ್ಯಸಾಧ್ಯವಾದಷ್ಟುಮಟ್ಟಿಗೆ ಕಡಿಮೆ ಇರುವಂತೆ ಮಾಡುವಂಥ ಸಾಮಗ್ರಿಗಳಿಂದ ಕೂಡಿರತಕ್ಕದ್ದು ಮತ್ತು ಅದಕ್ಕಾಗಿಯೇ ವಿನ್ಯಾಸಗೊಳಿಸಿದವುಗಳಾಗಿರತಕ್ಕದ್ದು;

(ii) ಕಾರ್ಖಾನೆಗಳಲ್ಲಿ ನಡೆಸುತ್ತಿರುವ ಕೆಲಸದ ಸ್ವರೂಪವು ಅತ್ಯಧಿಕ ಉಷ್ಣಾಂಶ ಉತ್ಪತ್ತಿಯಾಗುವುದನ್ನು ಒಳಗೊಂಡಿದ್ದರೆ ಅಥವಾ ಒಳಗೊಳ್ಳವ ಸಂಭವವಿದ್ದರೆ, ಬಿಸಿ ಭಾಗಗಳಿಗೆ ಉಷ್ಣ ನಿರೋಧಕಗಳನ್ನು ಅಥವಾ ಇತರ ಪರಿಣಾಮಕಾರಿ ಸಾಧನಗಳನ್ನು ಅಳವಡಿಸುವ ಮೂಲಕ ಕೆಲಸದ ಕೊಠಡಿಯಿಂದ ಅಂಥ ಉಷ್ಣಾಂಶವನ್ನು ಉತ್ಪತ್ತಿ ಮಾಡುವಂಥ ಪ್ರಕ್ರಿಯೆಯನ್ನು ಪ್ರತ್ಯೇಕಿಸುವ ಮೂಲಕ ಅಂಥ ಅತ್ಯಧಿಕ ಉಷ್ಣಾಂಶದಿಂದ ಕೆಲಸಗಾರರನ್ನು ಸಂರಕ್ಷಿಸಲು ಕಾರ್ಯಸಾಧ್ಯವಾಗಬಹುದಾದಂಥ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(2) ರಾಜ್ಯ ಸರ್ಕಾರವು ಯಾವುದೇ ಕಾರ್ಖಾನೆಗಾಗಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗಾಗಿ ಅಥವಾ ಅವುಗಳ ಭಾಗಗಳಿಗಾಗಿ ಸಾಕಷ್ಟು ಗಾಳಿ ಬೆಳಕಿನ ಮತ್ತು ಸಮಂಜಸ ಉಷ್ಣಾಂಶದ ಮಟ್ಟವನ್ನು ನಿಯಮಿಸಬಹುದು ಮತ್ತು ಸರಿಯಾಗಿ ಅಳತೆ ಮಾಡುವಂಥ ಉಪಕರಣಗಳನ್ನು ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಜಾಗದಲ್ಲಿ ನೆಲೆಗೊಳಿಸಬೇಕೆಂದು ಮತ್ತು ನಿಯಮಿಸಬಹುದಾದಂಥ ದಾಖಲೆಗಳನ್ನು ಇಡಬೇಕೆಂದು ನಿರ್ದೇಶಿಸಬಹುದು.

(3) ಯಾವುದೇ ಕಾರ್ಖಾನೆಯಲ್ಲಿನ ಅತ್ಯಧಿಕ ಉಷ್ಣಾಂಶವನ್ನು, ಸೂಕ್ತವಾದ ಕ್ರಮಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಡಿಮೆ ಮಾಡಬಹುದೆಂದು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಕಂಡುಬಂದರೆ, ಅವನು, (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ನಿಯಮಗಳಿಗೆ ಬಾಧಕವಾಗದಂತೆ, ಯಾವ ಕ್ರಮಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆಂದು ಅಭಿಪ್ರಾಯಪಡುವನೋ ಆ ಕ್ರಮಗಳನ್ನು ನಿರ್ದಿಷ್ಟಪಡಿಸಿರುವ ಮತ್ತು ಆ ಕ್ರಮಗಳನ್ನು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಕಾರ್ಯಗತಗೊಳಿಸಬೇಕೆಂದು ಅಧಿಭೋಗದಾರನನ್ನು ಅಗತ್ಯಪಡಿಸಿ ಲಿಖಿತ ಆದೇಶವನ್ನು ಅಧಿಭೋಗದಾರನಿಗೆ ಜಾರಿಮಾಡತಕ್ಕದ್ದು.

**14. ಧೂಳು ಮತ್ತು ಹೊಗೆ.–** (1) ತಯಾರಿಕಾ ಪ್ರಕ್ರಿಯೆಯನ್ನು ನಡೆಸುತ್ತಿರುವ ಕಾರಣದಿಂದಾಗಿ ಯಾವ ಕಾರ್ಖಾನೆಯಲ್ಲಿ, ಅದರಲ್ಲಿ ನಿಯೋಜಿತರಾಗಿರುವ ಕೆಲಸಗಾರರಿಗೆ ಹಾನಿಯನ್ನುಂಟು ಮಾಡುವಂಥ ಅಥವಾ ಅಸಹ್ಯವನ್ನುಂಟು ಮಾಡುವಂಥ ಸಂಭವವಿರುವ ಸ್ವರೂಪದ ಮತ್ತು ಆ ಮಟ್ಟಿಗಿನ ಯಾವುದೇ ಧೂಳು ಅಥವಾ ಹೊಗೆ ಅಥವಾ ಇತರ ಗಲೀಜು ಅಥವಾ ಗಣನೀಯ ಪ್ರಮಾಣದಲ್ಲಿ ಯಾವುದೇ ಧೂಳು ಹೊರಬರುತ್ತಿದೆಯೋ ಆ ಪ್ರತಿಯೊಂದು ಕಾರ್ಖಾನೆಯಲ್ಲಿ ಯಾವುದೇ ಕೆಲಸದ ಕೊಠಡಿಯಲ್ಲಿ ಅದನ್ನು ಉಸಿರಿಂದ ಒಳಗೆಳೆದುಕೊಳ್ಳುವುದನ್ನು ಮತ್ತು ಅದು ಅಲ್ಲಿ ಸಂಗ್ರಹವಾಗುವುದನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅದನ್ನು ಹೀರಿ ಹೊರಹಾಕುವ ಯಾವುದೇ ಉಪಕರಣಗಳ

ಅಗತ್ಯ ಇದ್ದರೆ, ಅದನ್ನು, ಧೂಳು, ಹೊಗೆ ಅಥವಾ ಇತರೆ ಗಲೀಜು ಹೊರಬರುವ ಜಾಗಕ್ಕೆ ಆದಷ್ಟು ಹತ್ತಿರದಲ್ಲಿ ಅಳವಡಿಸತಕ್ಕದ್ದು ಮತ್ತು ಅಂಥ ಜಾಗವನ್ನು ಸಾಧ್ಯವಾದಷ್ಟುಮಟ್ಟಿಗೆ ಸುತ್ತಲೂ ಮುಚ್ಚತಕ್ಕದ್ದು.

(2) ಯಾವುದೇ ಕಾರ್ಖಾನೆಯಲ್ಲಿ ಯಾವುದೇ ಸ್ಥಿರ ಅಂತರ್ದಹನ ಎಂಜಿನನ್ನು ಹೊರಹಾಕುವ ಕ್ರಿಯೆಯನ್ನು ಹೊರಾಂಗಣದಲ್ಲಿ ನಡೆಸಿದ ಹೊರತು, ಕಾರ್ಯಾಚರಣೆಗೊಳಿಸತಕ್ಕದ್ದಲ್ಲ ಮತ್ತು ಯಾವುದೇ ಇತರ ಅಂತರ್ದಹನ ಎಂಜಿನನ್ನು, ಯಾವುದೇ ಕೊಠಡಿಯಲ್ಲಿ ನಿಯೋಜಿತರಾಗಿರುವ ಕೆಲಸಗಾರರಿಗೆ ಹಾನಿಯುಂಟುಮಾಡುವ ಸಂಭವವಿರುವ ಹಾಗೆ ಆ ಎಂಜಿನ್‌ನಿಂದ ಹೊಗೆಯು ಹಾಗೆ ಸಂಗ್ರಹವಾಗುವುದನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಂಡಿದ್ದ ಹೊರತು ಕಾರ್ಯಾಚರಣೆಗೊಳಿಸತಕ್ಕದ್ದಲ್ಲ.

**15. ಕೃತಕ ತೇವಾಂಶ.–** (1) ಯಾವ ಕಾರ್ಖಾನೆಗಳಲ್ಲಿ ಗಾಳಿಯ ತೇವಾಂಶವನ್ನು ಕೃತಕವಾಗಿ ಹೆಚ್ಚಿಸಲಾಗಿದೆಯೋ ಆ ಎಲ್ಲಾ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು,–

(ಎ) ತೇವಾಂಶದ ಮಟ್ಟವನ್ನು ನಿಯಮಿಸಿರುವ;

(ಬಿ) ಗಾಳಿಯ ತೇವಾಂಶವನ್ನು ಕೃತಕವಾಗಿ ಹೆಚ್ಚಿಸುವುದಕ್ಕಾಗಿ ಬಳಸಿದ ವಿಧಾನಗಳನ್ನು ವಿನಿಯಮಿಸಿರುವ;

(ಸಿ) ಗಾಳಿಯ ತೇವಾಂಶವನ್ನು ನಿರ್ಧರಿಸುವುದಕ್ಕಾಗಿ ನಿಯಮಿಸಿದ ಪರೀಕ್ಷೆಗಳನ್ನು ಸರಿಯಾಗಿ ನಡೆಸುವಂತೆ ಮತ್ತು ಅವುಗಳನ್ನು ದಾಖಲ್ಮಾಡುವಂತೆ ನಿರ್ದೇಶಿಸಿರುವ;

(ಡಿ) ಕೆಲಸದ ಕೊಠಡಿಗಳಲ್ಲಿ ಸಾಕಷ್ಟು ಗಾಳಿಬೆಳಕು ಇರುವುದಕ್ಕೆ ಮತ್ತು ಗಾಳಿಯನ್ನು ತಂಪುಮಾಡುವುದಕ್ಕೆ ಅನುಸರಿಸಬೇಕಾದ ವಿಧಾನಗಳನ್ನು ನಿಯಮಿಸಿರುವ

– ನಿಯಮಗಳನ್ನು ರಚಿಸಬಹುದು.

(2) ಗಾಳಿಯ ತೇವಾಂಶವನ್ನು ಯಾವ ಕಾರ್ಖಾನೆಯಲ್ಲಿ ಕೃತಕವಾಗಿ ಹೆಚ್ಚಿಸಲಾಗಿದೆಯೋ ಆ ಯಾವುದೇ ಕಾರ್ಖಾನೆಯಲ್ಲಿ, ಆ ಉದ್ದೇಶಕ್ಕಾಗಿ ನೀರನ್ನು ಸಾರ್ವಜನಿಕ ನೀರು ಸರಬರಾಜು ಮೂಲದಿಂದ ಅಥವಾ ಕುಡಿಯುವ ನೀರಿನ ಇತರೆ ಮೂಲದಿಂದ ಪಡೆದು ಬಳಸಿಕೊಳ್ಳತಕ್ಕದ್ದು ಅಥವಾ ಅದನ್ನು ಹಾಗೆ ಬಳಸುವುದಕ್ಕೆ ಮುಂಚೆ ಚೆನ್ನಾಗಿ ಶುದ್ಧೀಕರಿಸತಕ್ಕದ್ದು.

(3) ತೇವಾಂಶವನ್ನು ಹೆಚ್ಚಿಸುವುದಕ್ಕಾಗಿ ಕಾರ್ಖಾನೆಯಲ್ಲಿ ಬಳಸುವ ನೀರನ್ನು ಚೆನ್ನಾಗಿ ಶುದ್ಧೀಕರಿಸಬೇಕೆಂದು (2)ನೇ ಉಪಪ್ರಕರಣದ ಮೇರೆಗೆ ಅಗತ್ಯಪಡಿಸಿದ್ದರೂ ನೀರನ್ನು ಚೆನ್ನಾಗಿ ಶುದ್ಧೀಕರಿಸಿಲ್ಲವೆಂದು ಇನ್ಸ್‌ಪೆಕ್ಟರ್‌ನಿಗೆ ಕಂಡುಬಂದರೆ, ಯಾವ ಕ್ರಮಗಳನ್ನು ಅನುಸರಿಸಬೇಕೆಂದು ತಾನು ಅಭಿಪ್ರಾಯಪಡುವನೋ ಆ ಕ್ರಮಗಳನ್ನು ನಿರ್ದಿಷ್ಟಪಡಿಸಿರುವ ಮತ್ತು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಅವುಗಳನ್ನು ಪಾಲಿಸಬೇಕೆಂದು ಅಗತ್ಯಪಡಿಸಿರುವ ಲಿಖಿತ ಆದೇಶವನ್ನು ಕಾರ್ಖಾನೆಯ ವ್ಯವಸ್ಥಾಪಕನಿಗೆ ಜಾರಿ ಮಾಡಬಹುದು.

**16. ಅತಿ ದಟ್ಟಣೆ.–** (1) ಯಾವುದೇ ಕಾರ್ಖಾನೆಯಲ್ಲಿ ಯಾವುದೇ ಕೊಠಡಿಯಲ್ಲಿ, ಅದರಲ್ಲಿ ನಿಯೋಜಿತರಾಗಿರುವ ಕೆಲಸಗಾರರ ಆರೋಗ್ಯಕ್ಕೆ ಹಾನಿಯುಂಟಾಗುವಷ್ಟರಮಟ್ಟಿಗೆ ಹೆಚ್ಚು ದಟ್ಟಣೆ ಇರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿದ್ದ ಕಾರ್ಖಾನೆಯ ಪ್ರತಿಯೊಂದು ಕೆಲಸದ ಕೊಠಡಿಯಲ್ಲಿ ನಿಯೋಜಿತನಾಗಿರುವ ಪ್ರತಿಯೊಬ್ಬ ಕೆಲಸಗಾರನಿಗೆ ಕನಿಷ್ಠ ಪಕ್ಷ 9.9 ಕ್ಯೂಬಿಕ್ ಮೀಟರ್‌ಗಳಷ್ಟು ಮತ್ತು ಈ ಅಧಿನಿಯಮವು ಪ್ರಾರಂಭವಾದ ತರುವಾಯ ನಿರ್ಮಿತವಾದ ಕಾರ್ಖಾನೆಯ ಪ್ರತಿಯೊಂದು ಕೆಲಸದ ಕೊಠಡಿಯಲ್ಲಿ ನಿಯೋಜಿತನಾಗಿರುವ ಪ್ರತಿಯೊಬ್ಬ ಕೆಲಸಗಾರನಿಗೆ ಕನಿಷ್ಠ 4.2 ಕ್ಯೂಬಿಕ್ ಮೀಟರುಗಳಷ್ಟು ಜಾಗ ಇರತಕ್ಕದ್ದು ಮತ್ತು ಈ ಉಪಪ್ರಕರಣದ ಉದ್ದೇಶಗಳಿಗಾಗಿ ಕೊಠಡಿಯ ನೆಲಮಟ್ಟದ ಮೇಲೆ 4.2 ಮೀಟರ್‌ಗಳಿಗಿಂತ ಹೆಚ್ಚಾಗಿರುವಂಥ ಯಾವುದೇ ಜಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(3) ಚೀಫ್ ಇನ್ಸ್‌ಪೆಕ್ಟರ್‌ನು, ಕಾರ್ಖಾನೆಯ ಪ್ರತಿಯೊಂದು ಕೆಲಸದ ಕೊಠಡಿಯಲ್ಲಿ, ಈ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ನಿಯೋಜಿಸಬಹುದಾದ ಕೆಲಸಗಾರರ ಗರಿಷ್ಠ ಸಂಖ್ಯೆಯನ್ನು ನಿರ್ದಿಷ್ಟಪಡಿಸುವ ನೋಟೀಸನ್ನು ಹಾಕತಕ್ಕದ್ದೆಂದು ಲಿಖಿತ ಆದೇಶದ ಮೂಲಕ ಅಗತ್ಯಪಡಿಸಿದರೆ, ಆ ನೋಟೀಸನ್ನು ಪ್ರತಿಯೊಂದು ಕೊಠಡಿಯಲ್ಲಿ ಹಾಕತಕ್ಕದ್ದು.

(4) ಯಾವುದೇ ಕೆಲಸದ ಕೊಠಡಿಯಲ್ಲಿ ನಿಯೋಜಿತರಾಗಿರುವ ಕೆಲಸಗಾರರ ಆರೋಗ್ಯದ ಹಿತದೃಷ್ಟಿಯಿಂದ, ಆ ಕೊಠಡಿಗೆ ಸಂಬಂಧಿಸಿದಂತೆ ಈ ಪ್ರಕರಣದ ಉಪಬಂಧಗಳನ್ನು ಅನುಸರಿಸುವುದು ಅನವಶ್ಯಕವೆಂದು ಚೀಫ್ ಇನ್ಸ್‌ಪೆಕ್ಟರ್‌ನಿಗೆ, ಮನದಟ್ಟಾದರೆ ಲಿಖಿತ ಆದೇಶದ ಮೂಲಕ ಯಾವುದಾದರೂ ಷರತ್ತುಗಳನ್ನು ವಿಧಿಸುವುದು ಸೂಕ್ತವೆಂದು ತಾನು ಭಾವಿಸಬಹುದಾದರೆ ಅವುಗಳಿಗೆ ಒಳಪಟ್ಟು, ಯಾವುದೇ ಕೆಲಸದ ಕೊಠಡಿಗೆ ಈ ಪ್ರಕರಣದ ಉಪಬಂಧ ಅನ್ವಯವಾಗದಂತೆ ವಿನಾಯಿತಿಗೊಳಿಸಬಹುದು.

**17. ಬೆಳಕಿನ ವ್ಯವಸ್ಥೆ.–** (1) ಕಾರ್ಖಾನೆಯ ಯಾವ ಭಾಗದಲ್ಲಿ ಕೆಲಸಗಾರರು ಕೆಲಸ ಮಾಡುತ್ತಿರುವರೋ ಅಥವಾ ಹಾದು ಹೋಗಿಬರುವರೋ ಆ ಪ್ರತಿಯೊಂದು ಭಾಗದಲ್ಲಿ ನೈಸರ್ಗಿಕ ಅಥವಾ ಕೃತಕ ಅಥವಾ ಎರಡೂ ಬಗೆಯ ಸಾಕಷ್ಟು ಮತ್ತು ಸೂಕ್ತ ಬೆಳಕಿನ ವ್ಯವಸ್ಥೆಯನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಪ್ರತಿಯೊಂದು ಕಾರ್ಖಾನೆಯಲ್ಲಿ ಕೆಲಸದ ಕೊಠಡಿಯ ಬೆಳಕಿನ ವ್ಯವಸ್ಥೆಗಾಗಿ ಉಪಯೋಗಿಸಿದ ಎಲ್ಲಾ ಗಾಜು ಹಾಕಿದ ಕಿಟಕಿಗಳ ಮತ್ತು ಮೇಲ್ಛಾವಣಿ ಕಿಟಕಿಗಳ ಒಳ ಮತ್ತು ಹೊರಭಾಗ ಎರಡನ್ನೂ ಸ್ವಚ್ಛವಾಗಿಟ್ಟಿರತಕ್ಕದ್ದು ಮತ್ತು 13ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಪಬಂಧಗಳ ಪಾಲನೆ ಸಂದರ್ಭದಲ್ಲಿ ಅಡೆತಡೆಯಾಗದಂತೆ ಮುಕ್ತವಾಗಿಟ್ಟಿರತಕ್ಕದ್ದು.

(3) ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ಬೆಳಕಿನ ಮೂಲದಿಂದ ನೇರವಾಗಿ ಅಥವಾ ನಯವಾದ ಅಥವಾ ಮೆರಗು ಕೊಟ್ಟ ಮೇಲ್ಮೈಯಿಂದ ಪ್ರತಿಫಲನವಾಗುವ ಬೆಳಕಿನ ಪ್ರಖರತೆಯನ್ನು;

(ಬಿ) ಯಾರೇ ಕೆಲಸಗಾರನಿಗೆ ಕಣ್ಣಿಗೆ ದಣಿವುಂಟುಮಾಡುವ ಅಥವಾ ಅಪಘಾತದ ಅಪಾಯವನ್ನು ಉಂಟುಮಾಡುವಷ್ಟರಮಟ್ಟಿಗೆ ಕತ್ತಲು ಕವಿಯುವುದನ್ನು;

– ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ತಡೆಗಟ್ಟುವುದಕ್ಕಾಗಿ ಪರಿಣಾಮಕಾರಿಯಾದ ವ್ಯವಸ್ಥೆಗಳನ್ನು ಮಾಡತಕ್ಕದ್ದು.

(4) ರಾಜ್ಯ ಸರ್ಕಾರವು, ಕಾರ್ಖಾನೆಗಳಿಗಾಗಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗಾಗಿ ಅಥವಾ ಯಾವುದೇ ತಯಾರಿಕಾ ಪ್ರಕ್ರಿಯೆಗಾಗಿ ಸಾಕಷ್ಟು ಮತ್ತು ಸೂಕ್ತ ಬೆಳಕಿನ ವ್ಯವಸ್ಥೆಯ ಬಗ್ಗೆ ಗುಣಮಟ್ಟಗಳನ್ನು ನಿಯಮಿಸಬಹುದು.

**18. ಕುಡಿಯುವ ನೀರು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ ಅದರಲ್ಲಿ ನಿಯೋಜಿತರಾದ ಎಲ್ಲಾ ಕೆಲಸಗಾರರಿಗೆ ಅನುಕೂಲಕರವಾಗಿರುವ ಸೂಕ್ತ ಜಾಗಗಳಲ್ಲಿ ಆರೋಗ್ಯಕರವಾದ ಕುಡಿಯುವ ನೀರಿನ ಸಾಕಷ್ಟು ಸರಬರಾಜಿಗೆ ಮತ್ತು ನಿರ್ವಹಣೆಗೆ ಪರಿಣಾಮಕಾರಿಯಾದ ವ್ಯವಸ್ಥೆಗಳನ್ನು ಮಾಡತಕ್ಕದ್ದು.

(2) ಆ ಕಾರ್ಖಾನೆಯಲ್ಲಿ ನಿಯೋಜಿತರಾಗಿರುವ ಕೆಲಸಗಾರರಲ್ಲಿ ಬಹುಮಂದಿಗೆ ತಿಳಿದಿರುವ ಭಾಷೆಯಲ್ಲಿ "ಕುಡಿಯುವ ನೀರು" ಎಂದು ಅಂಥ ಎಲ್ಲಾ ಜಾಗಗಳಲ್ಲಿಯೂ ಸ್ಪಷ್ಟವಾಗಿ ಬರೆದಿರತಕ್ಕದ್ದು ಮತ್ತು ಅಂಥ ಯಾವುದೇ ಜಾಗವು, ಚೀಫ್ ಇನ್ಸ್‌ಪೆಕ್ಟರ್‌ನು ಲಿಖಿತದಲ್ಲಿ ಇನ್ನೂ ಕಡಿಮೆ ಅಂತರವನ್ನು ಅನುಮೋದಿಸಿದ್ದ ಹೊರತು, ತೊಳೆಯುವ ಯಾವುದೇ ಸ್ಥಳದ, ಮೂತ್ರಿಯ, ಶೌಚಾಲಯದ, ಪೀಕುದಾನಿ, ಕೊಳಕನ್ನು ಅಥವಾ ತ್ಯಾಜ್ಯವನ್ನು ಹೊರಗಡೆಗೆ ಹರಿದುಹೋಗಿಸುವ ಮೋರಿಯ ಅಥವಾ ಮಲಿನಕಾರಕವಾದ ಯಾವುದೇ ಇತರ ಮೂಲದ ಆರು ಮೀಟರುಗಳ ಒಳಗೆ ಇರತಕ್ಕದ್ದಲ್ಲ.

(3) ಎರಡುನೂರ ಐವತ್ತಕ್ಕಿಂತ ಹೆಚ್ಚು ಕೆಲಸಗಾರರನ್ನು ಸಾಮಾನ್ಯವಾಗಿ ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ, ಬಿಸಿ ಹವಾಮಾನದ ಕಾಲದಲ್ಲಿ ಕುಡಿಯುವ ನೀರನ್ನು ಪರಿಣಾಮಕಾರಿ ಸಾಧನಗಳ ಮೂಲಕ ತಂಪು ಮಾಡುವುದಕ್ಕಾಗಿ ಮತ್ತು ಅದರ ವಿತರಣೆಗಾಗಿ ಏರ್ಪಾಟುಗಳನ್ನು ಮಾಡತಕ್ಕದ್ದು.

(4) ಎಲ್ಲಾ ಕಾರ್ಖಾನೆಗಳ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು (1)ನೇ, (2)ನೇ ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳ ಪಾಲನೆ ಆಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ಕಾರ್ಖಾನೆಗಳಲ್ಲಿ ಕುಡಿಯುವ ನೀರಿನ ಸರಬರಾಜು ಮತ್ತು ವಿತರಣೆಯನ್ನು ನಿಯಮಿಸಿದ ಪ್ರಾಧಿಕಾರಿಗಳು ಪರೀಕ್ಷಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

**19. ಶೌಚಾಲಯಗಳು ಮತ್ತು ಮೂತ್ರಿಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ನಿಯಮಿಸಿದ ಬಗೆಯ ಸಾಕಷ್ಟು ಶೌಚಾಲಯಗಳು ಮತ್ತು ಮೂತ್ರಾಲಯಗಳು ಅನುಕೂಲಕರವಾದ ಜಾಗದಲ್ಲಿ ಇರುವಂತೆ ಮತ್ತು ಕೆಲಸಗಾರರು ಕಾರ್ಖಾನೆಯಲ್ಲಿರುವಾಗ ಎಲ್ಲಾ ಕಾಲಗಳಲ್ಲಿ ಅವರಿಗೆ ಆ ಸೌಕರ್ಯ ಲಭ್ಯವಿರುವಂತೆ ವ್ಯವಸ್ಥೆ ಮಾಡತಕ್ಕದ್ದು.

(ಬಿ) ಸುತ್ತಲೂ ಮುಚ್ಚಿರುವ ಬೇರೆಬೇರೆ ಜಾಗವನ್ನು ಪುರುಷ ಮತ್ತು ಮಹಿಳಾ ಕೆಲಸಗಾರರಿಗೆ ಒದಗಿಸತಕ್ಕದ್ದು.

(ಸಿ) ಅಂಥ ಜಾಗದಲ್ಲಿ ಸಾಕಷ್ಟು ಬೆಳಕು ಮತ್ತು ಗಾಳಿ ಬೆಳಕಿನ ವ್ಯವಸ್ಥೆ ಇರತಕ್ಕದ್ದು ಮತ್ತು ಅಂಥ ಯಾವುದೇ ಶೌಚಾಲಯಕ್ಕೂ ಅಥವಾ ಮೂತ್ರಾಲಯಕ್ಕೂ, ಚೀಫ್ ಇನ್ಸ್‌ಪೆಕ್ಟರ್‌ನು ಲಿಖಿತದಲ್ಲಿ ವಿಶೇಷವಾಗಿ ವಿನಾಯಿತಿ ಕೊಟ್ಟಿದ್ದ ಹೊರತು, ನಡುವೆ ಇರುವ ಖಾಲಿ ಜಾಗದ ಅಥವಾ ಗಾಳಿ ಬೆಳಕಿನ ವ್ಯವಸ್ಥೆ ಇರುವ ದಾರಿಯ ಮೂಲಕವಲ್ಲದೆ ಯಾವುದೇ ಕೆಲಸದ ಕೊಠಡಿಗೂ ಸಂಪರ್ಕ ಇರತಕ್ಕದ್ದಲ್ಲ.

(ಡಿ) ಅಂಥ ಎಲ್ಲಾ ಜಾಗವನ್ನು ಎಲ್ಲಾ ಕಾಲಗಳಲ್ಲಿ ಸ್ವಚ್ಛ ಮತ್ತು ನೈರ್ಮಲ್ಯ ಸ್ಥಿತಿಯಲ್ಲಿ ಇಟ್ಟಿರತಕ್ಕದ್ದು;

(ಇ) ಕಸ ಗುಡಿಸುವವರನ್ನು ನಿಯೋಜಿಸಿಕೊಳ್ಳತಕ್ಕದ್ದು, ಶೌಚಾಲಯಗಳನ್ನು, ಮೂತ್ರಾಲಯಗಳನ್ನು ಮತ್ತು ತೊಳೆಯುವ ಜಾಗಗಳನ್ನು ಸ್ವಚ್ಛವಾಗಿಡುವುದು ಅವರ ಮುಖ್ಯ ಕರ್ತವ್ಯವಾಗಿರತಕ್ಕದ್ದು.

(2) ಎರಡುನೂರ ಐವತ್ತಕ್ಕಿಂತಲೂ ಹೆಚ್ಚಿನ ಕೆಲಸಗಾರರನ್ನು ಸಾಮಾನ್ಯವಾಗಿ ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ಎಲ್ಲಾ ಶೌಚಾಲಯ ಮತ್ತು ಮೂತ್ರಾಲಯಗಳ ಜಾಗಗಳು ನಿಯಮಿಸಿದ ನೈರ್ಮಲ್ಯ ಬಗೆಯವುಗಳಾಗಿರತಕ್ಕದ್ದು;

(ಬಿ) ಶೌಚಾಲಯಗಳ ಮತ್ತು ಮೂತ್ರಾಲಯಗಳ ಮತ್ತು ನೈರ್ಮಲ್ಯ ವಿಭಾಗಗಳ ನೆಲಗಟ್ಟುಗಳಿಗೆ ಮತ್ತು ಒಳಗೋಡೆಗಳಿಗೆ, ಅವುಗಳಲ್ಲಿ ನಯವಾಗಿ ಮೆರಗು ಕೊಟ್ಟಿರುವ ಅಪ್ರವೇಶ್ಯ ಮೇಲ್ಮೈ ಇರುವಂತೆ ಮಾಡಲು ತೊಂಬತ್ತು ಸೆಂಟಿ ಮೀಟರುಗಳ ಎತ್ತರದವರೆಗೆ ಹೊಳಪು ಟೈಲ್‌ಗಳನ್ನು ಹಾಕತಕ್ಕದ್ದು ಅಥವಾ ಅವುಗಳನ್ನು ಬೇರೆ ರೀತಿಯಲ್ಲಿ ಅಣಿಗೊಳಿಸತಕ್ಕದ್ದು.

(ಸಿ) ಉಪಪ್ರಕರಣ (1)ರ (ಡಿ) ಮತ್ತು (ಇ) ಖಂಡಗಳ ಉಪಬಂಧಗಳಿಗೆ ಬಾಧಕವಾಗದಂತೆ, ಹಾಗೆ ಟೈಲ್‌ಗಳನ್ನು ಹಾಕಲಾದ ಅಥವಾ ಅಣಿಗೊಳಿಸಿದ ನೆಲಗಟ್ಟುಗಳನ್ನು, ಗೋಡೆಗಳ ಮತ್ತು ವಿಭಾಗಗಳ ಭಾಗಗಳನ್ನು ಮತ್ತು ಶೌಚಾಲಯಗಳ ಮತ್ತು ಮೂತ್ರಾಲಯಗಳ ಪಿಂಗಾಣಿ ಬೋಗುಣಿಗಳನ್ನು ಕನಿಷ್ಠಪಕ್ಷ ಪ್ರತಿ ಏಳು ದಿವಸಗಳಿಗೊಮ್ಮೆ ಸೂಕ್ತ

ಶುದ್ಧೀಕಾರಕಗಳಿಂದ ಅಥವಾ ಸೋಂಕು ನಿವಾರಕಗಳಿಂದ ಅಥವಾ ಅವರೆಡರಿಂದಲೂ ಚೆನ್ನಾಗಿ ತೊಳೆಯತಕ್ಕದ್ದು ಮತ್ತು ಸ್ವಚ್ಛಗೊಳಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಯಾವುದೇ ಕಾರ್ಖಾನೆಯಲ್ಲಿ, ಅದರಲ್ಲಿ ಸಾಮಾನ್ಯವಾಗಿ ನಿಯೋಜಿತರಾಗಿರುವ ಪುರುಷ ಮತ್ತು ಮಹಿಳಾ ಕೆಲಸಗಾರರ ಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಒದಗಿಸಬೇಕಾದ ಶೌಚಾಲಯಗಳ, ಮೂತ್ರಾಲಯಗಳ ಸಂಖ್ಯೆಯನ್ನು ನಿಯಮಿಸಬಹುದು ಮತ್ತು ಅದರಲ್ಲಿ ನಿಯೋಜಿತರಾದ ಕೆಲಸಗಾರರ ಆರೋಗ್ಯದ ಹಿತದೃಷ್ಟಿಯಿಂದ ಈ ಬಗ್ಗೆ ಕೆಲಸಗಾರರ ಬಾಧ್ಯತೆಯೂ ಸೇರಿದಂತೆ ಕಾರ್ಖಾನೆಗಳಲ್ಲಿ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಅದು ಅವಶ್ಯಕವೆಂದು ಪರ್ಯಾಲೋಚಿಸಬಹುದಾದಂಥ ಇನ್ನೂ ಹೆಚ್ಚಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು.

**20. ಉಗುಳು ತೊಟ್ಟಿಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ ಸಾಕಷ್ಟು ಸಂಖ್ಯೆಯ ಉಗುಳು ತೊಟ್ಟಿಗಳನ್ನು ಅನುಕೂಲಕರವಾದ ಸ್ಥಳಗಳಲ್ಲಿ ಒದಗಿಸತಕ್ಕದ್ದು ಮತ್ತು ಅವುಗಳನ್ನು ಸ್ವಚ್ಛವಾದ ಮತ್ತು ಆರೋಗ್ಯಕರವಾದ ಸ್ಥಿತಿಯಲ್ಲಿ ಇಟ್ಟಿರತಕ್ಕದ್ದು.

(2) ರಾಜ್ಯ ಸರ್ಕಾರವು ಯಾವುದೇ ಕಾರ್ಖಾನೆಯಲ್ಲಿ ಒದಗಿಸಬೇಕಾದ ಉಗುಳು ತೊಟ್ಟಿಗಳ ಬಗೆಯನ್ನು ಮತ್ತು ಸಂಖ್ಯೆಯನ್ನು ಮತ್ತು ಅವು ಇರಬೇಕಾದ ಜಾಗವನ್ನು ನಿಯಮಿಸಿರುವ ನಿಯಮಗಳನ್ನು ರಚಿಸಬಹುದು ಮತ್ತು ಅವುಗಳನ್ನು ಸ್ವಚ್ಛವಾದ ಮತ್ತು ಆರೋಗ್ಯಕರ ಸ್ಥಿತಿಯಲ್ಲಿ ಇಟ್ಟಿರುವುದಕ್ಕೆ ಸಂಬಂಧಪಡುವಂಥ ಇನ್ನೂ ಹೆಚ್ಚಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು.

(3) ಯಾರೇ ವ್ಯಕ್ತಿಯು, ಆ ಉದ್ದೇಶಕ್ಕಾಗಿಯೇ ಒದಗಿಸಿದ ಉಗುಳು ತೊಟ್ಟಿಗಳಲ್ಲಿ ಅಲ್ಲದೆ ಕಾರ್ಖಾನೆಯ ಆವರಣದೊಳಗೆ ಉಗುಳತಕ್ಕದ್ದಲ್ಲ ಮತ್ತು ಒದಗಿಸಿದ ಈ ಏರ್ಪಾಟನ್ನು ಮತ್ತು ಅದನ್ನು ಬಳಸದಿರುವ ಉಲ್ಲಂಘನೆಗಾಗಿ ದಂಡನೆಯನ್ನು ತಿಳಿಸಿರುವ ನೋಟೀಸನ್ನು ಆವರಣಗಳಲ್ಲಿನ ಸೂಕ್ತ ಜಾಗಗಳಲ್ಲಿ ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು.

(4) ಉಪಪ್ರಕರಣ (3)ನ್ನು ಉಲ್ಲಂಘಿಸಿ ಉಗುಳುವ ಯಾರೇ ವ್ಯಕ್ತಿಯು ಐದು ರೂಪಾಯಿಗೆ ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

## ಅಧ್ಯಾಯ – IV
## ಸುರಕ್ಷತೆ

**21. ಯಂತ್ರ ಸಾಮಗ್ರಿಗಳಿಗೆ ಬೇಲಿ ಹಾಕುವುದು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ ಈ ಕೆಳಕಂಡವುಗಳಿಗೆ, ಎಂದರೆ,–

(i) ಪ್ರೈಂ ಮೂವರ್ ಬಲವುಳ್ಳ ಸಾಧನದ ಪ್ರತಿಯೊಂದು ಚಲನ ಭಾಗಕ್ಕೆ ಮತ್ತು ಆದ್ಯ ಚಾಲಕ ಬಲವುಳ್ಳ ಸಾಧನಕ್ಕೆ ಜೋಡಿಸಿದ ಪ್ರತಿಯೊಂದು ನಿಯಂತ್ರಕ ಚಕ್ರಕ್ಕೆ ಆ ಆದ್ಯ ಚಾಲಕ ಬಲವುಳ್ಳ ಸಾಧನವು ಅಥವಾ ನಿಯಂತ್ರಕ ಚಕ್ರವು ಯಂತ್ರಗೃಹದಲ್ಲಿರಲಿ ಅಥವಾ ಇಲ್ಲದಿರಲಿ;

(ii) ಪ್ರತಿಯೊಂದು ಜಲಚಕ್ರದ ಮತ್ತು ರೆಕ್ಕೆಗಳುಳ್ಳ ಜಲಚಕ್ರದ ಮೇಲಣ ನೀರು ಹರಿವಿನ ಭಾಗಕ್ಕೆ ಮತ್ತು ಕೆಳಗಣ ನೀರ್ಗಾಲಿ ಭಾಗಕ್ಕೆ;

(iii) ಲೇತ್ ಯಂತ್ರಕ್ಕೆ ಆಸರೆಯಾದ ಅಚ್ಚಿನ ಭಾಗದಿಂದ ಆಚೆ ಮುಂದೆ ಚಾಚಿರುವ ಸ್ಟಾಕ್ ಬಾರ್‌ನ ಯಾವುದೇ ಭಾಗಕ್ಕೆ; ಮತ್ತು

(iv) ಈ ಕೆಳಕಂಡವುಗಳಿಗೆ, ಎಂದರೆ:–

(ಎ) ವಿದ್ಯುತ್ ಜನರೇಟರ್‌ಗೆ, ಮೋಟಾರ್‌ಗೆ ಅಥವಾ ಆವರ್ತನ ಸಂಕೇತ ಪರಿವರ್ತಕ ಸಾಧನದ ಪ್ರತಿಯೊಂದು ಭಾಗಕ್ಕೆ;

(ಬಿ) ಪ್ರಸರಣ ಯಂತ್ರೋಪಕರಣದ ಪ್ರತಿಯೊಂದು ಭಾಗಕ್ಕೆ;

(ಸಿ) ಇತರೆ ಯಾವುದೇ ಯಂತ್ರೋಪಕರಣದ ಪ್ರತಿಯೊಂದು ಅಪಾಯಕಾರಿ ಭಾಗಕ್ಕೆ ಭದ್ರವಾಗಿ ಕಾಪು ಬೇಲಿ ಹಾಕಿದ್ದಿದ್ದರೆ ಅವು ಕಾರ್ಖಾನೆಯಲ್ಲಿ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಯು ಸುರಕ್ಷಿತವಾಗಿರುವಂಥ ಜಾಗದಲ್ಲಿ ಇರುತ್ತಿದ್ದವೋ ಅಥವಾ ಅಂಥ ರಚನೆ ಉಳ್ಳವುಗಳಾಗಿರುತ್ತಿದ್ದವೋ ಅಂಥ ಜಾಗದಲ್ಲಿ ಇದ್ದ ಹೊರತು ಅಥವಾ ಅಂಥ ರಚನೆಗಳಾಗಿದ್ದ ಹೊರತು

– ಗಟ್ಟಿಮುಟ್ಟಾದ ರಚನೆಯುಳ್ಳ ಸುರಕ್ಷಕಗಳಿಂದ ಭದ್ರವಾಗಿ ಕಾಪು ಬೇಲಿ ಹಾಕತಕ್ಕದ್ದು ಮತ್ತು ಬೇಲಿ ಹಾಕಲಾಗಿರುವ ಯಂತ್ರೋಪಕರಣದ ಭಾಗಗಳು ಚಲನೆಯಲ್ಲಿರುವಾಗ ಅಥವಾ ಬಳಕೆಯಲ್ಲಿರುವಾಗ ಅದನ್ನು ನಿರಂತರವಾಗಿ ನಿರ್ವಹಣೆ ಮಾಡತಕ್ಕದ್ದು ಮತ್ತು ಅದು ಆ ಜಾಗದಲ್ಲೇ ಇರತಕ್ಕದ್ದು:

ಪರಂತು, ಯಂತ್ರೋಪಕರಣದ ಯಾವುದೇ ಭಾಗವು ಮೇಲೆ ಹೇಳಿರುವಂತೆ ಸುರಕ್ಷಿತವಾಗಿರುವಂಥ ಜಾಗದಲ್ಲಿದೆಯೇ ಅಥವಾ ಅಂಥ ರಚನೆಯದ್ದಾಗಿದೆಯೇ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ,–

(i) ಮೇಲೆ ಹೇಳಿರುವ ಯಂತ್ರೋಪಕರಣದ ಯಾವುದೇ ಭಾಗವು ಚಲನೆಯಲ್ಲಿರುವಾಗ ಅದನ್ನು ಪರೀಕ್ಷಿಸುವುದು ಅಥವಾ ಆ ಯಂತ್ರೋಪಕರಣವು ಚಲನೆಯಲ್ಲಿರುವಾಗ ಮಾಡಿದ ಅಂಥ ಪರೀಕ್ಷೆಯ ಪರಿಣಾಮವಾಗಿ ಕೀಲೆಣ್ಣೆ ಹಾಕುವುದು ಅಥವಾ ಸರಿಹೊಂದಿಸುವ ಇತರ ಕಾರ್ಯಾಚರಣೆ ನಡೆಸುವುದು, ಆ ಯಂತ್ರೋಪಕರಣದ ಆ

ಭಾಗವು ಚಲನೆಯಲ್ಲಿರುವಾಗ ನಡೆಸುವುದು ಅವಶ್ಯಕವಾಗಿರುವಂಥ ಪರೀಕ್ಷೆ ಅಥವಾ ಕಾರ್ಯಾಚರಣೆ ನಡೆಸುವುದು ಅವಶ್ಯಕವಾಗಿದ್ದಾಗ; ಅಥವಾ

(ii) ನಿಯಮಿಸಬಹುದಾದಂಥ ಪ್ರಕ್ರಿಯೆಯಲ್ಲಿ (ನಿರಂತರ ಸ್ವರೂಪದ ಯಾವ ಪ್ರಕ್ರಿಯೆಯನ್ನು ನಡೆಸಿದಾಗ, ಪ್ರಸರಣ ಯಂತ್ರೋಪಕರಣದ ಯಾವ ಭಾಗ ಬಹುಮಟ್ಟಿಗೆ ನಿಲುಗಡೆಯಾಗುತ್ತದೋ ಅಥವಾ ನಿಲುಗಡೆಯಾಗುವ ಸಂಭವವಿರುವುದೋ) ಆ ಪ್ರಕ್ರಿಯೆಯಲ್ಲಿ ಬಳಸಿದ ಆ ಪ್ರಸರಣ ಯಂತ್ರೋಪಕರಣದ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಆ ಯಂತ್ರೋಪಕರಣದ ಆ ಭಾಗವು ಚಲನೆಯಲ್ಲಿರುವಾಗ ಪರೀಕ್ಷಿಸುವುದು ಅಥವಾ ಆ ಯಂತ್ರೋಪಕರಣವು ಚಲನೆಯಲ್ಲಿರುವಾಗ ಮಾಡಿದ ಅಂಥ ಪರೀಕ್ಷೆಯ ಪರಿಣಾಮವಾಗಿ ಬೆಲ್ಟುಗಳನ್ನು ಸಂಯೋಜಿಸುವುದು ಅಥವಾ ಜೋಡಿಸುವುದು ಅಥವಾ ಸರಿಹೊಂದಿಸುವ ಇತರ ಕಾರ್ಯಾಚರಣೆಗಳನ್ನು ನಿರ್ವಹಿಸುವುದು ಅವಶ್ಯಕವಾಗಿರುವಾಗ

– ಮತ್ತು ಅಂಥ ಪರೀಕ್ಷೆಯನ್ನು ಅಥವಾ ಕಾರ್ಯಾಚರಣೆಯನ್ನು 22ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಾಡಿರುವಾಗ ಅಥವಾ ನಿರ್ವಹಿಸಿರುವಾಗ ಅಂಥ ಯಾವುದೇ ಸಂದರ್ಭವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ಯಂತ್ರೋಪಕರಣಕ್ಕೆ ಅಥವಾ ಅದರ ಭಾಗಕ್ಕೆ ಸಂಬಂಧಿಸಿದಂತೆ ಅಗತ್ಯವೆಂದು ತಾನು ಪರ್ಯಾಲೋಚಿಸಬಹುದಾದಂಥ ಇನ್ನೂ ಹೆಚ್ಚಿನ ಮುನ್ನೆಚ್ಚರಿಕೆಗಳನ್ನು ನಿಯಮಗಳ ಮೂಲಕ ನಿಯಮಿಸಬಹುದು ಅಥವಾ ಕೆಲಸಗಾರರ ಸುರಕ್ಷೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ, ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಯಾವುದೇ ನಿರ್ದಿಷ್ಟ ಯಂತ್ರೋಪಕರಣಕ್ಕೆ ಸಾಮಗ್ರಿಗೆ ಅಥವಾ ಅದರ ಭಾಗಕ್ಕೆ ಈ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿ ನೀಡಬಹುದು.

**22. ಯಂತ್ರೋಪಕರಣವು ಚಾಲನೆಯಲ್ಲಿರುವಾಗ ಅಥವಾ ಅದರ ಹತ್ತಿರ ಕೆಲಸ.–** (1) ಯಾವುದೇ ಕಾರ್ಖಾನೆಯಲ್ಲಿ 21ನೇ ಪ್ರಕರಣದಲ್ಲಿ ಹೇಳಿರುವ ಯಂತ್ರೋಪಕರಣದ ಯಾವುದೇ ಭಾಗವನ್ನು, ಆ ಯಂತ್ರೋಪಕರಣವು ಚಾಲನೆಯಲ್ಲಿರುವಾಗ ಪರೀಕ್ಷಿಸುವುದು ಅವಶ್ಯಕವಾಗಿರುವಾಗ ಅಥವಾ ಅಂಥ ಪರೀಕ್ಷೆಯ ಪರಿಣಾಮವಾಗಿ, ಯಂತ್ರೋಪಕರಣವು ಚಾಲನೆಯಲ್ಲಿರುವಾಗ,–

(ಎ) 21ನೇ ಪ್ರಕರಣದ (1)ನೇ ಉಪಪ್ರಕರಣದ ಪರಂತುಕದ (i)ನೇ ಖಂಡದಲ್ಲಿ ಹೇಳಿರುವ ಸಂದರ್ಭದಲ್ಲಿ, ಕೀಲೆಣ್ಣೆ ಹಾಕುವುದು ಅಥವಾ ಸರಿಹೊಂದಿಸುವ ಇತರ ಕಾರ್ಯಾಚರಣೆ ನಿರ್ವಹಿಸುವುದು; ಅಥವಾ

(ಬಿ) ಮೇಲೆ ಹೇಳಿದ ಪರಂತುಕದ (ii)ನೇ ಖಂಡದಲ್ಲಿ ಹೇಳಿರುವ ಸಂದರ್ಭದಲ್ಲಿ, ಬೆಲ್ಟುಗಳನ್ನು ಸಂಯೋಜಿಸುವುದು ಅಥವಾ ಜೋಡಿಸುವುದು ಅಥವಾ ಕೀಲೆಣ್ಣೆ ಹಾಕುವುದು ಅಥವಾ ಸರಿಹೊಂದಿಸುವ ಇತರ ಕಾರ್ಯಾಚರಣೆ ನಿರ್ವಹಿಸುವುದು ಅವಶ್ಯಕವಾಗಿರುವಾಗ

– ಅಂಥ ಪರೀಕ್ಷೆಯನ್ನು ಅಥವಾ ಕಾರ್ಯಾಚರಣೆಯನ್ನು, ಈ ಬಗ್ಗೆ ನಿಯಮಿಸಿದ ರಿಜಿಸ್ಟರಿನಲ್ಲಿ, ವಿಶೇಷ ತರಬೇತಿ ಪಡೆದಿರುವ ಯಾವ ವಯಸ್ಕ ಹೆಸರನ್ನು ದಾಖಲ್ಮಾಡಲಾಗಿದೆಯೋ ಮತ್ತು ಆ ಯಾರಿಗೆ ಈ ನೇಮಕದ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಮತ್ತು ಬಿಗಿಯಾದ ಉಡುಪನ್ನು (ಅದನ್ನು ಅಧಿಭೋಗದಾರನು ಒದಗಿಸತಕ್ಕದ್ದು) ಧರಿಸಿರುವ ಆ ಯಾರೇ ವಿಶೇಷ ತರಬೇತಿ ಪಡೆದಿರುವ ವಯಸ್ಕ ಪುರುಷ ಕೆಲಸಗಾರನು ಮಾತ್ರವೇ ಮಾಡತಕ್ಕದ್ದು ಅಥವಾ ನಿರ್ವಹಿಸತಕ್ಕದ್ದು ಮತ್ತು ಅವನು ಹಾಗೆ ಆ ಕೆಲಸದಲ್ಲಿ ತೊಡಗಿರುವಾಗ,–

(ಎ) ಅಂಥ ಕೆಲಸಗಾರನು ಚಲನೆಯಲ್ಲಿರುವ ರಾಟೆಯ ಬೆಲ್ಟ್‌ನ್ನು,–

(i) ಆ ಬೆಲ್ಟ್‌ನ ಅಗಲ ಹದಿನೈದು ಸೆಂಟಿ ಮೀಟರುಗಳಿಗಿಂತ ಹೆಚ್ಚಿಗೆ ಇರದಿದ್ದ ಹೊರತು;

(ii) ಆ ರಾಟೆಯು, ಸಾಮಾನ್ಯವಾಗಿ ಯಂತ್ರವನ್ನು ನಡೆಸುವ ಉದ್ದೇಶಕ್ಕಾಗಿ ಇದ್ದ ಹೊರತು ಮತ್ತು ಕೇವಲ ನಿಯಂತ್ರಕ ಚಕ್ರ ಅಥವಾ ವೇಗಗತಿ ನಿಯಂತ್ರಕ ಸಾಧನ ಅಲ್ಲದಿದ್ದ ಹೊರತು (ಇಂಥ ಸಂದರ್ಭದಲ್ಲಿ ಬೆಲ್ಟಿಗೆ ಅವಕಾಶವಿರುವುದಿಲ್ಲ);

(iii) ಬೆಲ್ಟ್ ಜಾಯಿಂಟು ಬೆಲ್ಟಿನೊಂದಿಗೆ ಕಟ್ಟಿದ್ದ ಅಥವಾ ಸಮಮಟ್ಟದಲ್ಲಿದ್ದ;

(iv) ಜಾಯಿಂಟ್ ಮತ್ತು ರಾಟೆಯ ಅಂಚು ಸೇರಿದಂತೆ ಆ ಬೆಲ್ಟ್ ಸುಭದ್ರ ಸ್ಥಿತಿಯಲ್ಲಿದ್ದ ಹೊರತು;

(v) ರಾಟೆಯ ಮತ್ತು ಯಾವುದೇ ನೆಲೆಗೊಳಿಸಿದ ಸ್ಥಿರಯಂತ್ರದ ಅಥವಾ ರಚನೆಯ ನಡುವೆ ಸಮಂಜಸ ಖಾಲಿ ಜಾಗ ಇದ್ದ ಹೊರತು;

(vi) ಚಾಲಕನಿಗಾಗಿ, ಕಾಲುಗಳಿಗೆ ಆಸರೆಯನ್ನು ಮತ್ತು ಅವಶ್ಯವಿರುವಲ್ಲೆಲ್ಲ ಕೈ ಆಸರೆಗಳನ್ನು ಒದಗಿಸಿದ್ದ ಹೊರತು;

(vii) ಮೇಲೆ ಹೇಳಿರುವ ಯಾವುದೇ ಪರೀಕ್ಷೆಯನ್ನು ಅಥವಾ ಕಾರ್ಯಾಚರಣೆಯನ್ನು ನಿರ್ವಹಿಸುವುದಕ್ಕಾಗಿ ಬಳಕೆಯಲ್ಲಿರುವ ಯಾವುದೇ ಏಣಿಯನ್ನು ಭದ್ರವಾಗಿ ನೆಲೆಗೊಳಿಸಿದ್ದ ಹೊರತು ಅಥವಾ ಬಿಗಿಯಾಗಿ ಕಟ್ಟಿದ್ದ ಹೊರತು ಅಥವಾ ಇನ್ನೊಬ್ಬ ವ್ಯಕ್ತಿಯು ಬಿಗಿಯಾಗಿ ಹಿಡಿದುಕೊಂಡಿದ್ದ ಹೊರತು

– ಬಳಸತಕ್ಕದ್ದಲ್ಲ.

(ಬಿ) ಯಂತ್ರೋಪಕರಣಕ್ಕೆ ಕಾಪು ಬೇಲಿ ಹಾಕುವುದಕ್ಕೆ ಸಂಬಂಧಪಟ್ಟ ಈ ಅಧಿನಿಯಮದ ಯಾವುದೇ ಇತರ ಉಪಬಂಧಕ್ಕೆ ಬಾಧಕವಾಗದಂತೆ, ತಿರುಗುತ್ತಿರುವ ಯಾವುದೇ ಶಾಫ್ಟ್‌ನ, ತಿರುಗಚ್ಚಿನ, ಚಕ್ರದ ಅಥವಾ ಸಣ್ಣ ಹಲ್ಲಿನ ಚಕ್ರದ ಮೇಲೆ ಹಾಕಿರುವ ಪ್ರತಿಯೊಂದು ಸ್ಕ್ರೂವನ್ನು, ಬೋಲ್ಟ್‌ನ್ನು ಮತ್ತು ಕೀಯನ್ನು ಮತ್ತು ಅಂಥ ಕೆಲಸಗಾರನಿಗೆ ಅನ್ಯಥಾ ತಾಕಿ ತಗಲಬಹುದಾದಂಥ ಎಲ್ಲ ಚುಚ್ಚು ಗಾಲಿಯು, ಸಣ್ಣ ತಿರುಪು ಮೊಳೆಯು ಮತ್ತು ಇತರ ಹಲ್ಲುಳ್ಳ ಅಥವಾ ಘರ್ಷಣ ಚಾಲಕವು ಹಾಗೆ ತಾಕಿ ತಗಲುವುದನ್ನು ತಡೆಗಟ್ಟಲು ಭದ್ರವಾಗಿ ಬೇಲಿ ಹಾಕತಕ್ಕದ್ದು.

(2) ಯಾರೇ ಮಹಿಳೆಗೆ ಅಥವಾ ಕಿರಿಯ ವಯಸ್ಕ ವ್ಯಕ್ತಿಗೆ, ಆದ್ಯ ಚಾಲಕ ಬಲವುಳ್ಳ ಸಾಧನವು ಅಥವಾ ಯಾವುದೇ ಪ್ರಸರಣ ಯಂತ್ರೋಪಕರಣವು ಚಲನೆಯಲ್ಲಿರುವಾಗ, ಆ ಆದ್ಯ ಚಾಲಕ ಬಲವುಳ್ಳ ಸಾಧನದ ಅಥವಾ ಯಾವುದೇ ಪ್ರಸರಣ ಯಂತ್ರೋಪಕರಣದ ಯಾವುದೇ ಭಾಗವನ್ನು ಸ್ವಚ್ಛಗೊಳಿಸಲು, ಕೀಲೆಣ್ಣೆ ಹಾಕಲು ಅಥವಾ ಸರಿಹೊಂದಿಸಲು ಅಥವಾ ಯಾವುದೇ ಯಂತ್ರದ ಯಾವುದೇ ಭಾಗವನ್ನು ಸ್ವಚ್ಛಗೊಳಿಸುವುದು, ಕೀಲೆಣ್ಣೆ ಹಾಕುವುದು ಅಥವಾ ಸರಿ ಹೊಂದಿಸುವುದು, ಆ ಯಂತ್ರದ ಅಥವಾ ಅಕ್ಕಪಕ್ಕದ ಯಾವುದೇ ಯಂತ್ರೋಪಕರಣದ ಯಾವುದೇ ಚಲಿಸುತ್ತಿರುವ ಭಾಗವು ಮಹಿಳೆಯನ್ನು ಅಥವಾ ಕಿರಿಯ ವಯಸ್ಸಿನ ವ್ಯಕ್ತಿಯನ್ನು ಗಾಯ ಉಂಟಾಗುವಂತಹ ಅಪಾಯಕ್ಕೆ ಒಡ್ಡುವಂತಿದ್ದರೆ ಅದನ್ನು ಸ್ವಚ್ಛಗೊಳಿಸಲು, ಅದಕ್ಕೆ ಕೀಲೆಣ್ಣೆ ಹಾಕಲು ಅಥವಾ ಅದನ್ನು ಸರಿಹೊಂದಿಸಲು ಅವಕಾಶ ಕೊಡತಕ್ಕದ್ದಲ್ಲ.

(3) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ನಿರ್ದಿಷ್ಟಪಡಿಸಿದ ಕಾರ್ಖಾನೆಯಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ಯಂತ್ರೋಪಕರಣದ ನಿರ್ದಿಷ್ಟಪಡಿಸಿದ ಭಾಗಗಳು ಚಲನೆಯಲ್ಲಿರುವಾಗ ಅವುಗಳನ್ನು ಯಾರೇ ವ್ಯಕ್ತಿಯು ಸ್ವಚ್ಛಗೊಳಿಸುವುದನ್ನು, ಕೀಲೆಣ್ಣೆ ಹಾಕುವುದನ್ನು ಅಥವಾ ಸರಿ ಹೊಂದಿಸುವುದನ್ನು ನಿಷೇಧಿಸಬಹುದು.

**23. ಅಪಾಯಕಾರಿ ಯಂತ್ರಗಳ ಕೆಲಸಕ್ಕೆ ಕಿರಿಯ ವಯಸ್ಸಿನ ವ್ಯಕ್ತಿಗಳ ನಿಯೋಜನೆ.–** (1) ಈ ಪ್ರಕರಣವು ಅನ್ವಯವಾಗುವಂಥ ಯಾವುದೇ ಯಂತ್ರದ ಬಳಿ ಯಾರೇ ಕಿರಿಯ ವಯಸ್ಸಿನ ವ್ಯಕ್ತಿಗೆ, ಆ ಯಂತ್ರದಿಂದ ಉಂಟಾಗುವ ಅಪಾಯಗಳ ಬಗ್ಗೆ ಮತ್ತು ಅನುಸರಿಸಬೇಕಾದ ಮುನ್ನೆಚ್ಚರಿಕೆಗಳ ಬಗ್ಗೆ ಆತನಿಗೆ ಪೂರ್ಣವಾಗಿ ಸೂಚನೆ ನೀಡಿದ್ದ ಹೊರತು ಮತ್ತು,–

(ಎ) ಆ ಯಂತ್ರದ ಬಳಿ ಕೆಲಸಮಾಡುವ ಬಗ್ಗೆ ಸಾಕಷ್ಟು ತರಬೇತಿಯನ್ನು ಆತ ಪಡೆದಿದ್ದ ಹೊರತು; ಅಥವಾ

(ಬಿ) ಆತನು ಆ ಯಂತ್ರದ ಬಗ್ಗೆ ಪೂರ್ಣ ತಿಳುವಳಿಕೆ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಯ ಮೇಲ್ವಿಚಾರಣೆಯಲ್ಲಿದ್ದ ಹೊರತು

– ಕೆಲಸಮಾಡಲು ಅವನನ್ನು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಅನುಮತಿ ನೀಡತಕ್ಕದ್ದಲ್ಲ.

(2) ಯಾವ ಯಂತ್ರೋಪಕರಣಗಳನ್ನು, ಅವುಗಳ ಬಳಿ ಕಿರಿಯ ವಯಸ್ಸಿನ ವ್ಯಕ್ತಿಗಳು ಕೆಲಸ ಮಾಡಬಾರದಂಥ ಅಪಾಯಕಾರಿ ಸ್ವರೂಪದ ಯಂತ್ರೋಪಕರಣಗಳೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುತ್ತದೋ, ಹಾಗೆಂದು ರಾಜ್ಯ ಸರ್ಕಾರವು ಅವುಗಳನ್ನು ನಿರ್ದಿಷ್ಟಪಡಿಸಬಹುದಾಗಿದೆಯೋ ಅಂಥ ಯಂತ್ರೋಪಕರಣಗಳಿಗೆ ಮೇಲೆ ಹೇಳಿರುವ ಅಗತ್ಯತೆಗಳನ್ನು ಪಾಲಿಸಿದ್ದ ಹೊರತು (1)ನೇ ಉಪಪ್ರಕರಣವು ಅನ್ವಯವಾಗತಕ್ಕದ್ದು.

**24. ವಿದ್ಯುಚ್ಛಕ್ತಿಯ ಸರಬರಾಜನ್ನು ನಿಲ್ಲಿಸುವ ಗೇರ್ ಮತ್ತು ಸಾಧನಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ಪ್ರಸರಣ ಯಂತ್ರೋಪಕರಣದ ಭಾಗವಾಗಿರುವಂಥ ಭದ್ರ ರಾಟೆಗಳಿಗೆ ಮತ್ತು ಸಡಿಲ ರಾಟೆಗಳಿಗೆ ಮತ್ತು ಆ ರಾಟೆಗಳಿಂದ ಚಾಲನಾ ಬೆಲ್ಟುಗಳು ಚಲಿಸುವಂತೆ ಮಾಡಲು ಸೂಕ್ತವಾದ ಸ್ಟ್ರೈಕಿಂಗ್ ಗೇರ್‌ನ್ನು ಅಥವಾ ಇತರ ಸಮರ್ಥ ಯಾಂತ್ರಿಕ ಸಲಕರಣೆಯನ್ನು ಒದಗಿಸತಕ್ಕದ್ದು, ನಿರ್ವಹಿಸತಕ್ಕದ್ದು ಮತ್ತು ಬಳಸತಕ್ಕದ್ದು ಮತ್ತು ಅಂಥ ಗೇರ್‌ನ್ನು ಅಥವಾ ಸಲಕರಣೆಗಳನ್ನು, ಆ ಬೆಲ್ಟ್, ಭದ್ರ ರಾಟೆಗಳಿಗೆ ಹಿಂಚಲನೆಯಾಗುವುದನ್ನು ತಡೆಗಟ್ಟುವಂಥ ರೀತಿಯಲ್ಲಿ ಅದನ್ನು ನಿರ್ಮಿಸಿರತಕ್ಕದ್ದು, ಹಾಕಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(ಬಿ) ಚಾಲನ ಬೆಲ್ಟುಗಳನ್ನು ಅವು ಉಪಯೋಗದಲ್ಲಿ ಇಲ್ಲದೆ ಇರುವಾಗ ಷಾಫ್ಟ್‌ನಿಂದ ಬಲವನ್ನು ರವಾನಿಸುತ್ತಿರುವಾಗ, ಅದರ ಮೇಲೆ ಇರಲು ಅಥವಾ ಅದರ ಮೇಲೆ ಚಲಿಸಲು ಅವಕಾಶ ಕೊಡತಕ್ಕದ್ದಲ್ಲ.

(2) ಪ್ರತಿಯೊಂದು ಕಾರ್ಖಾನೆಯಲ್ಲಿ, ಚಲನೆಯಲ್ಲಿರುವ ಯಂತ್ರೋಪಕರಣಕ್ಕೆ ತುರ್ತು ಪರಿಸ್ಥಿತಿಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸುವುದಕ್ಕಾಗಿ ಪ್ರತಿಯೊಂದು ಕೆಲಸದ ಕೊಠಡಿಗಳಲ್ಲಿ ಸೂಕ್ತ ಸಾಧನಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:

ಪರಂತು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ, ಕಾರ್ಯನಿರ್ವಹಿಸುತ್ತಿದ್ದ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಈ ಉಪಪ್ರಕರಣದ ಉಪಬಂಧಗಳು, ಶಕ್ತಿಯ ರೂಪದಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವಂಥ ಕೆಲಸದ ಕೊಠಡಿಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

(3) ವಿದ್ಯುಚ್ಛಕ್ತಿಯ ಸರಬರಾಜನ್ನು ನಿಲ್ಲಿಸಲು ಕಾರ್ಖಾನೆಯಲ್ಲಿ ಅದಾಗಿಯೇ "ಆಫ್" ಸ್ಥಿತಿಯಿಂದ "ಆನ್" ಸ್ಥಿತಿಗೆ ಹೋಗುವಂಥ ಸಾಧನವನ್ನು ಹಾಕಿದ್ದರೆ, ಆ ಸಾಧನವನ್ನು, ಯಾವ ಪ್ರಸರಣ ಯಂತ್ರೋಪಕರಣ ಸಾಮಗ್ರಿಗೆ ಅಥವಾ ಇತರ ಯಂತ್ರಗಳಿಗೆ ಜೋಡಿಸಲಾಗಿದೆಯೋ ಆ ಯಂತ್ರೋಪಕರಣವು ಅಥವಾ ಆ ಯಂತ್ರಗಳು ಅಕಸ್ಮಾತ್ತಾಗಿ ಚಾಲೂ ಆಗುವುದನ್ನು ತಡೆಗಟ್ಟಲು ಸುರಕ್ಷಿತ ಸ್ಥಿತಿಯಲ್ಲಿರುವಂತೆ ಸಾಧನಕ್ಕೆ ಬೀಗ ಹಾಕುವುದಕ್ಕಾಗಿ ಏರ್ಪಾಡುಗಳನ್ನು ಮಾಡತಕ್ಕದ್ದು.

**25. ಸ್ವಯಂ ಕಾರ್ಯನಿರ್ವಹಣಾ ಯಂತ್ರಗಳು.–** ಯಾವುದೇ ಕಾರ್ಖಾನೆಯಲ್ಲಿ ಸ್ವಯಂ ಕಾರ್ಯನಿರ್ವಹಿಸುವ ಯಂತ್ರದ ಅಡ್ಡಡ್ಡ ಚಲನೆ ಭಾಗವನ್ನು ಮತ್ತು ಅದರ ಮೇಲೆ ಎಳೆದಿರುವ ಯಾವುದೇ ಸಾಮಗ್ರಿಯನ್ನು, ಯಾರೇ ವ್ಯಕ್ತಿಯು ತಾನು ಕೆಲಸ ಮಾಡುತ್ತಿರುವಾಗ ಅಥವಾ ಅನ್ಯಥಾ ಹಾದು ಹೋಗಿಬರಬಹುದಾದಂಥ ಜಾಗವಾಗಿದ್ದರೆ, ಆ ಯಂತ್ರದ ಭಾಗವಾಗಿರದಂಥ

ಯಾವುದೇ ನೆಲೆಗೊಳಿಸಿದ ರಚನೆಯಿಂದ ನಲವತ್ತೈದು ಸೆಂಟಿಮೀಟರುಗಳ ಅಂತರದೊಳಗೆ ಅದರ ಹೊರಮುಖವಾಗಿ ಅಥವಾ ಒಳಮುಖವಾಗಿ ಅಡ್ಡ ಚಲನೆಯಿಂದ ನಡೆಯಲು ಅವಕಾಶ ನೀಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಸ್ಥಾಪಿಸಿರುವ, ಈ ಪ್ರಕರಣದ ಅಗತ್ಯತೆಗಳಿಗೆ ಅನುಗುಣವಾಗಿರದಂಥ ಯಂತ್ರದ ನಿರಂತರ ಬಳಕೆಗೆ, ಅದರ ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ವಿಧಿಸುವುದು ಯೋಗ್ಯವೆಂದು ಚೀಫ್ ಇನ್ಸ್‌ಪೆಕ್ಟರ್‌ನು ಯೋಚಿಸಬಹುದಾದಂಥ ಷರತ್ತುಗಳ ಮೇಲೆ ಆತನು ಅನುಮತಿಸಬಹುದು.

**26. ಹೊಸ ಯಂತ್ರಗಳಿಗೆ ರಕ್ಷಾ ಕವಚ.–** (1) ಈ ಅಧಿನಿಯಮದ ಪ್ರಾರಂಭದ ತರುವಾಯ ವಿದ್ಯುಚ್ಛಕ್ತಿಯಿಂದ ಚಾಲನೆಯಾಗುವ ಮತ್ತು ಯಾವುದೇ ಕಾರ್ಖಾನೆಯಲ್ಲಿ ಸ್ಥಾಪಿಸಿದ ಎಲ್ಲಾ ಯಂತ್ರ ಸಾಮಗ್ರಿಯಲ್ಲಿ,–

(ಎ) ತಿರುಗುತ್ತಿರುವ ಯಾವುದೇ ಷಾಫ್ಟ್‌ನ, ತಿರುಗಚ್ಚಿನ, ಚಕ್ರದ ಅಥವಾ ಸಣ್ಣ ಹಲ್ಲಿನ ಚಕ್ರದ ಮೇಲೆ ಹಾಕಿರುವ ಪ್ರತಿಯೊಂದು ಸ್ಕ್ರೂವನ್ನು, ಬೋಲ್ಟ್‌ನ್ನು ಅಥವಾ ಕೀಯನ್ನು, ಅವುಗಳಿಂದ ಅಪಾಯವಾಗುವುದನ್ನು ತಡೆಗಟ್ಟುವ ಹಾಗೆ ಹುದುಗಿಸಿಟ್ಟಿರತಕ್ಕದ್ದು, ರಕ್ಷಾ ಕವಚ ಹಾಕಿರತಕ್ಕದ್ದು ಅಥವಾ ಅನ್ಯಥಾ ಅವುಗಳಿಗೆ ಪರಿಣಾಮಕಾರಿಯಾದ ರಕ್ಷಣೆ ಕಲ್ಪಿಸಿರತಕ್ಕದ್ದು.

(ಬಿ) ಚಲನೆಯಲ್ಲಿರುವ ಆಗಿಂದಾಗ್ಗೆ ಸರಿಹೊಂದಿಸುವ ಅಗತ್ಯವಿಲ್ಲದಂತಹ ಯಾವ ಚುಚ್ಚುಗಾಲಿಯನ್ನು, ಸಣ್ಣ ತಿರುಪು ಮೊಳೆಯನ್ನು ಮತ್ತು ಇತರ ಹಲ್ಲುಳ್ಳ ಅಥವಾ ಘರ್ಷಣ ಚಾಲಕವನ್ನು, ಯಾವ ಜಾಗದಲ್ಲಿ ಅದಕ್ಕೆ ಸಂಪೂರ್ಣವಾಗಿ ರಕ್ಷಾಕವಚ ಹಾಕಿದ್ದಿದ್ದರೆ ಅದು ಸುರಕ್ಷಿತವಾಗಿರುತ್ತಿತ್ತೋ ಹಾಗೆ ಅಂಥ ಜಾಗದಲ್ಲಿ ಅವು ಸುರಕ್ಷಿತವಾಗಿದ್ದ ಹೊರತು ಅವುಗಳಿಗೆ ಸಂಪೂರ್ಣವಾಗಿ ರಕ್ಷಾಕವಚ ಹಾಕತಕ್ಕದ್ದು.

(2) ಉಪಪ್ರಕರಣ (1)ರ ಅಥವಾ ಉಪಪ್ರಕರಣ (3)ರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಪಬಂಧಗಳನ್ನು ಪಾಲಿಸದೆ ಇರುವಂಥ, ವಿದ್ಯುಚ್ಛಕ್ತಿಯಿಂದ ನಡೆಯುವ ಯಾವುದೇ ಯಂತ್ರೋಪಕರಣವನ್ನು ಕಾರ್ಖಾನೆಯಲ್ಲಿ ಬಳಕೆ ಮಾಡುವುದಕ್ಕಾಗಿ, ಮಾರಾಟ ಮಾಡುವ ಅಥವಾ ಬಾಡಿಗೆಗೆ ಕೊಡುವ ಅಥವಾ ಮಾರಾಟಗಾರನ ಅಥವಾ ಬಾಡಿಗೆಗೆ ತೆಗೆದುಕೊಳ್ಳುವವನ ಏಜೆಂಟನಾಗಿ, ಮಾರಾಟ ಮಾಡುವ ಅಥವಾ ಬಾಡಿಗೆಗೆ ಕೊಡುವಂತೆ ಮಾಡುವ ಅಥವಾ ಮಾರಾಟ ಮಾಡಲು ಅಥವಾ ಬಾಡಿಗೆಗೆ ಕೊಡಲು ಸಂಗ್ರಹಿಸುವ ಯಾರೇ ಆಗಲಿ, ಮೂರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ನಿರ್ದಿಷ್ಟ ಯಂತ್ರದ ಅಥವಾ ವರ್ಗದ ಅಥವಾ ವರ್ಣನೆಯ ಯಂತ್ರಗಳ ಯಾವುದೇ ಇತರೆ ಅಪಾಯಕಾರಿ ಭಾಗಕ್ಕೆ ಸಂಬಂಧಿಸಿದಂತೆ ಒದಗಿಸಬೇಕಾದ ಇನ್ನೂ ಹೆಚ್ಚಿನ ರಕ್ಷಣೋಪಾಯಗಳನ್ನು ನಿರ್ದಿಷ್ಟಪಡಿಸಿ ನಿಯಮಗಳನ್ನು ರಚಿಸಬಹುದು.

**27. ಹತ್ತಿಯನ್ನು ಹಿಂಜುವ ಸಾಧನಗಳ ಬಳಿ ಮಹಿಳೆಯರ ಮತ್ತು ಮಕ್ಕಳ ನಿಯೋಜನೆಗೆ ನಿಷೇಧ.–** ಯಾವ ಕಾರ್ಖಾನೆಯಲ್ಲಿ ಹತ್ತಿಯನ್ನು ಹಿಂಜುವ ಸಾಧನ ನಡೆಯುತ್ತಿದೆಯೋ ಆ ಕಾರ್ಖಾನೆಯ ಯಾವುದೇ ಭಾಗದಲ್ಲಿ ಹತ್ತಿಯನ್ನು ಒತ್ತುವುದಕ್ಕಾಗಿ ಯಾರೇ ಮಹಿಳೆಯನ್ನು ಅಥವಾ ಬಾಲಕ/ಬಾಲಕಿಯನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ:

ಪರಂತು, ಹತ್ತಿಯನ್ನು ಹಿಂಜುವ ಸಾಧನಕ್ಕೆ ಹತ್ತಿಯನ್ನು ಹಾಕುವ ತುದಿಯ ಭಾಗವು, ಮೇಲ್ಭಾವಣಿಗೆ ಅಥವಾ ಇನ್‌ಸ್ಪೆಕ್ಟರ್‌ನು ಯಾವುದೇ ವಿಶಿಷ್ಟ ಪ್ರಕರಣದಲ್ಲಿ ಲಿಖಿತದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಎತ್ತರಕ್ಕೆ ಇರುವ ಅಡ್ಡ ಗೋಡೆಯಿಂದ ಆಚೆ ಇರುವ, ಆ ಸಾಧನದಿಂದ ಹಿಂಜಿದ ಹತ್ತಿಯು ಹೊರಬರುವ ತುದಿಯ ಭಾಗದಿಂದ ಪ್ರತ್ಯೇಕವಾಗಿರುವ ಕೊಠಡಿಯಲ್ಲಿದ್ದರೆ ಮಹಿಳೆಯರು ಮತ್ತು ಮಕ್ಕಳನ್ನು, ಅಡ್ಡಗೋಡೆಯ ಯಾವ ಪಕ್ಕದಲ್ಲಿ, ಹತ್ತಿಯನ್ನು ಹಾಕುವ ತುದಿಯ ಭಾಗವು ಇರುವುದೋ ಆ ಗೋಡೆಯ ಆ ಪಕ್ಕದಲ್ಲಿ ನಿಯೋಜಿಸಿಕೊಳ್ಳಬಹುದು.

**28. ಹಾಇಸ್ಟ್‌ಗಳು ಮತ್ತು ಲಿಫ್ಟ್‌ಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿನ,–

(ಎ) ಪ್ರತಿಯೊಂದು ಹಾಇಸ್ಟ್ ಮತ್ತು ಲಿಫ್ಟ್,–

(i) ಒಳ್ಳೆಯ ಯಾಂತ್ರಿಕ ನಿರ್ಮಾಣದವು, ಗಟ್ಟಿಮುಟ್ಟಾದ ಸಾಮಗ್ರಿ ಉಳ್ಳವು ಮತ್ತು ಸಾಕಷ್ಟು ಬಲವುಳ್ಳವುಗಳಾಗಿರತಕ್ಕದ್ದು;

(ii) ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡತಕ್ಕದ್ದು ಮತ್ತು ಪ್ರತಿ ಆರು ತಿಂಗಳುಗಳ ಅವಧಿಯಲ್ಲಿ ಕನಿಷ್ಠ ಪಕ್ಷ ಒಮ್ಮೆ ಸಕ್ಷಮ ವ್ಯಕ್ತಿಯು ಕೂಲಂಕಷವಾಗಿ ಪರೀಕ್ಷಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪರೀಕ್ಷೆ ಕುರಿತಂತೆ ನಿಯಮಿಸಿದ ವಿವರಗಳನ್ನು ಒಳಗೊಂಡಿರುವ ರಿಜಿಸ್ಟರನ್ನು ಇಡತಕ್ಕದ್ದು;

(ಬಿ) ಪ್ರತಿಯೊಂದು ಹಾಇಸ್ಟ್‌ನ ಚಲನ ಮಾರ್ಗಕ್ಕೆ ಮತ್ತು ಲಿಫ್ಟ್‌ನ ಚಲನ ಮಾರ್ಗಕ್ಕೆ ಗೇಟುಗಳನ್ನು ಜೋಡಿಸಿದ ಆವರಣದಿಂದ ಸಾಕಷ್ಟು ರಕ್ಷಣೆ ಕಲ್ಪಿಸಿರತಕ್ಕದ್ದು ಮತ್ತು ಆ ಹಾಇಸ್ಟ್‌ನ್ನು ಅಥವಾ ಲಿಫ್ಟ್‌ನ್ನು ಮತ್ತು ಅಂಥ ಪ್ರತಿಯೊಂದು ಆವರಣವನ್ನು, ಯಾರೇ ವ್ಯಕ್ತಿಯು ಅಥವಾ ವಸ್ತುವು ಆ ಹಾಇಸ್ಟ್‌ನ ಅಥವಾ ಲಿಫ್ಟ್‌ನ ಯಾವುದೇ ಭಾಗದ ಮತ್ತು ಯಾವುದೇ ನೆಲೆಗೊಳಿಸಿದ ರಚನೆಯ ಅಥವಾ ಚಾಲನ ಭಾಗದ ನಡುವೆ ಸಿಕ್ಕಿಹಾಕಿಕೊಳ್ಳುವುದನ್ನು ತಡೆಗಟ್ಟುವ ಹಾಗೆ ನಿರ್ಮಿಸಿರತಕ್ಕದ್ದು;

(ಸಿ) ಪ್ರತಿಯೊಂದು ಹಾಇಸ್ಟ್ ಅಥವಾ ಲಿಫ್ಟ್‌ನ ಮೇಲೆ ಗರಿಷ್ಠ ಸುರಕ್ಷಿತ ಕೆಲಸದ ಭಾರವನ್ನು ಸ್ಪಷ್ಟವಾಗಿ ಗುರುತು ಮಾಡತಕ್ಕದ್ದು ಮತ್ತು ಅಂಥ ಭಾರಕ್ಕಿಂತ ಹೆಚ್ಚಾದ ಯಾವುದೇ ಭಾರವನ್ನು ಅದರ ಮೇಲೆ ಒಯ್ಯತಕ್ಕದ್ದಲ್ಲ;

(ಡಿ) ವ್ಯಕ್ತಿಗಳನ್ನು ಸಾಗಿಸುವುದಕ್ಕಾಗಿ ಉಪಯೋಗಿಸುವ ಪ್ರತಿಯೊಂದು ಹಾಇಸ್ಟ್‌ನ ಅಥವಾ ಲಿಫ್ಟ್‌ನ ರಕ್ಷಕ ಪಂಜರಕ್ಕೆ, ಇಳಿದು ಹೋಗುವುದಕ್ಕೆ ಅವಕಾಶವಿರುವಂತೆ ಪ್ರತಿಯೊಂದು ಕಡೆ ಗೇಟನ್ನು ಜೋಡಿಸತಕ್ಕದ್ದು;

(ಇ) ಖಂಡ (ಬಿ)ಯಲ್ಲಿ ಅಥವಾ ಖಂಡ (ಡಿ)ಯಲ್ಲಿ ಹೇಳಿರುವ ಪ್ರತಿಯೊಂದು ಗೇಟಿಗೆ ಆ ರಕ್ಷಕ ಪಂಜರವು ನಿಲುಗಡೆ ಸ್ಥಳದಲ್ಲಿ ನಿಲ್ಲದ ಹೊರತು ಆ ಗೇಟನ್ನು ತೆರೆಯಲಾಗದಂತೆ ಮತ್ತು ಆ ಗೇಟನ್ನು ಮುಚ್ಚಿದ್ದ ಹೊರತು ಆ ರಕ್ಷಕ ಪಂಜರವು ಚಲಿಸಲಾಗದಂತೆ ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಅಗುಣಿ ಹಾಕಿಕೊಳ್ಳುವ ಅಥವಾ ಇತರ ಸಮರ್ಥ ಸಾಧನವನ್ನು ಜೋಡಿಸತಕ್ಕದ್ದು.

(2) ಅಧಿನಿಯಮವು ಪ್ರಾರಂಭವಾದ ತರುವಾಯ, ಕಾರ್ಖಾನೆಯಲ್ಲಿ ವ್ಯಕ್ತಿಗಳನ್ನು ಸಾಗಿಸುವುದಕ್ಕಾಗಿ ಉಪಯೋಗಿಸುವ ಮತ್ತು ಸ್ಥಾಪಿಸಿದ ಅಥವಾ ಪುನರ್ ನಿರ್ಮಿಸಿದ ಹಾಇಸ್ಟ್‌ಗಳಿಗೆ ಮತ್ತು ಲಿಫ್ಟ್‌ಗಳಿಗೆ ಈ ಕೆಳಕಂಡ ಹೆಚ್ಚಿನ ಅಗತ್ಯತೆಗಳು ಅನ್ವಯವಾಗತಕ್ಕದ್ದು ಎಂದರೆ,-

(ಎ) ರಕ್ಷಕ ಪಂಜರಕ್ಕೆ, ಹಗ್ಗ ಅಥವಾ ಸರಪಣಿಗೆ ಆಧಾರ ಇದ್ದರೆ ಹೊಂದಿರುವ ರಕ್ಷಕ ಪಂಜರಕ್ಕೆ ಮತ್ತು ಸಮತೂಕಕ್ಕೆ ಪ್ರತ್ಯೇಕವಾಗಿ ಜೋಡಿಸಿದ ಕನಿಷ್ಠಪಕ್ಷ ಎರಡು ಹಗ್ಗಗಳು ಅಥವಾ ಸರಪಣಿಗಳು ಇರತಕ್ಕದ್ದು ಮತ್ತು ಪ್ರತಿಯೊಂದು ಹಗ್ಗ ಅಥವಾ ಸರಪಣಿಯು ಅದರ ಜೋಡಣೆಗಳೊಂದಿಗೆ ಅದರ ಗರಿಷ್ಠ ಭಾರದ ಜೊತೆಗೆ ರಕ್ಷಕ ಪಂಜರದ ಪೂರ್ಣ ಭಾರವನ್ನು ಸಾಗಿಸುವ ಸಾಮರ್ಥ್ಯವನ್ನು ಹೊಂದಿರತಕ್ಕದ್ದು;

(ಬಿ) ಹಗ್ಗಗಳು, ಸರಪಣಿಗಳು ಅಥವಾ ಜೋಡಣೆಗಳು ಕಿತ್ತುಹೋದ ಸಂದರ್ಭದಲ್ಲಿ ಅದರ ಗರಿಷ್ಠ ಭಾರದ ಜೊತೆಗೆ ರಕ್ಷಕ ಪಂಜರಕ್ಕೆ ಆಧಾರ ಒದಗಿಸುವ ಶಕ್ತಿಯುಳ್ಳ ಸಮರ್ಥ ಸಾಧನಗಳನ್ನು ಒದಗಿಸತಕ್ಕದ್ದು ಮತ್ತು ಅವುಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು;

(ಸಿ) ಆ ರಕ್ಷಕ ಪಂಜರವು ತನ್ನ ಸ್ಥಾನದಿಂದ ವಿಚಲಿತವಾಗುವುದನ್ನು ತಡೆಗಟ್ಟಲು ಒಂದು ಸಮರ್ಥ ಸ್ವಯಂಚಾಲಿತ ಸಾಧನವನ್ನು ಒದಗಿಸತಕ್ಕದ್ದು ಮತ್ತು ಇಟ್ಟುಕೊಂಡು ಬರತಕ್ಕದ್ದು.

(3) ಚೀಫ್ ಇನ್ಸ್‌ಪೆಕ್ಟರ್‌ನು, ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ, (1)ನೇ ಉಪಪ್ರಕರಣದ ಉಪಬಂಧಗಳನ್ನು ಪೂರ್ಣವಾಗಿ ಪಾಲಿಸದಂಥ ಕಾರ್ಖಾನೆಯಲ್ಲಿ ಸ್ಥಾಪಿಸಿದ ಹಾಇಸ್ಟ್‌ನ ಅಥವಾ ಲಿಫ್ಟ್‌ನ ಮುಂದುವರೆದ ಉಪಯೋಗವನ್ನು ವಿಧಿಸುವುದು ಸೂಕ್ತವೆಂದು ಅವನು ಭಾವಿಸಬಹುದಾದಂಥ ಸುರಕ್ಷೆಯನ್ನು ಸುನಿಶ್ಚಿತಪಡಿಸುವಂಥ ಷರತ್ತುಗಳ ಮೇಲೆ ಅನುಮತಿಸಬಹುದು.

(4) ರಾಜ್ಯ ಸರ್ಕಾರವು ಯಾವುದೇ ವರ್ಗದ ಅಥವಾ ವರ್ಣನೆಯ ಹಾಇಸ್ಟ್‌ಗೆ ಅಥವಾ ಲಿಫ್ಟ್‌ಗೆ ಸಂಬಂಧಿಸಿದಂತೆ (1) ಮತ್ತು (2)ನೇ ಉಪಪ್ರಕರಣಗಳ ಯಾವುದೇ ಅಗತ್ಯತೆಯನ್ನು ಜಾರಿಗೊಳಿಸುವುದು ಸಮಂಜಸವಲ್ಲವೆಂದು ಅದು ಅಭಿಪ್ರಾಯಪಟ್ಟರೆ, ಅಂಥ ಅಗತ್ಯತೆಯು ಅಂಥ ವರ್ಗದ ಅಥವಾ ವರ್ಣನೆಯ ಹಾಇಸ್ಟ್‌ಗೆ ಅಥವಾ ಲಿಫ್ಟ್‌ಗೆ ಅನ್ವಯವಾಗತಕ್ಕದ್ದಲ್ಲವೆಂದು ಆದೇಶದ ಮೂಲಕ ನಿರ್ದೇಶಿಸಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, ಯಾವುದೇ ಹಾಇಸ್ಟ್‌ನ್ನು ಅಥವಾ ಯಂತ್ರೋಪಕರಣವನ್ನು, ಅದು ಆಧಾರ ಅಟ್ಟೆ ಅಥವಾ ರಕ್ಷಕ ಪಂಜರವನ್ನು ಹೊಂದಿದ್ದ ಹೊರತು, ಅದರ ದಿಕ್ಕನ್ನು ಅಥವಾ ಚಲನೆಯನ್ನು ಮಾರ್ಗದರ್ಶಕದಿಂದ ಅಥವಾ ಮಾರ್ಗದರ್ಶಕಗಳ ಮೂಲಕ ನಿರ್ಬಂಧಿಸಿದ್ದ ಹೊರತು ಅದನ್ನು ಹಾಇಸ್ಟ್ ಅಥವಾ ಲಿಫ್ಟ್ ಎಂದು ಭಾವಿಸತಕ್ಕದ್ದಲ್ಲ.

**29. ಹಾಇಸ್ಟ್, ಸರಪಣಿಗಳು, ಹಗ್ಗಗಳು ಮತ್ತು ಎತ್ತುವ ಸಲಕರಣೆಗಳು.–** (1) ಯಾವುದೇ ಕಾರ್ಖಾನೆಯಲ್ಲಿ ವ್ಯಕ್ತಿಗಳನ್ನು, ಸರಕುಗಳನ್ನು ಅಥವಾ ಸಾಮಗ್ರಿಗಳನ್ನು ಎತ್ತುವ ಅಥವಾ ಇಳಿಸುವ ಉದ್ದೇಶಕ್ಕಾಗಿ ಪ್ರತಿಯೊಂದು ಹಾಇಸ್ಟ್‌ಗೆ, (ಹಾಇಸ್ಟ್‌ನ್ನು ಮತ್ತು ಲಿಫ್ಟ್‌ನ್ನು ಹೊರತುಪಡಿಸಿ) ಮತ್ತು ಪ್ರತಿಯೊಂದು ಸರಪಣಿ ಹಗ್ಗಕ್ಕೆ ಮತ್ತು ಎತ್ತುವ ಯಂತ್ರ ಸಲಕರಣೆಗೆ ಸಂಬಂಧಿಸಿದಂತೆ ಈ ಕೆಳಕಂಡ ಉಪಬಂಧಗಳನ್ನು ಪಾಲಿಸತಕ್ಕದ್ದು:-

(ಎ) ಪ್ರತಿಯೊಂದು ಎತ್ತುವ ಯಂತ್ರದ ವರ್ಕಿಂಗ್ ಗೇರನ್ನು ಒಳಗೊಂಡು, ಅದನ್ನು ಸ್ಥಿರವಾಗಿ ನೆಲೆಗೊಳಿಸಿರಲಿ ಅಥವಾ ಅದು ಚಲನೆಯುಳ್ಳದ್ದೇ ಆಗಿರಲಿ ಅದನ್ನು ಒಳಗೊಂಡು ಎಲ್ಲಾ ಭಾಗಗಳು ಮತ್ತು ಪ್ರತಿಯೊಂದು ಸರಪಣಿಯು, ಹಗ್ಗವು ಅಥವಾ ಎತ್ತುವ ಸಲಕರಣೆಯು,-

(i) ಒಳ್ಳೆ ನಿರ್ಮಾಣದವು, ಗಟ್ಟಿಮುಟ್ಟಾದ ಸಾಮಗ್ರಿಯವು ಮತ್ತು ಸಾಕಷ್ಟು ಬಲವುಳ್ಳದ್ದಾಗಿರತಕ್ಕದ್ದು ಮತ್ತು ದೋಷಗಳಿಂದ ಮುಕ್ತವಾಗಿರತಕ್ಕದ್ದು;

(ii) ಅವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡತಕ್ಕದ್ದು;

(iii) ಅವುಗಳನ್ನು ಪ್ರತಿ ಹನ್ನೆರಡು ತಿಂಗಳುಗಳ ಅವಧಿಯಲ್ಲಿ ಕನಿಷ್ಠಪಕ್ಷ ಒಂದು ಸಲ ಅಥವಾ ಚೀಫ್ ಇನ್ಸ್‌ಪೆಕ್ಟರ್‌ನು ಬರಹದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಮಧ್ಯಂತರಗಳಲ್ಲಿ ಸಕ್ಷಮ ವ್ಯಕ್ತಿಯು ಕೂಲಂಕಷವಾಗಿ ಪರೀಕ್ಷಿಸತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪರೀಕ್ಷೆ ಕುರಿತಂತೆ ನಿಯಮಿಸಿದ ವಿವರಣೆಗಳನ್ನು ಒಳಗೊಂಡ ರಿಜಿಸ್ಟರನ್ನು ಇಡತಕ್ಕದ್ದು;

(ಬಿ) ಪರೀಕ್ಷೆಯ ಉದ್ದೇಶಕ್ಕಾಗಿ ಹೊರತು, ಯಾವುದೇ ಎತ್ತುವ ಯಂತ್ರದ ಮತ್ತು ಯಾವುದೇ ಸರಪಣಿಯ, ಹಗ್ಗದ ಅಥವಾ ಎತ್ತುವ ಸಲಕರಣೆಯ ಮೇಲೆ ಅದು ಸಲೀಸಾಗಿ ಸುರಕ್ಷಿತವಾಗಿ ಎತ್ತುವ ಭಾರವನ್ನು ಮೀರಿ ಭಾರವನ್ನು ಹೊರಿಸತಕ್ಕದ್ದಲ್ಲ, ಆ ಭಾರವನ್ನು ಸ್ಪಷ್ಟವಾಗಿ ಅದರ ಮೇಲೆ ಗುರುತು ಚಿಹ್ನೆಯೊಂದಿಗೆ ಗುರುತು ಮಾಡತಕ್ಕದ್ದು ಮತ್ತು ನಿಯಮಿಸಿದ ರಿಜಿಸ್ಟರಿನಲ್ಲಿ ಕ್ರಮಬದ್ಧವಾಗಿ ನಮೂದಿಸತಕ್ಕದ್ದು ಮತ್ತು ಇದು ಸಾಧ್ಯವಾಗದಿದ್ದರೆ, ಬಳಕೆಯಲ್ಲಿರುವ ಪ್ರತಿಯೊಂದು ಬಗೆಯ ಮತ್ತು ಗಾತ್ರದ ಎತ್ತುವ ಯಂತ್ರ ಅಥವಾ ಸರಪಣಿ, ಹಗ್ಗ ಅಥವಾ ಎತ್ತುವ ಸಲಕರಣೆಯ ಸುರಕ್ಷಿತ ಎತ್ತು ಭಾರವನ್ನು ತೋರಿಸುವ ಕೋಷ್ಟಕವನ್ನು ಆ ಆವರಣದ ಎದ್ದುಕಾಣುವ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು;

(ಸಿ) ಚಲನೆಯಲ್ಲಿರುವ ಕ್ರೇನಿನ ಗಾಲಿ ಮಾರ್ಗದಲ್ಲಿ ಅಥವಾ ಯಾರೇ ವ್ಯಕ್ತಿಗೆ ಕ್ರೇನ್ ತಗುಲಿ ಪೆಟ್ಟು ಬೀಳಬಹುದಾದ ಯಾವುದೇ ಸ್ಥಳದಲ್ಲಿ ಆ ವ್ಯಕ್ತಿಯು ನಿಯೋಜಿತನಾಗಿದ್ದರೆ ಅಥವಾ ಕೆಲಸ ಮಾಡುತ್ತಿದ್ದರೆ ಆ ಸ್ಥಳದಿಂದ ಆರು ಮೀಟರುಗಳೊಳಗೆ ಆ ಕ್ರೇನು ಹತ್ತಿರಕ್ಕೆ ಬರದಿರುವುದನ್ನು ಸುನಿಶ್ಚಿತಪಡಿಸಿಕೊಳ್ಳಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ರಾಜ್ಯ ಸರ್ಕಾರವು, ಕಾರ್ಖಾನೆಗಳಲ್ಲಿ ಬಳಕೆ ಮಾಡುವ ಯಾವುದೇ ಎತ್ತುವ ಯಂತ್ರ ಅಥವಾ ಯಾವುದೇ ಸರಪಣಿ, ಹಗ್ಗ ಅಥವಾ ಎತ್ತು ಸಲಕರಣೆಗೆ ಸಂಬಂಧಿಸಿದಂತೆ,–

(ಎ) ಈ ಪ್ರಕರಣದಲ್ಲಿ ಹೇಳಿರುವ ಅಗತ್ಯತೆಗಳ ಜೊತೆಗೆ ಪಾಲಿಸಬೇಕಾದ ಹೆಚ್ಚಿನ ಅಗತ್ಯತೆಗಳನ್ನು ನಿಯಮಿಸಿ;

(ಬಿ) ಅಂಥ ಪಾಲನೆಯು ಅನವಶ್ಯಕವಾದುದೆಂದು ಅಥವಾ ಕಾರ್ಯಸಾಧ್ಯವಾದುದಲ್ಲವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುವಲ್ಲಿ ಈ ಪ್ರಕರಣದ ಎಲ್ಲ ಅಥವಾ ಯಾವುದೇ ಅಗತ್ಯತೆಗಳನ್ನು ಪಾಲಿಸಬೇಕಾಗಿಲ್ಲವೆಂದು ವಿನಾಯಿತಿಯನ್ನು ಕಲ್ಪಿಸಿ

– ನಿಯಮಗಳನ್ನು ರಚಿಸಬಹುದು.

(3) ಈ ಪ್ರಕರಣದ ಉದ್ದೇಶಗಳಿಗಾಗಿ ಎತ್ತುವ ಯಂತ್ರ ಅಥವಾ ಸರಪಣಿ, ಹಗ್ಗ ಅಥವಾ ಎತ್ತುವ ಸಲಕರಣೆಯನ್ನು, ಕಣ್ಣಿಂದ ನೋಡಿ ಅವಶ್ಯವಾದರೆ ಇತರ ರೀತಿಯಿಂದ ಮತ್ತು ಗೇರ್‌ನ ಭಾಗಗಳನ್ನು ಬಿಚ್ಚಿ ಆ ಭಾಗಗಳ ಸುರಕ್ಷತೆಯ ಬಗ್ಗೆ ವಿಶ್ವಾಸನೀಯ ನಿರ್ಣಯಕ್ಕೆ ಬರುವ ದೃಷ್ಟಿಯಿಂದ ಪರಿಸ್ಥಿತಿಗಳಿಗೆ ಅನುಗುಣವಾಗಿ ಅವಕಾಶ ಮಾಡಿಕೊಟ್ಟಂತೆ ಜಾಗರೂಕತೆಯಿಂದ ಪರೀಕ್ಷಿಸಿದ್ದರೆ ಅವುಗಳನ್ನು ಕೂಲಂಕುಷವಾಗಿ ಪರೀಕ್ಷಿಸಲಾಗಿದೆ ಎಂದು ಭಾವಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದಲ್ಲಿ,–

(ಎ) "ಎತ್ತುವ ಯಂತ್ರ" ಎಂದರೆ ಕ್ರೇನು, ಕ್ರಾಬ್, ವಿಂಚ್, ಟೀಗಲ್, ರಾಟೆ ಜೋಡಣೆ, ಜಿನ್‌ವೀಲ್, ಸಾಗಣೆ ಸಲಕರಣೆ ಅಥವಾ ರನ್‌ವೇ ಎಂದು ಅರ್ಥ;

(ಬಿ) "ಎತ್ತುವ ಯಂತ್ರಸಲಕರಣೆ" ಎಂದರೆ ಎತ್ತುವ ಯಂತ್ರಗಳನ್ನು ಬಳಸಿ ವ್ಯಕ್ತಿಗಳನ್ನು ಅಥವಾ ಭಾರಗಳನ್ನು ಎತ್ತುವುದಕ್ಕೆ ಅಥವಾ ಇಳಿಸುವುದಕ್ಕೆ ಸಂಬಂಧಿಸಿದಂತೆ ಬಳಸುವ, ಸ್ಥಿರವಾಗಿ ನೆಲೆಗೊಳಿಸಿದ್ದಾಗಿರಲಿ ಅಥವಾ ಚಲನೆವುಳ್ಳದ್ದಾಗಿರಲಿ ಯಾವುದೇ ಸರಪಣಿಯ ತೂಗು ಪಟ್ಟಿ, ಹಗ್ಗದ ತೂಗು ಪಟ್ಟಿಗಳು, ಕೊಂಡಿ, ಲೋಹದ ಕೊಂಡಿ, ಕೀಲು, ಕೂಡುಕೊಂಡಿ, ಸಾಕೆಟ್, ಕ್ಲ್ಯಾಂಪ್, ಟ್ರೇ ಅಥವಾ ಅಂಥದೇ ಯಂತ್ರೋಪಕರಣಗಳು.

**30. ಆವರ್ತನ ಯಂತ್ರೋಪಕರಣ.–** (1) ಅರೆಯುವ ಪ್ರಕ್ರಿಯೆಯನ್ನು ನಡೆಸುತ್ತಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ, ಬಳಕೆಯಲ್ಲಿರುವ ಪ್ರತಿಯೊಂದು ಯಂತ್ರಕ್ಕೆ ಅಥವಾ ಅದರ ಹತ್ತಿರದಲ್ಲಿ ಪ್ರತಿಯೊಂದು ಬೀಸುವ ಕಲ್ಲಿನ ಅಥವಾ ಸಾಣೆ ಚಕ್ರದ ಹೊರ ಅಂಚಿನ ಗರಿಷ್ಠ ಸುರಕ್ಷಿತ ವೇಗ, ಚಕ್ರವನ್ನು ಕೂಡಿಸಿರುವಂಥ ಚಾಲಕದಂಡ ಅಥವಾ ತಿರುಗಚ್ಚಿನ ವೇಗ ಮತ್ತು ಅಂಥ ಹೊರ ಅಂಚಿನ ಕ್ರಿಯೆಯ ಸುರಕ್ಷಿತ ವೇಗವನ್ನು ಸುನಿಶ್ಚಿತಗೊಳಿಸಲು ಅವಶ್ಯಕವಾದ ಚಾಲಕದಂಡ ಅಥವಾ ತಿರುಗಚ್ಚಿನ ಮೇಲಿನ ರಾಟೆಯ ವ್ಯಾಸವನ್ನು ಸೂಚಿಸುವ ನೋಟೀಸನ್ನು ಖಾಯಂ ಆಗಿ ಅದಕ್ಕೆ ಅಂಟಿಸತಕ್ಕದ್ದು ಅಥವಾ ಅದರ ಬಳಿ ಇಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗಿನ ನೋಟೀಸುಗಳಲ್ಲಿ ಸೂಚಿಸಿರುವ ವೇಗಗಳನ್ನು ಮೀರತಕ್ಕದ್ದಲ್ಲ.

(3) ಪ್ರತಿಯೊಂದು ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯಿಂದ ಚಾಲಿತವಾದ ಪ್ರತಿಯೊಂದು ತಿರುಗುವ ಪಾತ್ರೆ, ರಕ್ಷಕ ಪಂಜರ, ಬುಟ್ಟಿ, ಚಲನೆಯಲ್ಲಿರುವ ಚಕ್ರ, ರಾಟೆ, ಚಕ್ರ ಅಥವಾ ಅಂಥದೇ ಉಪಕರಣದ ಹೊರ ಅಂಚಿನ ಕ್ರಿಯೆಯ ಸುರಕ್ಷಿತ ವೇಗವನ್ನು ಮೀರಿಲ್ಲ ಎಂಬುದನ್ನು ಸುನಿಶ್ಚಿತಪಡಿಸಿಕೊಳ್ಳಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**31. ಸುರಕ್ಷಿತ ಒತ್ತಡ ಸ್ಥಿರಯಂತ್ರ.–** (1) ಯಾವುದೇ ಕಾರ್ಖಾನೆಯಲ್ಲಿ ಯಾವುದೇ ಸ್ಥಿರಯಂತ್ರ ಅಥವಾ ಯಂತ್ರಸಾಮಗ್ರಿ ಅಥವಾ ಅದರ ಯಾವುದೇ ಭಾಗವು, ವಾತಾವರಣದ ಒತ್ತಡಕ್ಕಿಂತ ಹೆಚ್ಚಿನ ಒತ್ತಡದಲ್ಲಿ ನಡೆಯುತ್ತಿದ್ದರೆ, ಅಂಥ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯ ಅಥವಾ ಅದರ ಭಾಗದ ಕ್ರಿಯೆಯು ಸುರಕ್ಷಿತ ಒತ್ತಡವನ್ನು ಮೀರದಂತೆ ಸುನಿಶ್ಚಿತಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ರಾಜ್ಯ ಸರ್ಕಾರವು, (1)ನೇ ಉಪಪ್ರಕರಣದಲ್ಲಿ ಹೇಳಿರುವಂತಹ ಯಾವುದೇ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯ ಪರಿಶೀಲನೆಗಾಗಿ ಅಥವಾ ಪರೀಕ್ಷೆಗಾಗಿ ಉಪಬಂಧಿಸುವ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ಕಾರ್ಖಾನೆಯಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ, ಇತರ ಸುರಕ್ಷಾ ಕ್ರಮಗಳು ಅವಶ್ಯವಾಗಿವೆಯೆಂದು ಅಭಿಪ್ರಾಯಪಟ್ಟರೆ ಅಂಥ ಇತರ ಸುರಕ್ಷಾ ಕ್ರಮಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

(3) ರಾಜ್ಯ ಸರ್ಕಾರವು, ನಿಯಮಗಳ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, (1)ನೇ ಉಪಪ್ರಕರಣದಲ್ಲಿ ಹೇಳಿರುವ ಯಾವುದೇ ಸ್ಥಿರ ಯಂತ್ರಕ್ಕೆ ಅಥವಾ ಯಂತ್ರ ಸಾಮಗ್ರಿಯ ಯಾವುದೇ ಭಾಗಕ್ಕೆ ಈ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿಗೊಳಿಸಬಹುದು.

**32. ಅಂತಸ್ತುಗಳು, ಮೆಟ್ಟಿಲುಗಳು ಮತ್ತು ದಾರಿ ಮಾರ್ಗಗಳು.–** ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ಎಲ್ಲ ಅಂತಸ್ತುಗಳು, ಪಾವಟಿಗೆಗಳು, ಮೆಟ್ಟಿಲುಗಳು, ದಾರಿಗಳು ಮತ್ತು ಗ್ಯಾಂಗ್‌ವೇಗಳು ಗಟ್ಟಿಮುಟ್ಟಾದ ರಚನೆಯವಾಗಿರತಕ್ಕದ್ದು ಮತ್ತು ಅವುಗಳನ್ನು ಸರಿಯಾಗಿ ಸುಸ್ಥಿತಿಯಲ್ಲಿಟ್ಟಿರತಕ್ಕದ್ದು ಮತ್ತು ಅವುಗಳನ್ನು ಅಡೆತಡೆಗಳಿರದಂತೆ ಮತ್ತು ವ್ಯಕ್ತಿಗಳು ಜಾರುವಂತೆ ಮಾಡುವ ಸಂಭವವಿರುವ ವಸ್ತುಗಳಿರದಂತೆ ಮುಕ್ತವಾಗಿಟ್ಟಿರತಕ್ಕದ್ದು. ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳುವಂತೆ ಇದ್ದರೆ, ಅವಶ್ಯ ಪಾವಟಿಗೆಗಳು, ಮೆಟ್ಟಿಲುಗಳು, ದಾರಿಗಳು ಮತ್ತು ಗ್ಯಾಂಗ್ ವೇಗಳಿಗೆ ಸಾಕಷ್ಟು ಹಿಡಿ ಕಂಬಿಗಳನ್ನು ಒದಗಿಸತಕ್ಕದ್ದು;

(ಬಿ) ಯಾರೇ ವ್ಯಕ್ತಿಯು, ಯಾವುದೇ ಕಾಲದಲ್ಲಿ ಯಾವ ಸ್ಥಳದಲ್ಲಿ ಕೆಲಸ ಮಾಡಲು ಅಗತ್ಯಪಡಿಸಲಾಗಿದೆಯೋ ಆ ಪ್ರತಿಯೊಂದು ಸ್ಥಳಕ್ಕೆ ಯುಕ್ತವಾಗಿ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಸುರಕ್ಷಿತ ದಾರಿ ಮಾರ್ಗವನ್ನು ಒದಗಿಸತಕ್ಕದ್ದು ಮತ್ತು ನಿರ್ವಹಣೆ ಮಾಡತಕ್ಕದ್ದು;

(ಸಿ) ಯಾರೇ ವ್ಯಕ್ತಿಯು, ಅವನು ಬೀಳುವ ಸಂಭವವಿರುವಂತಹ ಎತ್ತರದ ಸ್ಥಳದಲ್ಲಿ ಕೆಲಸ ಮಾಡಬೇಕಾದಾಗ ಹಾಗೆ ಕೆಲಸ ಮಾಡುವ ವ್ಯಕ್ತಿಯ ಸುರಕ್ಷತೆಯನ್ನು ಸುನಿಶ್ಚಿತಪಡಿಸಿಕೊಳ್ಳಲು, ಯುಕ್ತವಾಗಿ ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ ಬೇಲಿ ಹಾಕಿ ಅಥವಾ ಬೇರೆ ರೀತಿಯ ವ್ಯವಸ್ಥೆ ಮಾಡತಕ್ಕದ್ದು.

**33. ನೆಲದಲ್ಲಿನ ಗುಂಡಿಗಳು, ಸಂಪುಗಳು ಮತ್ತು ಸಂದುಗಳು ಇತ್ಯಾದಿ.–** (1) ಪ್ರತಿಯೊಂದು ಕಾರ್ಖಾನೆಯ ಭೂಮಿಯಲ್ಲಿ ಅಥವಾ ನೆಲದಲ್ಲಿ ಅದರ ಆಳ ಇರುವ ಜಾಗ, ರಚನೆ ಅಥವಾ ಒಳಾಂಶಗಳ ಕಾರಣಗಳಿಂದಾಗಿ ಅಪಾಯದ ಮೂಲವಾಗಿರುವ ಅಥವಾ ಆಗಬಹುದಾದಂಥ ಪ್ರತಿಯೊಂದು ನೆಲಗೊಳಿಸಿದ ಪಾತ್ರೆ, ಸಂಪು, ಟ್ಯಾಂಕು, ಗುಂಡಿ ಅಥವಾ ಸಂದನ್ನು ಭದ್ರವಾಗಿ ಮುಚ್ಚತಕ್ಕದ್ದು ಮತ್ತು ಭದ್ರವಾಗಿ ಅದಕ್ಕೆ ಬೇಲಿ ಹಾಕತಕ್ಕದ್ದು.

(2) ರಾಜ್ಯ ಸರ್ಕಾರವು ಲಿಖಿತ ಆದೇಶದ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಯಾವುದೇ ಪಾತ್ರೆ, ಸಂಪು, ಟ್ಯಾಂಕು, ಗುಂಡಿ ಅಥವಾ ಸಂದುಗಳಿಗೆ ಸಂಬಂಧಿಸಿದಂತೆ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಈ ಪ್ರಕರಣದ ಉಪಬಂಧ ಪಾಲಿಸುವುದರಿಂದ ವಿನಾಯಿತಿಗೊಳಿಸಬಹುದು.

**34. ಮಿತಿ ಮೀರಿದ ಭಾರಗಳು.–** (1) ಯಾರೇ ವ್ಯಕ್ತಿಯನ್ನು ಯಾವುದೇ ಕಾರ್ಖಾನೆಯಲ್ಲಿ ಅವನಿಗೆ ಗಾಯ, ಹಾನಿಯನ್ನು ಉಂಟುಮಾಡುವ ಸಂಭವವಿರುವಂಥ ಭಾರವುಳ್ಳ ಹೊರೆಯನ್ನು ಎತ್ತಲು, ಒಯ್ಯಲು ಅಥವಾ ಕದಲಿಸಲು ನಿಯೋಜಿಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಕಾರ್ಖಾನೆಗಳಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ಕಾರ್ಯವಿಧಾನವನ್ನು ನಡೆಸುವುದರಲ್ಲಿ ನಿಯೋಜಿತರಾದ ವಯಸ್ಕ ಪುರುಷರು, ವಯಸ್ಕ ಮಹಿಳೆಯರು, ತರುಣರು ಮತ್ತು ಮಕ್ಕಳು ಎತ್ತಬಹುದಾದ, ಒಯ್ಯಬಹುದಾದ ಅಥವಾ ಕದಲಿಸಬಹುದಾದಂಥ ಗರಿಷ್ಠ ಭಾರಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

**35. ಕಣ್ಣುಗಳ ಸಂರಕ್ಷಣೆ.–** ಯಾವುದೇ ಕಾರ್ಖಾನೆಯಲ್ಲಿ ನಿಯಮಿಸಬಹುದಾದಂಥ ಯಾವುದೇ ತಯಾರಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಅದು,–

(ಎ) ಪ್ರಕ್ರಿಯೆ ನಡೆಯುತ್ತಿರುವಾಗ ಹಾರಿ ಬರುವ ಕಣಗಳು ಅಥವಾ ಚೂರುಗಳಿಂದ ಕಣ್ಣುಗಳಿಗೆ ಹಾನಿಯುಂಟಾಗುವ ಅಪಾಯಕ್ಕೆ; ಅಥವಾ

(ಬಿ) ಮಿತಿಮೀರಿದ ಬೆಳಕಿಗೆ ಕಣ್ಣುಗಳನ್ನು ಒಡ್ಡುವ ಕಾರಣದಿಂದಾಗಿ ಅವುಗಳು ಅಪಾಯಕ್ಕೆ ಒಳಗಾಗುವಂಥ ಪ್ರಕ್ರಿಯೆಯಾಗಿದ್ದರೆ

– ಆ ಪ್ರಕ್ರಿಯೆಯಲ್ಲಿ ಅಥವಾ ಅದರ ನಿಕಟ ಸಾಮಿಪ್ಯದಲ್ಲಿ ನಿಯೋಜಿತರಾದ ವ್ಯಕ್ತಿಗಳ ಸಂರಕ್ಷಣೆಗಾಗಿ ಪರಿಣಾಮಕಾರಿಯಾದ ಪರದೆಗಳನ್ನು ಅಥವಾ ಸೂಕ್ತ ರಕ್ಷಾ ಕನ್ನಡಕಗಳನ್ನು ಒದಗಿಸತಕ್ಕದ್ದೆಂದು ರಾಜ್ಯ ಸರ್ಕಾರವು ನಿಯಮಗಳ ಮೂಲಕ ಅಗತ್ಯಪಡಿಸಬಹುದು.

**36. ಅಪಾಯಕಾರಿ ಹೊಗೆ, ಅನಿಲ ಇತ್ಯಾದಿಗಳ ವಿರುದ್ಧ ಮುನ್ನೆಚ್ಚರಿಕೆಗಳು.–** (1) ಯಾವುದೇ ಕಾರ್ಖಾನೆಯಲ್ಲಿ ಯಾರೇ ವ್ಯಕ್ತಿಯನ್ನು, ಸಾಕಷ್ಟು ಗಾತ್ರದ ಆಳುಗುಂಡಿ ಅಥವಾ ನಿರ್ಗಮನದ ಇತರ ಪರಿಣಾಮಕಾರಿ ಸಾಧನಗಳನ್ನು ಒದಗಿಸಿದ್ದ ಹೊರತು, ಯಾವುದೇ ಅನಿಲ, ಹೊಗೆ, ಆವಿ ಅಥವಾ ಧೂಳಿನಿಂದ ವ್ಯಕ್ತಿಗಳು ಬಳಲುವ ಅಪಾಯಕ್ಕೆ ಒಳಗಾಗುವಷ್ಟರಮಟ್ಟಿಗೆ ಇರುವ ಸಂಭವವಿರುವಂತಹ ಯಾವುದೇ ಚೇಂಬರು, ಟ್ಯಾಂಕು, ಪೀಪಾಯಿ, ಗುಂಡಿ, ಕೊಳವೆ, ಹೊಗೆನಳಿಕೆ ಅಥವಾ ಇತರ ಪರಿವೃತ್ತ ಜಾಗಕ್ಕೆ ಪ್ರವೇಶಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯನ್ನು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ಪರಿವೃತ್ತ ಸ್ಥಳವನ್ನು ಪ್ರವೇಶಿಸಲು, ಅಲ್ಲಿರಬಹುದಾದ ಯಾವುದೇ ಅನಿಲ, ಹೊಗೆ, ಆವಿ ಅಥವಾ ಧೂಳನ್ನು ಅದರ ಮಟ್ಟವನ್ನು ಅನುಮತಿಸಬಹುದಾದ ಪರಿಮಿತಿಯೊಳಗೆ ತರುವ ಹಾಗೆ ನಿವಾರಿಸಲು ಮತ್ತು ಅಂಥ ಅನಿಲ, ಹೊಗೆ, ಆವಿ ಅಥವಾ ಧೂಳು ಬರುವುದನ್ನು ತಡೆಗಟ್ಟಲು ಸಾಧ್ಯವಾಗಬಹುದಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವವರೆಗೆ, ಮತ್ತು,–

(ಎ) ಆ ಸ್ಥಳವು ಅಪಾಯಕಾರಿ ಅನಿಲ, ಹೊಗೆ, ಆವಿ ಅಥವಾ ಧೂಳಿನಿಂದ ಯುಕ್ತವಾಗಿ ಮುಕ್ತವಾಗಿದೆಯೆಂದು ಸಕ್ಷಮ ವ್ಯಕ್ತಿಯು ಅವನೇ ನಡೆಸಿದ ಪರೀಕ್ಷೆಯ ಆಧಾರದ ಮೇಲೆ ಲಿಖಿತದಲ್ಲಿನ ಪ್ರಮಾಣಪತ್ರವನ್ನು ನೀಡಿದ ಹೊರತು; ಅಥವಾ

(ಬಿ) ಅಂಥ ವ್ಯಕ್ತಿಯು, ಸೂಕ್ತವಾದ ಉಸಿರಾಟದ ಸಲಕರಣೆಗಳನ್ನು ತೊಟ್ಟಿದ್ದ ಹೊರತು ಮತ್ತು ಯಾವ ಹಗ್ಗದ ತುದಿಯನ್ನು ಆ ಪರಿವೃತ್ತ ಜಾಗದ ಹೊರಗಡೆ ನಿಂತಿರುವ ವ್ಯಕ್ತಿಯು ಹಿಡಿದಿರುವನೋ ಆ ಹಗ್ಗಕ್ಕೆ ಭದ್ರವಾಗಿ ಲಗತ್ತಿಸಿದ ಬೆಲ್ಟನ್ನು ಧರಿಸಿದ್ದ ಹೊರತು

– ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

**36ಎ. ಒಯ್ಯಬಹುದಾದ ವಿದ್ಯುತ್ ದೀಪವನ್ನು ಬಳಸುವ ಬಗ್ಗೆ ಮುನ್ನೆಚ್ಚರಿಕೆಗಳು.–** ಯಾವುದೇ ಕಾರ್ಖಾನೆಯಲ್ಲಿ,–

(ಎ) ಇಪ್ಪತ್ನಾಲ್ಕು ವೋಲ್ಟುಗಳನ್ನು ಮೀರಿದ ವೋಲ್ಟೇಜಿನ ಯಾವುದೇ ಸಾಗಿಸಬಹುದಾದ ವಿದ್ಯುತ್‌ದೀಪ ಅಥವಾ ಯಾವುದೇ ಇತರ ವಿದ್ಯುತ್ ಪರಿಕರಗಳನ್ನು ಸಾಕಷ್ಟು ಸುರಕ್ಷಿತ ಸಾಧನಗಳನ್ನು ಒದಗಿಸಿದ ಹೊರತು ಯಾವುದೇ

ಚೇಂಬರು, ಟ್ಯಾಂಕು, ಪೀಪಾಯಿ, ಗುಂಡಿ, ಕೊಳವೆ, ಹೊಗೆ ನಳಿಕೆ ಅಥವಾ ಇತರ ಪರಿವೃತ್ತ ಜಾಗದೊಳಗೆ ಬಳಸಲು ಅನುಮತಿಸತಕ್ಕದ್ದಲ್ಲ; ಮತ್ತು

(ಬಿ) ಯಾವುದೇ ಸುಲಭದಹ್ಯ, ಅನಿಲ, ಹೊಗೆ ಅಥವಾ ಧೂಳು, ಅಂಥ ಚೇಂಬರು, ಟ್ಯಾಂಕು, ಪೀಪಾಯಿ, ಗುಂಡಿ, ಕೊಳವೆ, ಹೊಗೆನಳಿಕೆ ಅಥವಾ ಇತರ ಪರಿವೃತ್ತ ಜಾಗದಲ್ಲಿ ಇರುವ ಸಂಭವ ಇದ್ದರೆ ಜ್ವಾಲಾ ನಿರೋಧಕ ರಚನೆಯಲ್ಲದ ಯಾವುದೇ ಲ್ಯಾಂಪು ಅಥವಾ ದೀಪವನ್ನು ಬಳಸಲು ಅನುಮತಿಸತಕ್ಕದ್ದಲ್ಲ.

**37. ಸ್ಫೋಟಕ ಅಥವಾ ಸುಲಭದಹ್ಯ, ಧೂಳು, ಅನಿಲ ಇತ್ಯಾದಿಗಳು.–** (1) ಯಾವುದೇ ಕಾರ್ಖಾನೆಯಲ್ಲಿ ಯಾವುದೇ ತಯಾರಿಕಾ ಪ್ರಕ್ರಿಯೆಯು ಉರಿ ಹತ್ತಿಸಿದರೆ ಸ್ಫೋಟವಾಗುವ ಸಂಭವವಿರುವಂಥ ಸ್ವರೂಪದ ಮತ್ತು ಅಷ್ಟರಮಟ್ಟಿಗಿನ ಧೂಳು, ಅನಿಲ, ಹೊಗೆ ಅಥವಾ ಆವಿಯನ್ನು ಉತ್ಪಾದಿಸುವಲ್ಲಿ,–

(ಎ) ಆ ಪ್ರಕ್ರಿಯೆಯಲ್ಲಿ ಬಳಕೆ ಮಾಡುವ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯನ್ನು ಪರಿಣಾಮಕಾರಿಯಾಗಿ ಆವೃತಗೊಳಿಸುವ;

(ಬಿ) ಅಂಥ ಧೂಳು, ಅನಿಲ, ಹೊಗೆ ಅಥವಾ ಆವಿಯು ಸಂಗ್ರಹವಾಗುವುದನ್ನು ನಿವಾರಿಸುವ ಅಥವಾ ತಡೆಗಟ್ಟುವ;

(ಸಿ) ಉರಿ ಹತ್ತುವುದು ಸಾಧ್ಯವಿರುವ ಎಲ್ಲಾ ಮೂಲಗಳನ್ನು ಹೊರತುಪಡಿಸುವ ಅಥವಾ ಪರಿಣಾಮಕಾರಿಯಾಗಿ ಆವೃತಗೊಳಿಸುವ ಮೂಲಕ

– ಯಾವುದೇ ಅಂಥ ಸ್ಫೋಟವನ್ನು ತಡೆಗಟ್ಟಲು ಕಾರ್ಯಸಾಧ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಯಾವುದೇ ಕಾರ್ಖಾನೆಯಲ್ಲಿ (1)ನೇ ಉಪಪ್ರಕರಣದಲ್ಲಿ ಹೇಳಿರುವಂಥ ಪ್ರಕ್ರಿಯೆಯಲ್ಲಿ ಬಳಕೆ ಮಾಡುವ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯನ್ನು ಹಿಂದೆ ಹೇಳಿದಂಥ ಸ್ಫೋಟವು ಉಂಟು ಮಾಡಬಹುದಾದಂಥ ಸಂಭಾವ್ಯ ಒತ್ತಡವನ್ನು ತಡೆದುಕೊಳ್ಳುವ ಹಾಗೆ ರಚಿಸಿಲ್ಲದಿದ್ದರೆ ಆ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯಲ್ಲಿ ತಡೆ ಸುರುಳಿ, ಗತಿ ನಿಯಂತ್ರಕಗಳು, ಕಂಡಿಗಳು ಅಥವಾ ಇತರೆ ಪರಿಣಾಮಕಾರಿ ಪರಿಕರಗಳನ್ನು ಒದಗಿಸುವ ಮೂಲಕ ಸ್ಫೋಟದ ಹರಡುವಿಕೆಯನ್ನು ಮತ್ತು ಪರಿಣಾಮಗಳನ್ನು ನಿರ್ಬಂಧಿಸಲು ಕಾರ್ಯಸಾಧ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಕಾರ್ಖಾನೆಯಲ್ಲಿನ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯ ಯಾವುದೇ ಭಾಗವು ಯಾವುದೇ ಸ್ಫೋಟಕ ಅಥವಾ ಸುಲಭದಹ್ಯ ಅನಿಲ ಅಥವಾ ಆವಿಯು ವಾತಾವರಣದ ಒತ್ತಡಕ್ಕಿಂತ ಹೆಚ್ಚಾದ ಒತ್ತಡವನ್ನು ಹೊಂದಿರುವಲ್ಲಿ, ಆ ಭಾಗವನ್ನು ಈ ಕೆಳಕಂಡ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ತೆರೆಯತಕ್ಕದ್ದಲ್ಲ, ಎಂದರೆ:–

(ಎ) ಆ ಭಾಗದೊಂದಿಗೆ ಜೋಡಿಸಿದ ಯಾವುದೇ ಕೊಳವೆಯ ಯಾವುದೇ ಜೋಡಣೆಯನ್ನು ಭದ್ರಪಡಿಸುವುದನ್ನು ಅಥವಾ ಆ ಭಾಗದೊಳಕ್ಕೆ ಯಾವುದೇ ಸಂದಿನ ಮುಚ್ಚಳವನ್ನು ಭದ್ರಪಡಿಸಿರುವುದನ್ನು ಸಡಿಲಗೊಳಿಸುವುದಕ್ಕೆ ಮುಂಚೆ ಆ ಭಾಗ ಅಥವಾ ಯಾವುದೇ ಅಂಥ ಕೊಳವೆಯೊಳಕ್ಕೆ ಆ ಅನಿಲ ಅಥವಾ ಆವಿಯ ಯಾವುದೇ ಹರಿಯುವಿಕೆಯನ್ನು ಮುಚ್ಚು ಕವಾಟ ಅಥವಾ ಇತರ ಸಾಧನದಿಂದ ಪರಿಣಾಮಕಾರಿಯಾಗಿ ನಿಲ್ಲಿಸತಕ್ಕದ್ದು.

(ಬಿ) ಹಿಂದೆ ಹೇಳಿದಂತೆ ಭದ್ರಪಡಿಸಿರುವುದನ್ನು ತೆಗೆದುಹಾಕುವುದಕ್ಕೆ ಮುಂಚೆ ಕಾರ್ಯಸಾಧ್ಯವಾಗಬಹುದಾದ ಎಲ್ಲಾ ಕ್ರಮಗಳನ್ನು ಆ ಭಾಗದಲ್ಲಿನ ಅಥವಾ ಕೊಳವೆಯಲ್ಲಿನ ಅನಿಲ ಅಥವಾ ಆವಿಯ ಒತ್ತಡವನ್ನು ವಾತಾವರಣದ ಒತ್ತಡಕ್ಕೆ ಇಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(ಸಿ) ಹಿಂದೆ ಹೇಳಿದಂತೆ ಯಾವುದೇ ಹಾಗೆ ಭದ್ರಪಡಿಸಿರುವುದನ್ನು ಸಡಿಲಗೊಳಿಸಿರುವಲ್ಲಿ ಅಥವಾ ತೆಗೆದುಹಾಕಿರುವಲ್ಲಿ, ಹಾಗೆ ಭದ್ರಪಡಿಸಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವವರೆಗೆ ಅಥವಾ ಸಂದರ್ಭಾನುಸಾರ ಭದ್ರವಾಗಿ ಬದಲಾಯಿಸುವವರೆಗೆ ಯಾವುದೇ ಸ್ಫೋಟಕ ಅಥವಾ ಸುಲಭದಹ್ಯ ಅನಿಲ ಅಥವಾ ಆವಿಯು ಆ ಭಾಗವನ್ನು ಅಥವಾ ಕೊಳವೆಯನ್ನು ಪ್ರವೇಶಿಸುವುದನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು:

ಪರಂತು, ಈ ಉಪಪ್ರಕರಣದ ಉಪಬಂಧಗಳು ಬಯಲಿನಲ್ಲಿ ಸ್ಥಾಪಿಸಲಾದ ಸ್ಥಿರಯಂತ್ರ ಅಥವಾ ಯಂತ್ರ ಸಾಮಗ್ರಿಯ ಸಂದರ್ಭದಲ್ಲಿ ಅನ್ವಯವಾಗತಕ್ಕದ್ದಲ್ಲ.

(4) ಯಾವುದೇ ಕಾರ್ಖಾನೆಯಲ್ಲಿ ಯಾವುದೇ ಸ್ಫೋಟಕ ಅಥವಾ ಸುಲಭದಹ್ಯ ವಸ್ತುವನ್ನು ಒಳಗೊಂಡಿರುವ ಅಥವಾ ಒಳಗೊಂಡಿದ್ದಂಥ ಯಾವುದೇ ಸ್ಥಿರಯಂತ್ರ, ಟ್ಯಾಂಕು ಅಥವಾ ಪಾತ್ರೆಯನ್ನು ಅಂಥ ವಸ್ತು ಮತ್ತು ಅದರಿಂದ ಉದ್ಭವಿಸುವ ಯಾವುದೇ ಹೊಗೆಯನ್ನು ನಿವಾರಿಸಲು ಅಥವಾ ಅಂಥ ವಸ್ತು ಮತ್ತು ಹೊಗೆಯನ್ನು ಸ್ಫೋಟಕವಾಗದಂತೆ ಅಥವಾ ಸುಲಭದಹ್ಯವಾಗದಂತೆ ಮಾಡಲು ಸಾಕಷ್ಟು ಕ್ರಮಗಳನ್ನು ಮೊದಲಿಗೆ ತೆಗೆದುಕೊಂಡಿರುವ ಹೊರತು ಶಾಖ ಕೊಡುವುದನ್ನು ಒಳಗೊಳ್ಳುವಂಥ ಯಾವುದೇ ಬೆಸುಗೆ ಹಾಕುವುದು, ಟಂಕ್ ಹಾಕುವುದು, ಸಾಲ್ಡರ್ ಮಾಡುವುದು ಅಥವಾ ಕತ್ತರಿಸುವ ಪ್ರಕ್ರಿಯೆಗೆ ಒಳಪಡಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಪ್ರಕ್ರಿಯೆ ಬಳಿಕ ವಸ್ತುವು ಉರಿ ಹತ್ತಿಸುವ ಯಾವುದೇ ಅಪಾಯವನ್ನು ತಡೆಗಟ್ಟಲು ಲೋಹವು ಸಾಕಷ್ಟು ತಣ್ಣಗಾಗುವವರೆಗೆ ಅಂಥ ಸ್ಥಿರಯಂತ್ರ, ಟ್ಯಾಂಕ್ ಅಥವಾ ಪಾತ್ರೆಗೆ ಪ್ರವೇಶಿಸಲು ಅವಕಾಶ ಕೊಡತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು, ನಿಯಮಗಳ ಮೂಲಕ ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಯಾವುದೇ ಕಾರ್ಖಾನೆ ಅಥವಾ ಯಾವುದೇ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಈ ಪ್ರಕರಣದ ಎಲ್ಲ ಅಥವಾ ಯಾವುದೇ ಉಪಬಂಧವನ್ನು ಪಾಲಿಸದಂತೆ ವಿನಾಯಿತಿಗೊಳಿಸಬಹುದು.

**38. ಬೆಂಕಿ ಉಂಟಾದ ಸಂದರ್ಭದಲ್ಲಿ ಮುನ್ನೆಚ್ಚರಿಕೆಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ ಒಳಗಡೆ ಮತ್ತು ಹೊರಗಡೆ ಎರಡೂ ಸ್ಥಳಗಳಲ್ಲಿ ಬೆಂಕಿ ಹತ್ತಿಕೊಳ್ಳುವುದು ಮತ್ತು ಅದನ್ನು ಹರಡುವುದನ್ನು ತಡೆಗಟ್ಟಲು ಕಾರ್ಯಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು, ಮತ್ತು,–

(ಎ) ಬೆಂಕಿ ಹತ್ತಿಕೊಂಡ ಸಂದರ್ಭದಲ್ಲಿ ಎಲ್ಲಾ ವ್ಯಕ್ತಿಗಳು ಪಾರಾಗಲು ಸುರಕ್ಷಿತ ಸಾಧನಗಳನ್ನು; ಮತ್ತು

(ಬಿ) ಬೆಂಕಿ ನಂದಿಸುವುದಕ್ಕಾಗಿ ಅವಶ್ಯಕ ಸಾಧನ ಸಾಮಗ್ರಿ ಮತ್ತು ಸೌಲಭ್ಯಗಳನ್ನು

– ಒದಗಿಸತಕ್ಕದ್ದು ಮತ್ತು ಅವುಗಳನ್ನು ನಿರ್ವಹಿಸಿಕೊಂಡು ಬರತಕ್ಕದ್ದು.

(2) ಪ್ರತಿಯೊಂದು ಕಾರ್ಖಾನೆಯಲ್ಲಿ ಎಲ್ಲಾ ಕೆಲಸಗಾರರು ಬೆಂಕಿಯುಂಟಾದ ಸಂದರ್ಭದಲ್ಲಿ ಪಾರಾಗುವ ಸಾಧನಗಳ ಪರಿಚಯ ಹೊಂದಿರುವರೆಂದು ಮತ್ತು ಅಂಥ ಸಂದರ್ಭಗಳಲ್ಲಿ ಅನುಸರಿಸಬೇಕಾದ ಕ್ರಮದ ಬಗ್ಗೆ ಸಾಕಷ್ಟು ತರಬೇತಿ ಪಡೆದಿರುವರೆಂದು ಸುನಿಶ್ಚಿತಪಡಿಸಿಕೊಳ್ಳಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ರಾಜ್ಯ ಸರ್ಕಾರವು ಯಾವುದೇ ಕಾರ್ಖಾನೆ ಅಥವಾ ಯಾವುದೇ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ, (1) ಮತ್ತು (2)ನೇ ಉಪಪ್ರಕರಣಗಳ ಉಪಬಂಧಗಳನ್ನು ಜಾರಿಗೆ ತರಲು ಅಳವಡಿಸಿಕೊಳ್ಳಬೇಕಾದ ಕ್ರಮಗಳನ್ನು ಅಗತ್ಯಪಡಿಸಿ, ನಿಯಮಗಳನ್ನು ರಚಿಸಬಹುದು.

(4) ಉಪಪ್ರಕರಣ (1)ರ (ಎ) ಖಂಡದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಚೀಫ್ ಇನ್ಸ್‌ಪೆಕ್ಟರ್‌ನು ಯಾವುದೇ ಕಾರ್ಖಾನೆಯಲ್ಲಿ ನಡೆಸುತ್ತಿರುವ ಕೆಲಸದ ಸ್ವರೂಪ, ಅಂಥ ಕಾರ್ಖಾನೆಯ ರಚನೆ, ಜೀವಕ್ಕೆ ಅಥವಾ ಸುರಕ್ಷೆಗೆ ವಿಶೇಷ ಅಪಾಯ ಅಥವಾ ಯಾವುದೇ ಇತರ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು, ಕಾರ್ಖಾನೆಯಲ್ಲಿ ಒದಗಿಸಿದ ಕ್ರಮಗಳು ನಿಯಮಿಸಿದಂತೆ ಇರಲಿ ಅಥವಾ ಇಲ್ಲದಿರಲಿ, (1)ನೇ ಉಪಪ್ರಕರಣದ (ಎ) ಖಂಡದ ಅಥವಾ (2)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಸಾಕಷ್ಟಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು ಲಿಖಿತ ಆದೇಶದ ಮೂಲಕ ಆ ಆದೇಶದಲ್ಲಿ ನಿರ್ದಿಷ್ಟಪಡಿಸಲಾದಂಥ ದಿನಾಂಕಕ್ಕೆ ಮುಂಚೆ ಯುಕ್ತ ಮತ್ತು ಅವಶ್ಯವೆಂದು ಅವನು, ಪರ್ಯಾಲೋಚಿಸಬಹುದಾದಂಥ ಹೆಚ್ಚಿನ ಕ್ರಮಗಳನ್ನು ಕಾರ್ಖಾನೆಯಲ್ಲಿ ಒದಗಿಸತಕ್ಕದ್ದೆಂದು ಅಗತ್ಯಪಡಿಸಬಹುದು.

**39. ದೋಷಪೂರ್ಣ ಭಾಗಗಳ ತಪಶೀಲುಗಳನ್ನು ಅಥವಾ ಸ್ಥಿರತೆಯ ಪರೀಕ್ಷೆಗಳನ್ನು ಅಗತ್ಯಪಡಿಸುವ ಅಧಿಕಾರ.–** ಕಾರ್ಖಾನೆಯಲ್ಲಿನ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗವು ಅಥವಾ ಮಾರ್ಗಗಳು, ಯಂತ್ರ ಸಾಮಗ್ರಿ ಅಥವಾ ಸ್ಥಿರಯಂತ್ರದ ಯಾವುದೇ ಭಾಗ ಮಾನವ ಜೀವಕ್ಕೆ ಅಥವಾ ಸುರಕ್ಷತೆಗೆ ಅಪಾಯಕಾರಿಯಾಗಬಹುದಾದಂಥ ಸ್ಥಿತಿಯಲ್ಲಿದೆಯೆಂದು ಇನ್ಸ್‌ಪೆಕ್ಟರ್‌ನಿಗೆ ಕಂಡುಬಂದರೆ ಅವನು ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ,–

(ಎ) ಅಂಥ ಕಟ್ಟಡ, ಮಾರ್ಗಗಳು, ಯಂತ್ರ ಸಾಮಗ್ರಿ ಅಥವಾ ಸ್ಥಿರಯಂತ್ರವನ್ನು ಸುರಕ್ಷಿತವಾಗಿ ಉಪಯೋಗಿಸಲು ಸಾಧ್ಯವೇ ಎಂಬುದನ್ನು ನಿರ್ಧರಿಸುವುದಕ್ಕೆ ಅವಶ್ಯವಾಗಬಹುದಾದಂಥ ರೇಖಾಚಿತ್ರಗಳು, ತಪಶೀಲುಗಳು ಮತ್ತು ಇತರ ವಿವರಗಳನ್ನು ಒದಗಿಸುವಂತೆ; ಅಥವಾ

(ಬಿ) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಂಥ ಪರೀಕ್ಷೆಗಳನ್ನು ನಡೆಸುವಂತೆ ಮತ್ತು ಅವುಗಳ ಫಲಿತಾಂಶವನ್ನು ತನಗೆ ತಿಳಿಸುವಂತೆ ಅಗತ್ಯಪಡಿಸಿ ಲಿಖಿತ ಆದೇಶವನ್ನು ಕಾರ್ಖಾನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕ ಅಥವಾ ಇಬ್ಬರಿಗೂ ಜಾರಿ ಮಾಡಬಹುದು.

**40. ಕಟ್ಟಡಗಳು ಮತ್ತು ಯಂತ್ರ ಸಾಮಗ್ರಿಗಳ ಸುರಕ್ಷೆ.–** (1) ಕಾರ್ಖಾನೆಯಲ್ಲಿನ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗ ಅಥವಾ ಮಾರ್ಗಗಳ, ಯಂತ್ರ ಸಾಮಗ್ರಿಯ ಅಥವಾ ಸ್ಥಿರಯಂತ್ರದ ಯಾವುದೇ ಭಾಗವು ಮಾನವ ಜೀವಕ್ಕೆ ಅಥವಾ ಸುರಕ್ಷತೆಗೆ ಅಪಾಯಕಾರಿಯಾಗಿರುವಂಥ ಸ್ಥಿತಿಯಲ್ಲಿದೆಯೆಂದು ಇನ್ಸ್‌ಪೆಕ್ಟರ್‌ನಿಗೆ ಕಂಡುಬಂದರೆ, ಅಳವಡಿಸಿಕೊಳ್ಳಬೇಕೆಂದು ತಾನು ಅಭಿಪ್ರಾಯಪಡುವ ಕ್ರಮಗಳನ್ನು ನಿರ್ದಿಷ್ಟಪಡಿಸಿ ಮತ್ತು ನಿರ್ದಿಷ್ಟಪಡಿಸಲಾದ ದಿನಾಂಕದೊಳಗೆ ಅವುಗಳನ್ನು ನಿರ್ವಹಿಸಲು ಅಗತ್ಯಪಡಿಸಿ ಲಿಖಿತ ಆದೇಶವನ್ನು ಕಾರ್ಖಾನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕ ಅಥವಾ ಇಬ್ಬರಿಗೂ ಜಾರಿ ಮಾಡಬಹುದು.

(2) ಕಾರ್ಖಾನೆಯಲ್ಲಿನ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗ ಅಥವಾ ಮಾರ್ಗಗಳು, ಯಂತ್ರ ಸಾಮಗ್ರಿಯ ಅಥವಾ ಸ್ಥಿರಯಂತ್ರದ ಯಾವುದೇ ಭಾಗದ ಬಳಕೆಯು ಮಾನವ ಜೀವಕ್ಕೆ ಅಥವಾ ಸುರಕ್ಷತೆಗೆ ಸನ್ನಿಹಿತ ಅಪಾಯದಿಂದ ಕೂಡಿದೆ ಎಂದು ಇನ್ಸ್‌ಪೆಕ್ಟರ್‌ಗೆ ಕಂಡುಬಂದರೆ ಅದನ್ನು ಸರಿಯಾಗಿ ದುರಸ್ತಿ ಮಾಡುವವರೆಗೆ ಅಥವಾ ಬದಲಾಯಿಸುವವರೆಗೆ ಅದರ ಬಳಕೆಯನ್ನು ನಿಷೇಧಿಸಿ ಲಿಖಿತ ಆದೇಶವನ್ನು ಕಾರ್ಖಾನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕ ಅಥವಾ ಇಬ್ಬರಿಗೂ ಅವನು ಜಾರಿ ಮಾಡಬಹುದು.

**40ಎ. ಕಟ್ಟಡಗಳ ನಿರ್ವಹಣೆ.–** ಕಾರ್ಖಾನೆಯಲ್ಲಿನ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗವು ಕೆಲಸಗಾರರ ಆರೋಗ್ಯ ಮತ್ತು ಕಲ್ಯಾಣಕ್ಕೆ ಬಾಧಕವಾಗುವ ಪರಿಸ್ಥಿತಿಗಳನ್ನುಂಟು ಮಾಡುವ ಸಂಭವವಿರುವಂಥ ದುರಸ್ತಿ ಮಾಡಲಾಗದಂಥ ಸ್ಥಿತಿಯಲ್ಲಿದೆ ಎಂದು ಇನ್ಸ್‌ಪೆಕ್ಟರನಿಗೆ ಕಂಡುಬಂದರೆ ಅಳವಡಿಸಬೇಕೆಂದು ತಾನು ಅಭಿಪ್ರಾಯಪಡುವ ಆ ಕ್ರಮಗಳನ್ನು ನಿರ್ದಿಷ್ಟಪಡಿಸಿ ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದಂಥ ದಿನಾಂಕಕ್ಕೆ ಮುಂಚೆ ಅವುಗಳನ್ನು ನಿರ್ವಹಿಸಲು ಅಗತ್ಯಪಡಿಸಿ ಲಿಖಿತ ಆದೇಶವನ್ನು ಕಾರ್ಖಾನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕ ಅಥವಾ ಇಬ್ಬರಿಗೂ ಜಾರಿ ಮಾಡಬಹುದು.

**40ಬಿ. ಸುರಕ್ಷಾ ಅಧಿಕಾರಿಗಳು.–** (1) ಯಾವ ಕಾರ್ಖಾನೆಯಲ್ಲಿ,–

(i) ಒಂದು ಸಾವಿರ ಅಥವಾ ಅದಕ್ಕಿಂತ ಹೆಚ್ಚು ಕೆಲಸಗಾರರನ್ನು ಸಾಮಾನ್ಯವಾಗಿ, ನಿಯೋಜಿಸಲಾಗುವುದೋ; ಅಥವಾ

(ii) ಆ ಕಾರ್ಖಾನೆಯಲ್ಲಿ ನಿಯೋಜಿತರಾದ ವ್ಯಕ್ತಿಗಳಿಗೆ ದೈಹಿಕ ಕ್ಷತಿ, ವಿಷ ಪ್ರಯೋಗ ಅಥವಾ ರೋಗದ ಯಾವುದೇ ಅಪಾಯ, ಅಥವಾ ಆರೋಗ್ಯಕ್ಕೆ ಯಾವುದೇ ಇತರೆ ಹಾನಿ ಇವುಗಳನ್ನೊಳಗೊಳ್ಳುವ ಯಾವುದೇ ತಯಾರಿಕಾ ಕಾರ್ಯವಿಧಾನ ಅಥವಾ ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆಯೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ ಅಂಥ ಆ ಪ್ರತಿಯೊಂದು ಕಾರ್ಖಾನೆಯಲ್ಲಿ

– ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಗತ್ಯಪಡಿಸಿದರೆ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಷ್ಟು ಸಂಖ್ಯೆಯ ಸುರಕ್ಷಾ ಅಧಿಕಾರಿಗಳನ್ನು ನಿಯೋಜಿಸಿಕೊಳ್ಳಬೇಕೆಂದು ಅಧಿಭೋಗದಾರನು ಅಷ್ಟು ಸಂಖ್ಯೆಯ ಸುರಕ್ಷಾ ಅಧಿಕಾರಿಗಳನ್ನು ನಿಯೋಜಿಸತಕ್ಕದ್ದು.

(2) ಸುರಕ್ಷಾ ಅಧಿಕಾರಿಗಳ ಕರ್ತವ್ಯಗಳು, ಅರ್ಹತೆಗಳು ಮತ್ತು ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**41. ಈ ಅಧ್ಯಾಯಕ್ಕೆ ಪೂರಕವಾಗುವ ನಿಯಮಗಳನ್ನು ರಚಿಸಲು ಅಧಿಕಾರ.**– ರಾಜ್ಯ ಸರ್ಕಾರವು ಯಾವುದೇ ಕಾರ್ಖಾನೆಯಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳ ಸುರಕ್ಷತೆಯನ್ನು ಸುನಿಶ್ಚಿತಗೊಳಿಸಲು ಅವಶ್ಯವೆಂದು ರಾಜ್ಯ ಸರ್ಕಾರವು ಭಾವಿಸಬಹುದಾದಂಥ ಹೆಚ್ಚಿನ ಉಪಾಯಗಳನ್ನು ಮತ್ತು ಕ್ರಮಗಳನ್ನು ಕೈಗೊಳ್ಳುವಂತೆ ಅಗತ್ಯಪಡಿಸಿ ನಿಯಮಗಳನ್ನು ರಚಿಸಬಹುದು.

## ಅಧ್ಯಾಯ – IV–ಎ

## ಅಪಾಯಕಾರಿ ಕಾರ್ಯವಿಧಾನಗಳಿಗೆ ಸಂಬಂಧಿಸಿದ ಉಪಬಂಧ

**41ಎ. ಸ್ಥಳ ಮೌಲ್ಯ ನಿರ್ಣಯ ಸಮಿತಿಗಳ ರಚನೆ.**– (1) ರಾಜ್ಯ ಸರ್ಕಾರವು, ಅಪಾಯಕಾರಿ ಕಾರ್ಯವಿಧಾನವನ್ನು ಒಳಗೊಂಡಿರುವ ಕಾರ್ಖಾನೆಯನ್ನು ಪ್ರಾರಂಭಿಸಲು ಬೇಕಾದ ಸ್ಥಳಕ್ಕಾಗಿ ಅನುಮತಿ ನೀಡುವ ಸಲುವಾಗಿ ಅಥವಾ ಯಾವುದೇ ಅಂಥ ಕಾರ್ಖಾನೆಯ ವಿಸ್ತರಣೆಗಾಗಿ ಬಂದ ಅರ್ಜಿಗಳನ್ನು ಪರಿಶೀಲಿಸುವ ಸಲುವಾಗಿ ತನಗೆ ಸಲಹೆ ನೀಡುವ ಉದ್ದೇಶಗಳಿಗಾಗಿ, ಸ್ಥಳ ಮೌಲ್ಯ ನಿರ್ಣಯ ಸಮಿತಿಯನ್ನು ನೇಮಕ ಮಾಡಬಹುದು, ಅದರಲ್ಲಿ,–

(ಎ) ರಾಜ್ಯದ ಚೀಫ್ ಇನ್ಸ್‌ಪೆಕ್ಟರ್ ಅದರ ಅಧ್ಯಕ್ಷನಾಗಿರತಕ್ಕದ್ದು;

(ಬಿ) ಕೇಂದ್ರ ಸರ್ಕಾರವು, ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ 3ನೇ ಪ್ರಕರಣದ ಮೇರೆಗೆ ನೇಮಕ ಮಾಡಿದ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕೇಂದ್ರ ಮಂಡಳಿಯ ಪ್ರತಿನಿಧಿ;

(ಸಿ) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ರ 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕೇಂದ್ರ ಮಂಡಳಿಯ ಪ್ರತಿನಿಧಿ;

(ಡಿ)ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 (1974ರ 6)ರ 4ನೇ ಪ್ರಕರಣದ ಮೇರೆಗೆ ನೇಮಕಗೊಂಡ ರಾಜ್ಯ ಮಂಡಳಿಯ ಪ್ರತಿನಿಧಿ;

(ಇ)ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (1981ರ 14)ರ 5ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಾಯು ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ರಾಜ್ಯ ಮಂಡಳಿಯ ಪ್ರತಿನಿಧಿ;

(ಎಫ್) ರಾಜ್ಯದಲ್ಲಿನ ಪರಿಸರ ಇಲಾಖೆಯ ಪ್ರತಿನಿಧಿ;

(ಜಿ) ಭಾರತ ಸರ್ಕಾರದ ಹವಾಮಾನ ಇಲಾಖೆಯ ಪ್ರತಿನಿಧಿ;

(ಹೆಚ್) ವೃತ್ತಿ ಸಂಬಂಧಿತ ಆರೋಗ್ಯ ಕ್ಷೇತ್ರದಲ್ಲಿನ ಒಬ್ಬ ತಜ್ಞ;

(ಐ) ರಾಜ್ಯ ಸರ್ಕಾರದ ನಗರ ಯೋಜನಾ ಇಲಾಖೆಯ ಪ್ರತಿನಿಧಿ

– ಮತ್ತು ರಾಜ್ಯ ಸರ್ಕಾರವು ಸಹಯೋಜಿಸಬಹುದಾದ ಐದಕ್ಕಿಂತ ಹೆಚ್ಚಾಗಿರದ ಇತರ ಸದಸ್ಯರು ಇರತಕ್ಕದ್ದು, ಅವರಲ್ಲಿ,–

(i) ಕಾರ್ಖಾನೆಯಲ್ಲಿ ನಡೆಯುವ ಅಪಾಯಕಾರಿ ಕಾರ್ಯವಿಧಾನಗಳ ವಿಶೇಷ ಜ್ಞಾನ ಹೊಂದಿರುವ ಒಬ್ಬ ವಿಜ್ಞಾನಿ;

(ii) ಯಾವ ಸ್ಥಳೀಯ ಪ್ರಾಧಿಕಾರದ ಅಧಿಕಾರ ಕ್ಷೇತ್ರದೊಳಗೆ ಕಾರ್ಖಾನೆಯನ್ನು ಸ್ಥಾಪಿಸಲಾಗಿದೆಯೋ ಆ ಸ್ಥಳೀಯ ಪ್ರಾಧಿಕಾರದ ಒಬ್ಬ ಪ್ರತಿನಿಧಿ; ಮತ್ತು

(iii) ರಾಜ್ಯ ಸರ್ಕಾರವು ಯೋಗ್ಯವೆಂದು ಭಾವಿಸುವಂಥ ಮೂವರಿಗಿಂತ ಹೆಚ್ಚಾಗಿರದ ಇತರೆ ವ್ಯಕ್ತಿಗಳು

– ಇರತಕ್ಕದ್ದು.

(2) ಸ್ಥಳ ಮೌಲ್ಯ ನಿರ್ಣಯ ಸಮಿತಿಯು ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಕಾರ್ಖಾನೆಯ ಸ್ಥಾಪನೆಗಾಗಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿವಸಗಳ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ನಿಯಮಿಸಿದ ನಮೂನೆಯಲ್ಲಿ ತನ್ನ ಶಿಫಾರಸ್ಸನ್ನು ಮಾಡತಕ್ಕದ್ದು.

(3) ಯಾವುದೇ ಪ್ರಕ್ರಿಯೆಯು ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಕಾರ್ಖಾನೆಗೆ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ನಿಗಮಕ್ಕೆ ಅಥವಾ ಕಂಪನಿಗೆ ಸಂಬಂಧಿಸಿರುವಲ್ಲಿ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರವು ಆ ಸಮಿತಿಯ ಸದಸ್ಯನಾಗಿ ನಾಮನಿರ್ದೇಶನ ಮಾಡಿದ ಒಬ್ಬ ಪ್ರತಿನಿಧಿಯನ್ನು ಸ್ಥಳ ಮೌಲ್ಯ ನಿರ್ಣಯ ಸಮಿತಿಯಲ್ಲಿ ಸಹಯೋಜಿಸಿಕೊಳ್ಳತಕ್ಕದ್ದು.

(4) ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಕಾರ್ಖಾನೆಯ ಸ್ಥಾಪನೆಗಾಗಿ ಅಥವಾ ವಿಸ್ತರಣೆಗಾಗಿ ಅರ್ಜಿ ಸಲ್ಲಿಸುವ ವ್ಯಕ್ತಿಯಿಂದ ಯಾವುದೇ ಮಾಹಿತಿಯನ್ನು ತರಿಸಿಕೊಳ್ಳುವುದಕ್ಕೆ ಸ್ಥಳ ಮೌಲ್ಯ ನಿರ್ಣಯ ಸಮಿತಿಯು ಅಧಿಕಾರ ಹೊಂದಿರತಕ್ಕದ್ದು.

(5) ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಕಾರ್ಖಾನೆಯ ಸ್ಥಾಪನೆಗಾಗಿ ಅಥವಾ ವಿಸ್ತರಣೆಗಾಗಿ ಸಲ್ಲಿಸಲಾದ ಅರ್ಜಿಗೆ ರಾಜ್ಯ ಸರ್ಕಾರವು ಅನುಮೋದನೆ ನೀಡಿದ್ದರೆ ಅರ್ಜಿದಾರನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, *1974* (*1974*ರ 6)ರ ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, *1981* (*1981*ರ 14)ರ ಮೇರೆಗೆ ಸ್ಥಾಪಿಸಿದ ಕೇಂದ್ರ ಮಂಡಳಿಯಿಂದ ಮತ್ತು ರಾಜ್ಯ ಮಂಡಳಿಯಿಂದ ಮತ್ತೆ ಅನುಮೋದನೆ ಪಡೆಯುವುದು ಅವಶ್ಯಕವಾಗಿರತಕ್ಕದ್ದಲ್ಲ.

**41ಬಿ. ಅಧಿಭೋಗದಾರನು ಕಡ್ಡಾಯವಾಗಿ ಮಾಹಿತಿಯನ್ನು ಪ್ರಕಟಿಸುವುದು.**– (1) ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಪ್ರತಿಯೊಂದು ಕಾರ್ಖಾನೆಯ ಅಧಿಭೋಗದಾರನು, ಆರೋಗ್ಯಕ್ಕೆ ಸಂಬಂಧಿಸಿದ ಅಪಾಯಗಳು ಸೇರಿದಂತೆ, ಅಪಾಯಗಳಿಗೆ ಸಂಬಂಧಿಸಿರುವ ಎಲ್ಲಾ ಮಾಹಿತಿಯನ್ನು ಮತ್ತು ತಯಾರಿಕೆ, ಸಾಗಣೆ, ದಾಸ್ತಾನು ಮತ್ತು ಇತರೆ ಪ್ರಕ್ರಿಯೆಗಳಲ್ಲಿನ ವಸ್ತು ಅಥವಾ ಪದಾರ್ಥಗಳನ್ನು ತೆರೆದಿಡುವುದರಿಂದ ಅಥವಾ ನಿರ್ವಹಣೆ ಮಾಡುವುದರಿಂದ ಉದ್ಭವಿಸುವಂಥ ಅಪಾಯಗಳನ್ನು ಪರಿಹರಿಸುವ ಕ್ರಮಗಳನ್ನು ಕಾರ್ಖಾನೆಯಲ್ಲಿ ನಿಯೋಜಿಸಿದ ಕೆಲಸಗಾರರಿಗೆ, ಚೀಫ್ ಇನ್ಸ್‌ಪೆಕ್ಟರ್‌ನಿಗೆ, ಯಾವ ಸ್ಥಳೀಯ ಪ್ರಾಧಿಕಾರದ ಅಧಿಕಾರ ಕ್ಷೇತ್ರದೊಳಗೆ ಕಾರ್ಖಾನೆಯು ಇರುವುದೋ ಆ ಸ್ಥಳೀಯ ಪ್ರಾಧಿಕಾರಕ್ಕೆ ಮತ್ತು ಆಸುಪಾಸಿನ ಸಾರ್ವಜನಿಕರಿಗೆ ನಿಯಮಿಸಿದ ರೀತಿಯಲ್ಲಿ ತಿಳಿಸತಕ್ಕದ್ದು.

(2) ಅಧಿಭೋಗದಾರನು, ಅಪಾಯಕಾರಿ ಕಾರ್ಯವಿಧಾನವನ್ನು ಒಳಗೊಂಡಿರುವ ಕಾರ್ಖಾನೆಯನ್ನು ನೋಂದಣಿ ಮಾಡಿಸುವ ಸಮಯದಲ್ಲಿ, ಅದರಲ್ಲಿ ನಿಯೋಜಿಸಲಾಗಿರುವ ಕೆಲಸಗಾರರ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದಂಥ ವಿಸ್ತೃತ ನೀತಿಯನ್ನು ನಿರೂಪಿಸತಕ್ಕದ್ದು ಮತ್ತು ಅಂಥ ನೀತಿಯನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು ಮತ್ತು ತದನಂತರ, ನಿಯಮಿಸಬಹುದಾದಂಥ ಮಧ್ಯಂತರಗಳಲ್ಲಿ ಸದರಿ ರೀತಿಯಲ್ಲಿ ಮಾಡಿದ ಯಾವುದೇ ಬದಲಾವಣೆಯನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಮತ್ತು ಸ್ಥಳೀಯ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಒದಗಿಸಿದ ಮಾಹಿತಿಯು ತ್ಯಾಜ್ಯವಸ್ತುಗಳ ಪ್ರಮಾಣ, ತಪಶೀಲುಗಳು ಮತ್ತು ಇತರ ಗುಣಲಕ್ಷಣಗಳಿಗೆ ಮತ್ತು ಅವುಗಳ ವಿಲೆಯ ರೀತಿಗೆ ಸಂಬಂಧಿಸಿದ ನಿಖರವಾದ ಮಾಹಿತಿಯನ್ನು ಒಳಗೊಂಡಿರತಕ್ಕದ್ದು.

(4) ಪ್ರತಿಯೊಬ್ಬ ಅಧಿಭೋಗದಾರನು, ಚೀಫ್ ಇನ್ಸ್‌ಪೆಕ್ಟರ್‌ನ ಅನುಮೋದನೆಯೊಂದಿಗೆ, ಸ್ಥಳಕ್ಕೆ ಸಂಬಂಧಿಸಿದ ಒಂದು ತುರ್ತು ಯೋಜನೆಯನ್ನು ಮತ್ತು ತನ್ನ ಕಾರ್ಖಾನೆಗಾಗಿ ವಿಪತ್ತು ನಿಯಂತ್ರಣ ವಿಸ್ತೃತ ಕ್ರಮಗಳನ್ನು ತಯಾರಿಸತಕ್ಕದ್ದು ಮತ್ತು ಅದರಲ್ಲಿ ನಿಯೋಜಿಸಿಡ ಕೆಲಸಗಾರರಿಗೆ ಮತ್ತು ಕಾರ್ಖಾನೆಯ ಆಸುಪಾಸಿನಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ದುರ್ಘಟನೆ ಘಟಿಸಿದ ಸಂದರ್ಭದಲ್ಲಿ ಅವರು ತೆಗೆದುಕೊಳ್ಳಬೇಕಾದ ಅಗತ್ಯ ಸುರಕ್ಷ ಕ್ರಮಗಳನ್ನು ಗಮನಕ್ಕೆ ತರತಕ್ಕದ್ದು.

(5) ಕಾರ್ಖಾನೆಯ ಪ್ರತಿಯೊಬ್ಬ ಅಧಿಭೋಗದಾರನು,–

(ಎ) ಅಂಥ ಕಾರ್ಖಾನೆಯು, ಕಾರ್ಖಾನೆಗಳ (ತಿದ್ದುಪಡಿ) ಅಧಿನಿಯಮ, 1987ರ ಪ್ರಾರಂಭದ ತರುವಾಯ ಅಪಾಯಕಾರಿ ಕಾರ್ಯವಿಧಾನಗಳಲ್ಲಿ ತೊಡಗಿದ್ದರೆ, ಅಂಥ ಪ್ರಾರಂಭದ ಮೂವತ್ತು ದಿವಸಗಳ ಅವಧಿಯೊಳಗೆ; ಮತ್ತು

(ಬಿ) ಅಂಥ ಕಾರ್ಖಾನೆಯು, ಅಂಥ ಪ್ರಾರಂಭದ ತರುವಾಯ ಯಾವುದೇ ಸಮಯದಲ್ಲಿ ಅಪಾಯಕಾರಿ ಕಾರ್ಯವಿಧಾನಗಳಲ್ಲಿ ತೊಡಗಲು ಉದ್ದೇಶಿಸಿದ್ದರೆ, ಅಂಥ ಪ್ರಕ್ರಿಯೆಯನ್ನು ಪ್ರಾರಂಭಿಸುವ ಮೊದಲು ಮೂವತ್ತು ದಿವಸಗಳ ಅವಧಿಯೊಳಗೆ

– ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಪ್ರಕ್ರಿಯೆಯ ಸ್ವರೂಪವನ್ನು ಮತ್ತು ವಿವರಗಳನ್ನು ಮುಖ್ಯ ಪರಿಶೀಲಕನಿಗೆ ತಿಳಿಸತಕ್ಕದ್ದು.

(6) ಕಾರ್ಖಾನೆಯ ಯಾರೇ ಅಧಿಭೋಗದಾರನು (5)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಕಾರ್ಖಾನೆಯ ಅಧಿಭೋಗದಾರನು ಯಾವುದೇ ದಂಡನೆಗೆ ಒಳಪಡಬಹುದಾಗಿದ್ದರೂ, 6ನೇ ಪ್ರಕರಣದ ಮೇರೆಗೆ ಅಂಥ ಕಾರ್ಖಾನೆಗೆ ನೀಡಿದ ಲೈಸೆನ್ಸ್ ರದ್ದಿಯಾತಿಗೆ ಗುರಿಯಾಗತಕ್ಕದ್ದು.

(7) ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಕಾರ್ಖಾನೆಯ ಅಧಿಭೋಗದಾರನು ಚೀಫ್ ಇನ್ಸ್‌ಪೆಕ್ಟರ್‌ನಿಂದ ಮುಂಚಿತವಾಗಿಯೇ ಅನುಮೋದನೆ ಪಡೆದು, ಕಾರ್ಖಾನೆಯ ಆವರಣದೊಳಗೆ ಅಪಾಯಕಾರಿ ಪದಾರ್ಥಗಳ ನಿರ್ವಹಣೆಗಾಗಿ, ಬಳಕೆಗಾಗಿ, ಸಾಗಣೆಗಾಗಿ ಮತ್ತು ದಾಸ್ತಾನಿಗಾಗಿ ಮತ್ತು ಕಾರ್ಖಾನೆಯ ಆವರಣದ ಹೊರಗೆ ಅಂಥ ಪದಾರ್ಥಗಳ ವಿಲೇವಾರಿಗಾಗಿ ಕ್ರಮಗಳನ್ನು ವಿಧಿಸತಕ್ಕದ್ದು ಮತ್ತು ಕೆಲಸಗಾರರಿಗೆ ಮತ್ತು ಆಸುಪಾಸಿನಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ನಿಯಮಿಸಿದ ರೀತಿಯಲ್ಲಿ ಅವುಗಳನ್ನು ಪ್ರಚಾರ ಮಾಡತಕ್ಕದ್ದು.

**41ಸಿ. ಅಪಾಯಕಾರಿ ಕಾರ್ಯವಿಧಾನಗಳಿಗೆ ಸಂಬಂಧಿಸಿದಂತೆ ಅಧಿಭೋಗದಾರನ ನಿರ್ದಿಷ್ಟ ಜವಾಬ್ದಾರಿ.**– ಯಾವುದೇ ಅಪಾಯಕಾರಿ ಕಾರ್ಯವಿಧಾನವನ್ನು ಒಳಗೊಂಡಿರುವ ಕಾರ್ಖಾನೆಯ ಪ್ರತಿಯೊಬ್ಬ ಅಧಿಭೋಗದಾರನು,–

(ಎ) ಕಾರ್ಖಾನೆಯಲ್ಲಿ ತಯಾರಿಸಿರುವ, ದಾಸ್ತಾನು ಮಾಡಿರುವ, ನಿರ್ವಹಿಸಿರುವ ಅಥವಾ ಸಾಗಣೆ ಮಾಡಿರುವ ಯಾವುದೇ ರಾಸಾಯನಿಕ, ವಿಷದ ಅಥವಾ ಯಾವುದೇ ಇತರೆ ಹಾನಿಕಾರಕ ಪದಾರ್ಥಗಳಿಗೆ ಗುರಿಯಾಗಿರುವ ಕಾರ್ಖಾನೆಯಲ್ಲಿನ ಕೆಲಸಗಾರರಿಗೆ ಸಂಬಂಧಿಸಿದಂತೆ ನಿಖರವಾದ ಮತ್ತು ಇಂದಿನವರೆಗಿನ ಆರೋಗ್ಯ ದಾಖಲೆಗಳನ್ನು ಅಥವಾ ಸಂದರ್ಭಾನುಸಾರ ವೈದ್ಯಕೀಯ ದಾಖಲೆಗಳನ್ನು ಇಡತಕ್ಕದ್ದು ಮತ್ತು ಅಂಥ ದಾಖಲೆಗಳು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಕೆಲಸಗಾರರಿಗೆ ದೊರಕುವಂತಿರತಕ್ಕದ್ದು.

(ಬಿ) ಅಪಾಯಕಾರಿ ಪದಾರ್ಥಗಳ ನಿರ್ವಹಣೆಯಲ್ಲಿ ಅರ್ಹತೆ ಮತ್ತು ಅನುಭವ ಹೊಂದಿರುವ ಮತ್ತು ಕಾರ್ಖಾನೆಯೊಳಗೆ ಅಂಥ ನಿರ್ವಹಣೆಯ ಮೇಲ್ವಿಚಾರಣೆ ಮಾಡಲು ಮತ್ತು ಕೆಲಸದ ಸ್ಥಳದಲ್ಲಿ ನಿಯಮಿಸಿದ ರೀತಿಯಲ್ಲಿ ಕೆಲಸಗಾರರ ರಕ್ಷಣೆಗಾಗಿ ಎಲ್ಲಾ ಅವಶ್ಯಕ ಸೌಲಭ್ಯಗಳನ್ನು ಒದಗಿಸಲು ಸಕ್ಷಮನಾಗಿರುವ ವ್ಯಕ್ತಿಗಳನ್ನು ನೇಮಕ ಮಾಡತಕ್ಕದ್ದು:

ಪರಂತು, ಹಾಗೆ ನೇಮಕ ಮಾಡಿರುವ ವ್ಯಕ್ತಿಯ ಅರ್ಹತೆ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ ಉದ್ಭವಿಸಿದಲ್ಲಿ ಚೀಫ್ ಇನ್ಸ್‌ಪೆಕ್ಟರ್‌ನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

(ಸಿ) ಪ್ರತಿಯೊಬ್ಬ ಕೆಲಸಗಾರನಿಗೆ,-

(ಎ) ಅಪಾಯಕಾರಿ ಪದಾರ್ಥ ನಿರ್ವಹಣೆಯನ್ನು ಅಥವಾ ಅದರೊಂದಿಗೆ ಕೆಲಸ ಮಾಡುವುದನ್ನು ಒಳಗೊಂಡಿರುವ ಕೆಲಸವನ್ನು ಅಂಥ ಕೆಲಸಗಾರನಿಗೆ ವಹಿಸಿಕೊಡುವ ಮುಂಚೆ; ಮತ್ತು

(ಬಿ) ಅಂಥ ಕೆಲಸದಲ್ಲಿ ಮುಂದುವರಿಯುವಾಗ ಮತ್ತು ಅಂಥ ಕೆಲಸ ಮಾಡುವುದನ್ನು ನಿಲ್ಲಿಸಿದ ನಂತರ ನಿಯಮಿಸಬಹುದಾದಂಥ ರೀತಿಯಲ್ಲಿ ಹನ್ನೆರಡು ತಿಂಗಳುಗಳಿಗೆ ಮೀರದ ಮಧ್ಯಂತರಗಳಲ್ಲಿ

– ವೈದ್ಯಕೀಯ ಪರೀಕ್ಷೆ ಮಾಡಿಸಲು ವ್ಯವಸ್ಥೆ ಮಾಡತಕ್ಕದ್ದು.

**41ಡಿ. ವಿಚಾರಣಾ ಸಮಿತಿಯನ್ನು ನೇಮಕ ಮಾಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು ಅಪಾಯಕಾರಿ ಕಾರ್ಯವಿಧಾನಗಳಲ್ಲಿ ತೊಡಗಿದ ಕಾರ್ಖಾನೆಯಲ್ಲಿ ಅಸಾಧಾರಣ ಸನ್ನಿವೇಶವು ಘಟಿಸಿದ ಸಂದರ್ಭದಲ್ಲಿ, ಕಾರ್ಖಾನೆಯಲ್ಲಿ ನಿಯೋಜಿಸಿರುವ ಕೆಲಸಗಾರರ ಆರೋಗ್ಯ ಮತ್ತು ಸುರಕ್ಷೆಗಾಗಿ ನಿಯಮಿಸಿದ ಯಾವುದೇ ಕ್ರಮಗಳನ್ನು ಅಥವಾ ಗುಣಮಟ್ಟಗಳನ್ನು ಅಳವಡಿಸಿಕೊಳ್ಳುವಲ್ಲಿನ ಯಾವುದೇ ವಿಫಲತೆ ಅಥವಾ ನಿರ್ಲಕ್ಷತೆಯ ಕಾರಣಗಳನ್ನು ಅಥವಾ ಅಂಥ ನಿರ್ಲಕ್ಷತೆ ಅಥವಾ ವಿಫಲತೆಯ ಕಾರಣದಿಂದಾಗಿ ಬಾಧಿತರಾದ ಅಥವಾ ಬಾಧಿತರಾಗುವ ಸಂಭವವಿರುವ ಸಾರ್ವಜನಿಕರನ್ನು ಕಂಡು ಹಿಡಿಯುವ ದೃಷ್ಟಿಯಿಂದ ಕಾರ್ಖಾನೆಯಲ್ಲಿ ಪಾಲಿಸಿದ ಆರೋಗ್ಯ ಮತ್ತು ಸುರಕ್ಷೆಯ ಗುಣಮಟ್ಟಗಳನ್ನು ಮತ್ತು ಭವಿಷ್ಯದಲ್ಲಿ ಅಂಥ ಕಾರ್ಖಾನೆಯಲ್ಲಿ ಅಥವಾ ಬೇರೆಡೆಯಲ್ಲಿ ಅಂಥ ಅಸಾಧಾರಣದ ಸನ್ನಿವೇಶಗಳನ್ನು ತಡೆಯಲು ಮತ್ತು ಪುನಃ ಸಂಭವಿಸುವುದರ ಬಗ್ಗೆ ವಿಚಾರಣೆ ಮಾಡಲು ವಿಚಾರಣಾ ಸಮಿತಿಯನ್ನು ನೇಮಕ ಮಾಡಬಹುದು.

(2) ಉಪಪ್ರಕರಣ (1)ರ ಮೇರೆಗೆ ನೇಮಕ ಮಾಡಿದ ಸಮಿತಿಯು ಒಬ್ಬರು ಅಧ್ಯಕ್ಷರನ್ನು ಮತ್ತು ಇಬ್ಬರು ಇತರೆ ಸದಸ್ಯರನ್ನು ಒಳಗೊಂಡಿರತಕ್ಕದ್ದು ಮತ್ತು ಸಮಿತಿಯ ಪರಿಶೀಲನಾಂಶಗಳು ಮತ್ತು ಅದರ ಸದಸ್ಯರ ಪದಾವಧಿಯು ಸನ್ನಿವೇಶದ ಅಗತ್ಯತೆಗಳಿಗನುಸಾರವಾಗಿ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂತೆ ಇರತಕ್ಕದ್ದು.

(3) ಸಮಿತಿಯ ಶಿಫಾರಸ್ಸುಗಳು ಸಲಹಾತ್ಮಕ ರೂಪದಲ್ಲಿರತಕ್ಕದ್ದು.

**41ಇ. ತುರ್ತು ಗುಣಮಟ್ಟಗಳು.–** (1) ಅಪಾಯಕಾರಿ ಕಾರ್ಯವಿಧಾನಗಳ ಅಥವಾ ಅಪಾಯಕಾರಿ ಕಾರ್ಯವಿಧಾನಗಳ ವರ್ಗದ ಸಂಬಂಧದಲ್ಲಿ ಸುರಕ್ಷೆಯ ಯಾವುದೇ ಗುಣಮಟ್ಟಗಳನ್ನು ನಿಯಮಿಸಿಲ್ಲವೆಂದು ಅಥವಾ ಹಾಗೆ ನಿಯಮಿಸಿದ ಗುಣಮಟ್ಟಗಳು ಸಮಂಜಸವಾದವುಗಳಲ್ಲವೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಕಾರ್ಖಾನೆಯ ಸಲಹಾ ಸಮಿತಿ ಸೇವಾ ಮಹಾನಿರ್ದೇಶಕನನ್ನು ಅಥವಾ ಮತ್ತು ಕಾರ್ಮಿಕ ಸಂಸ್ಥೆಗಳ ಅಪಾಯಕಾರಿ ಕಾರ್ಯವಿಧಾನಗಳಲ್ಲಿ ಸುರಕ್ಷೆಯ ಗುಣಮಟ್ಟಗಳಿಗೆ ಸಂಬಂಧಿಸಿರುವ ವಿಷಯದಲ್ಲಿ ವಿಶೇಷ ಪರಿಣತಿ ಹೊಂದಿರುವ ಯಾವುದೇ ಸಂಸ್ಥೆಯನ್ನು, ಅಂಥ ಅಪಾಯಕಾರಿ ಕಾರ್ಯವಿಧಾನಗಳ ಸಂಬಂಧದಲ್ಲಿ ಸೂಕ್ತ ಗುಣಮಟ್ಟಗಳನ್ನು ಜಾರಿಗೊಳಿಸುವುದಕ್ಕಾಗಿ ತುರ್ತು ಗುಣಮಟ್ಟಗಳನ್ನು ಗೊತ್ತುಪಡಿಸುವಂತೆ ನಿರ್ದೇಶಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಗೊತ್ತುಪಡಿಸಿದ ಗುಣಮಟ್ಟಗಳು, ಅವುಗಳು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ಅವುಗಳನ್ನು ಸೇರಿಸುವವರೆಗೆ ಜಾರಿ ಯೋಗ್ಯವಾದವುಗಳಾಗಿರತಕ್ಕದ್ದು ಮತ್ತು ಅವುಗಳು ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಲ್ಲಿ ಅವುಗಳನ್ನು ಸೇರಿಸಿದ್ದರೆ ಹೇಗೆ ಪರಿಣಾಮಕಾರಿಯಾಗುತ್ತಿದ್ದವೋ ಅದೇ ರೀತಿ ಪರಿಣಾಮಕಾರಿಯಾಗಿರತಕ್ಕದ್ದು.

**41ಎಫ್. ರಾಸಾಯನಿಕ ಮತ್ತು ವಿಷ ಪದಾರ್ಥಗಳನ್ನು ಬಹಿರಂಗವಾಗಿಡುವುದಕ್ಕೆ ಅನುಮತಿಸಬಹುದಾದ ಮಿತಿಗಳು.–** (1) ಯಾವುದೇ ಕಾರ್ಖಾನೆಯಲ್ಲಿ ತಯಾರಿಕಾ ಪ್ರಕ್ರಿಯೆಗಳಲ್ಲಿ (ಅದು ಅಪಾಯಕಾರಿಯಾಗಿರಲಿ ಅಥವಾ ಅನ್ಯಥಾ) ರಾಸಾಯನಿಕ ಅಥವಾ ವಿಷ ಪದಾರ್ಥಗಳನ್ನು ಬಹಿರಂಗವಾಗಿಡುವುದಕ್ಕೆ ಅನುಮತಿಸಬಹುದಾದ ಆರಂಭಿಕ ಗರಿಷ್ಠ ಮಿತಿಗಳು ಎರಡನೆಯ ಅನುಸೂಚಿಯಲ್ಲಿ ಸೂಚಿಸಿದ ಸಂಖ್ಯೆಯಷ್ಟಿರತಕ್ಕದ್ದು.

(2) ಕೇಂದ್ರ ಸರ್ಕಾರವು, ಯಾವುದೇ ಸಮಯದಲ್ಲಿ ಪರಿಣತಿ ಹೊಂದಿದ ಸಂಸ್ಥೆಗಳಿಂದ ಅಥವಾ ಆ ಕ್ಷೇತ್ರದಲ್ಲಿನ ತಜ್ಞರಿಂದ ಪಡೆದ ಯಾವುದೇ ವೈಜ್ಞಾನಿಕವಾಗಿ ಸಾಬೀತಾದುದನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಸದರಿ ಅನುಸೂಚಿಯಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಬಹುದು.

**41ಜಿ. ಸುರಕ್ಷಾ ವ್ಯವಸ್ಥಾಪನೆಯಲ್ಲಿ ಕೆಲಸಗಾರರು ಭಾಗವಹಿಸುವುದು.–** (1) ಅಧಿಭೋಗದಾರನು, ಅಪಾಯಕಾರಿ ಕಾರ್ಯವಿಧಾನಗಳನ್ನು ಕೈಗೊಳ್ಳುವ ಅಥವಾ ಅಪಾಯಕಾರಿ ಪದಾರ್ಥಗಳನ್ನು ಬಳಸುವ ಅಥವಾ ನಿರ್ವಹಿಸುವ ಪ್ರತಿಯೊಂದು ಕಾರ್ಖಾನೆಯಲ್ಲಿ ಕೆಲಸದ ಸಮಯದಲ್ಲಿ ಯುಕ್ತ ಸುರಕ್ಷೆ ಮತ್ತು ಆರೋಗ್ಯ ನಿರ್ವಹಣೆಯಲ್ಲಿ ಕೆಲಸಗಾರರ ಮತ್ತು ವ್ಯವಸ್ಥಾಪನೆಯ

ನಡುವೆ ಸಹಕಾರವನ್ನು ಹೆಚ್ಚಿಸಲು ಮತ್ತು ಈ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ನಿಯತಕಾಲಿಕವಾಗಿ ಪುನರವಲೋಕನ ಮಾಡಲು ಕೆಲಸಗಾರರ ಮತ್ತು ವ್ಯವಸ್ಥಾಪನೆಯ ಪ್ರತಿನಿಧಿಗಳ ಸಮಾನ ಸಂಖ್ಯೆಯ ಪ್ರತಿನಿಧಿಗಳನ್ನು ಒಳಗೊಂಡಿರುವ ಒಂದು ಸುರಕ್ಷಾ ಸಮಿತಿಯನ್ನು ರಚಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಲಿಖಿತ ಆದೇಶದ ಮೂಲಕ ಮತ್ತು ಕಾರಣಗಳನ್ನು ದಾಖಲಿಸಿ ಅಂಥ ಸಮಿತಿಯನ್ನು ರಚಿಸುವ ವಿಷಯದಲ್ಲಿ ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಕಾರ್ಖಾನೆಗಳ ಅಧಿಭೋಗದಾರನಿಗೆ ವಿನಾಯಿತಿ ನೀಡಬಹುದು.

(2) ಸುರಕ್ಷಾ ಸಮಿತಿಯ ರಚನೆ, ಅದರ ಸದಸ್ಯರ ಪದಾವಧಿ ಮತ್ತು ಅವರ ಹಕ್ಕುಗಳು ಮತ್ತು ಕರ್ತವ್ಯಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**41ಹೆಚ್. ಸನ್ನಿಹಿತ ಅಪಾಯದ ಬಗ್ಗೆ ಎಚ್ಚರಿಕೆ ನೀಡುವುದಕ್ಕೆ ಕೆಲಸಗಾರರ ಹಕ್ಕು.**– (1) ಅಪಾಯಕಾರಿ ಕಾರ್ಯವಿಧಾನಗಳಲ್ಲಿ ತೊಡಗಿರುವ ಯಾವುದೇ ಕಾರ್ಖಾನೆಯಲ್ಲಿ ನಿಯೋಜಿತರಾದ ಕೆಲಸಗಾರರು ಯಾವುದೇ ಅಪಘಾತದ ಕಾರಣದಿಂದ ಅವರ ಜೀವಕ್ಕೆ ಅಥವಾ ಆರೋಗ್ಯಕ್ಕೆ ಸನ್ನಿಹಿತ ಅಪಾಯವಿದೆಯೆಂಬ ಸಕಾರಣ ಅನುಮಾನ ಅವರಿಗಿದ್ದರೆ, ಆ ಬಗ್ಗೆ ಅವರು ಕಾರ್ಖಾನೆಯ ಅಥವಾ ಸಂಬಂಧಪಟ್ಟ ಪ್ರಕ್ರಿಯೆಯ ಅಧಿಭೋಗದಾರನ, ಏಜೆಂಟ್‌ನ, ವ್ಯವಸ್ಥಾಪಕನ ಅಥವಾ ಪ್ರಭಾರ ಹೊಂದಿರುವ ಇತರ ಯಾರೇ ವ್ಯಕ್ತಿಯ ಗಮನಕ್ಕೆ ತರಬಹುದು ಮತ್ತು ಅದೇ ಕಾಲದಲ್ಲಿ ಅದನ್ನು ಇನ್ಸ್‌ಪೆಕ್ಟರ್‌ನ ಗಮನಕ್ಕೂ ತರಬಹುದು.

(2) ಅಂಥ ಅಧಿಭೋಗದಾರನು, ಏಜೆಂಟನು, ವ್ಯವಸ್ಥಾಪಕನು ಅಥವಾ ಕಾರ್ಖಾನೆಯ ಅಥವಾ ಪ್ರಕ್ರಿಯೆಯ ಪ್ರಭಾರದಲ್ಲಿರುವ ವ್ಯಕ್ತಿಗೆ ಅಂಥ ಸನ್ನಿಹಿತ ಅಪಾಯ ಇರುವ ಬಗ್ಗೆ ಮನದಟ್ಟಾದರೆ ಅವನು ತಕ್ಷಣ ಪರಿಹಾರ ಕ್ರಮ ತೆಗೆದುಕೊಳ್ಳುವುದು ಮತ್ತು ತಕ್ಷಣ ತೆಗೆದುಕೊಂಡ ಕ್ರಮದ ವರದಿಯನ್ನು ಹತ್ತಿರದ ಇನ್ಸ್‌ಪೆಕ್ಟರ್‌ನಿಗೆ ಕಳುಹಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಹೇಳಿರುವ ಅಧಿಭೋಗದಾರನಿಗೆ, ಏಜೆಂಟ್‌ನಿಗೆ, ವ್ಯವಸ್ಥಾಪಕನಿಗೆ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಗೆ, ಕೆಲಸಗಾರರು ಅನುಮಾನ ಪಟ್ಟಂತೆ ಆ ಯಾವುದೇ ಸನ್ನಿಹಿತ ಅಪಾಯ ಇರುವುದು ಮನದಟ್ಟಾದರೆ ಅವನು, ಆ ವಿಷಯವನ್ನು ತಕ್ಷಣ ಇನ್ಸ್‌ಪೆಕ್ಟರ್‌ನಿಗೆ ತಿಳಿಸತಕ್ಕದ್ದು ಮತ್ತು ಅಂಥ ಸನ್ನಿಹಿತ ಅಪಾಯ ಇರುವುದರ ವಿಷಯದ ಮೇಲೆ ಅವನ ತೀರ್ಮಾನವೇ ಅಂತಿಮವಾದುದಾಗಿರತಕ್ಕದ್ದು.

## ಅಧ್ಯಾಯ – V
## ಸುವ್ಯವಸ್ಥೆ

**42. ಸ್ವಚ್ಛತೆಗೆ ಸೌಲಭ್ಯಗಳು.**– (1) ಪ್ರತಿಯೊಂದು ಕಾರ್ಖಾನೆಯಲ್ಲಿ,–

(ಎ) ಅದರಲ್ಲಿನ ಕೆಲಸಗಾರರು ಬಳಕೆ ಮಾಡುವುದಕ್ಕಾಗಿ, ಸ್ವಚ್ಛತೆಗೆ ಸಾಕಷ್ಟು ಮತ್ತು ಸೂಕ್ತ ಸೌಲಭ್ಯಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಬಿ) ಪುರುಷ ಮತ್ತು ಮಹಿಳಾ ಕೆಲಸಗಾರರ ಉಪಯೋಗಕ್ಕಾಗಿ ಪ್ರತ್ಯೇಕವಾಗಿ ಮತ್ತು ಸಾಕಷ್ಟು ಪರದೆ ಸೌಲಭ್ಯಗಳನ್ನು ಒದಗಿಸತಕ್ಕದ್ದು;

(ಸಿ) ಅಂಥ ಸೌಲಭ್ಯಗಳಿಗೆ ಸುಲಭವಾಗಿ ಪ್ರವೇಶಾವಕಾಶವಿರತಕ್ಕದ್ದು ಮತ್ತು ಅವುಗಳನ್ನು ಸ್ವಚ್ಛವಾಗಿಡತಕ್ಕದ್ದು.

(2) ರಾಜ್ಯ ಸರ್ಕಾರವು, ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಅಥವಾ ಯಾವುದೇ ತಯಾರಿಕಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ತೊಳೆಯುವುದಕ್ಕಾಗಿ ಸಾಕಷ್ಟು ಮತ್ತು ಸೂಕ್ತ ಸೌಲಭ್ಯಗಳ ಗುಣಮಟ್ಟಗಳನ್ನು ನಿಯಮಿಸಬಹುದು.

**43. ಬಟ್ಟೆಗಳ ದಾಸ್ತಾನು ಮಾಡುವ ಮತ್ತು ಒಣಗಿಸುವ ಬಗೆಗಿನ ಸೌಲಭ್ಯಗಳು.**– ರಾಜ್ಯ ಸರ್ಕಾರವು, ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಕೆಲಸದ ವೇಳೆಯಲ್ಲಿ ಧರಿಸದೇ ಇರುವ ಬಟ್ಟೆಗಳನ್ನು ಇಡುವುದಕ್ಕಾಗಿ ಮತ್ತು ಒದ್ದೆ ಬಟ್ಟೆಗಳನ್ನು ಒಣಗಿಸುವುದಕ್ಕಾಗಿ ವ್ಯವಸ್ಥೆ ಮಾಡುವುದನ್ನು ಅಗತ್ಯಪಡಿಸಿ ನಿಯಮಗಳನ್ನು ರಚಿಸಬಹುದು.

**44. ಕುಳಿತುಕೊಳ್ಳುವುದಕ್ಕೆ ಸೌಲಭ್ಯಗಳು.**– (1) ಪ್ರತಿಯೊಂದು ಕಾರ್ಖಾನೆಯಲ್ಲಿ ನಿಂತು ಕೆಲಸ ಮಾಡಬೇಕಾಗಿರುವ ಎಲ್ಲಾ ಕೆಲಸಗಾರರಿಗಾಗಿ, ಅವರು ಕೆಲಸ ಮಾಡುವಾಗ ಸಿಗಬಹುದಾದಂಥ ವಿಶ್ರಾಂತಿಯ ಯಾವುವೇ ಅವಕಾಶಗಳ ಅನುಕೂಲತೆಯನ್ನು ಅವರು ಪಡೆಯುವ ದೃಷ್ಟಿಯಿಂದ ಕುಳಿತುಕೊಳ್ಳುವುದಕ್ಕೆ ಸೂಕ್ತ ಏರ್ಪಾಡುಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಣೆ ಮಾಡತಕ್ಕದ್ದು.

(2) ಯಾವುದೇ ಕಾರ್ಖಾನೆಯಲ್ಲಿನ ನಿರ್ದಿಷ್ಟ ತಯಾರಿಕಾ ಪ್ರಕ್ರಿಯೆಯಲ್ಲಿ ತೊಡಗಿರುವ ಅಥವಾ ನಿರ್ದಿಷ್ಟ ಕೊಠಡಿಯಲ್ಲಿ ಕೆಲಸ ಮಾಡುತ್ತಿರುವ ಕೆಲಸಗಾರರು ಕುಳಿತುಕೊಂಡೇ ಅವರ ಕೆಲಸವನ್ನು ದಕ್ಷತೆಯಿಂದ ಮಾಡಬಹುದಾಗಿದೆಯೆಂದು ಚೀಫ್ ಇನ್ಸ್‌ಪೆಕ್ಟರ್‌ನು ಅಭಿಪ್ರಾಯಪಟ್ಟರೆ ಅವನು ಲಿಖಿತ ಆದೇಶದ ಮೂಲಕ ಹಾಗೆ ತೊಡಗಿರುವ ಅಥವಾ ಕೆಲಸ ಮಾಡುತ್ತಿರುವ ಎಲ್ಲ ಕೆಲಸಗಾರರಿಗಾಗಿ ಕಾರ್ಯಸಾಧ್ಯವಾಗಬಹುದಾದಂತೆ ಕುಳಿತುಕೊಳ್ಳುವ ಏರ್ಪಾಡುಗಳನ್ನು, ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ ಒದಗಿಸುವಂತೆ ಆ ಕಾರ್ಖಾನೆಯ ಅಧಿಭೋಗದಾರನಿಗೆ ತಿಳಿಸಬಹುದು.

(3) ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಉಪಬಂಧಗಳು, ಯಾವುದೇ ನಿರ್ದಿಷ್ಟಪಡಿಸಿದ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಅಥವಾ ಯಾವುದೇ ನಿರ್ದಿಷ್ಟಪಡಿಸಿದ ತಯಾರಿಕಾ ಪ್ರಕ್ರಿಯೆಗೆ ಅನ್ವಯವಾಗತಕ್ಕದ್ದಲ್ಲವೆಂದು ಘೋಷಿಸಬಹುದು.

**45. ಪ್ರಥಮ ಚಿಕಿತ್ಸೆ ಪರಿಕರಗಳು.–** (1) ಪ್ರತಿಯೊಂದು ಕಾರ್ಖಾನೆಯಲ್ಲಿ, ಎಲ್ಲ ಕೆಲಸದ ವೇಳೆಗಳಲ್ಲಿ ಕೂಡಲೇ ದೊರೆಯುವ ಹಾಗೆ, ಒಳಗಡೆ ನಿಯಮಿಸಿದ ವಸ್ತುಗಳಿಂದ ಸಜ್ಜಾದ ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳನ್ನು ಅಥವಾ ಕಪಾಟುಗಳನ್ನು ಒದಗಿಸತಕ್ಕದ್ದು ಮತ್ತು ಇಟ್ಟಿರತಕ್ಕದ್ದು ಮತ್ತು ಒದಗಿಸಬೇಕಾದ ಮತ್ತು ನಿರ್ವಹಿಸಬೇಕಾದಂಥ ಪೆಟ್ಟಿಗೆಗಳು ಅಥವಾ ಕಪಾಟುಗಳ ಸಂಖ್ಯೆಯು ಆ ಕಾರ್ಖಾನೆಯಲ್ಲಿ ಯಾವುದೇ ಒಂದು ಕಾಲದಲ್ಲಿ ಸಾಮಾನ್ಯವಾಗಿ ನಿಯೋಜಿತರಾದ ಪ್ರತಿ ನೂರಾ ಐವತ್ತು ಕೆಲಸಗಾರರಿಗೆ ಒಂದಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(2) ಒಳಗಡೆ ನಿಯಮಿಸಿದ ವಸ್ತುಗಳನ್ನಲ್ಲದೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಅಥವಾ ಕಪಾಟಿನಲ್ಲಿ ಬೇರೇನನ್ನೂ ಇಡತಕ್ಕದ್ದಲ್ಲ.

(3) ಪ್ರತಿಯೊಂದು ಪ್ರಥಮ ಚಿಕಿತ್ಸಾ ಪೆಟ್ಟಿಗೆ ಅಥವಾ ಕಪಾಟನ್ನು ರಾಜ್ಯ ಸರ್ಕಾರವು ಮನ್ನಣೆ ಮಾಡಿದ ಪ್ರಥಮ ಚಿಕಿತ್ಸಾ ಪ್ರಮಾಣಪತ್ರವನ್ನು ಹೊಂದಿರುವ ಮತ್ತು ಆ ಕಾರ್ಖಾನೆಯ ಕೆಲಸದ ವೇಳೆಗಳಲ್ಲಿ ಯಾವಾಗಲೂ ಕೂಡಲೇ ಲಭ್ಯವಿರುವ ಪ್ರತ್ಯೇಕ ಜವಾಬ್ದಾರಿಯುಳ್ಳ ವ್ಯಕ್ತಿಯ ಪ್ರಭಾರದಲ್ಲಿ ಇಟ್ಟಿರತಕ್ಕದ್ದು.

(4) ಐದು ನೂರಕ್ಕಿಂತ ಹೆಚ್ಚಿನ ಕೆಲಸಗಾರರನ್ನು ಸಾಮಾನ್ಯವಾಗಿ ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ, ನಿಯಮಿಸಿದ ಸಾಧನ ಸಾಮಗ್ರಿಗಳನ್ನು ಒಳಗೊಂಡ ಮತ್ತು ನಿಯಮಿಸಬಹುದಾದಂಥ ವೈದ್ಯಕೀಯ ಮತ್ತು ನರ್ಸಿಂಗ್ ಸಿಬ್ಬಂದಿಯ ಪ್ರಭಾರದಲ್ಲಿರುವ ಆಂಬುಲೆನ್ಸ್ ಕೊಠಡಿಯನ್ನು ಒದಗಿಸತಕ್ಕದ್ದು ಮತ್ತು ನಿರ್ವಹಣೆ ಮಾಡತಕ್ಕದ್ದು ಮತ್ತು ಆ ಸೌಲಭ್ಯಗಳನ್ನು ಆ ಕಾರ್ಖಾನೆಯ ಕೆಲಸದ ವೇಳೆಗಳಲ್ಲಿ ಯಾವಾಗಲೂ ಕೂಡಲೇ ಲಭ್ಯವಿರುವಂತೆ ಮಾಡತಕ್ಕದ್ದು.

**46. ಕ್ಯಾಂಟೀನ್‌ಗಳು.–** (1) ಸಾಮಾನ್ಯವಾಗಿ ಇನ್ನೂರೈವತ್ತಕ್ಕಿಂತಲೂ ಹೆಚ್ಚು ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಯಾವುದೇ ನಿರ್ದಿಷ್ಟಪಡಿಸಿದ ಕಾರ್ಖಾನೆಯಲ್ಲಿ ಆ ಕೆಲಸಗಾರರ ಉಪಯೋಗಕ್ಕಾಗಿ ಅಧಿಭೋಗದಾರನು ಕ್ಯಾಂಟಿನನ್ನು ಅಥವಾ ಕ್ಯಾಂಟಿನುಗಳನ್ನು ಒದಗಿಸತಕ್ಕದ್ದೆಂದು ಮತ್ತು ನಿರ್ವಹಿಸಿಕೊಂಡು ಬರತಕ್ಕದ್ದೆಂದು ಅಗತ್ಯಪಡಿಸಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ,–

(ಎ) ಅಂಥ ಕ್ಯಾಂಟೀನ್‌ನನ್ನು ಒದಗಿಸಬೇಕಾದಂತಹ ದಿನಾಂಕ;

(ಬಿ) ಆ ಕ್ಯಾಂಟೀನಿನ ರಚನೆ, ಸ್ಥಳಾವಕಾಶ, ಪೀಠೋಪಕರಣ ಮತ್ತು ಇತರೆ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಗುಣಮಟ್ಟಗಳು;

(ಸಿ) ಅಲ್ಲಿ ಸರಬರಾಜು ಮಾಡುವ ಆಹಾರ ಪದಾರ್ಥಗಳು ಮತ್ತು ಅವುಗಳಿಗಾಗಿ ವಿಧಿಸಬಹುದಾದಂತಹ ಬೆಲೆಗಳು;

(ಡಿ) ಕ್ಯಾಂಟೀನಿಗಾಗಿ ವ್ಯವಸ್ಥಾಪಕ ಸಮಿತಿಯ ರಚನೆ ಮತ್ತು ಆ ಕ್ಯಾಂಟೀನಿನ ವ್ಯವಸ್ಥಾಪನೆಯಲ್ಲಿ ಕೆಲಸಗಾರರ ಪ್ರಾತಿನಿಧ್ಯ;

(ಡಿಡಿ) ಕ್ಯಾಂಟೀನನ್ನು ನಡೆಸುವಾಗ ಯಾವ ಖರ್ಚಿನ ಬಾಬ್ತುಗಳನ್ನು ಆಹಾರ ಪದಾರ್ಥಗಳ ಬೆಲೆಯನ್ನು ನಿಗದಿಪಡಿಸುವಾಗ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗಿಲ್ಲವೋ ಮತ್ತು ನಿಯೋಜಕನೇ ಭರಿಸಬೇಕಾಗುತ್ತದೋ ಆ ವೆಚ್ಚದ ಬಾಬುಗಳು;

(ಇ) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, (ಸಿ) ಖಂಡದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಪ್ರತ್ಯಾಯೋಜಿಸುವುದು

– ಇವುಗಳ ಬಗ್ಗೆ ಉಪಬಂಧಿಸಬಹುದು.

**47. ಆಶ್ರಯತಾಣಗಳು, ವಿಶ್ರಾಂತಿ ಕೋಣೆಗಳು ಮತ್ತು ಊಟದ ಕೋಣೆಗಳು.–** (1) ಸಾಮಾನ್ಯವಾಗಿ ಒಂದು ನೂರ ಐವತ್ತಕ್ಕಿಂತ ಹೆಚ್ಚು ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ ಕೆಲಸಗಾರರು ತಾವು ತಂದ ಊಟ ಮಾಡುವುದಕ್ಕಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಹೊಂದಿರುವ ಸಾಕಷ್ಟು ಮತ್ತು ಸೂಕ್ತ ಆಶ್ರಯತಾಣಗಳನ್ನು ಅಥವಾ ವಿಶ್ರಾಂತಿ ಕೋಣೆಗಳನ್ನು ಮತ್ತು ಸೂಕ್ತ ಊಟದ ಕೋಣೆಯನ್ನು ಕೆಲಸಗಾರರ ಬಳಕೆಗಾಗಿ ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು:

ಪರಂತು, 46ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ನಿರ್ವಹಿಸಿರುವ ಯಾವುದೇ ಕ್ಯಾಂಟೀನನ್ನು ಈ ಉಪಪ್ರಕರಣದ ಅಗತ್ಯತೆಗಳ ಭಾಗವೆಂದು ಪರಿಗಣಿಸತಕ್ಕದ್ದು:

ಮತ್ತೂ ಪರಂತು, ಊಟದ ಕೋಣೆಯು ಇದ್ದರೆ, ಯಾರೇ ಕೆಲಸಗಾರನು ಕೆಲಸ ಮಾಡುವ ಕೊಠಡಿಯಲ್ಲಿ ಯಾವುದೇ ಆಹಾರವನ್ನು ಸೇವಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗೆ ಒದಗಿಸಬೇಕಾದ ಆಶ್ರಯತಾಣಗಳು ಅಥವಾ ವಿಶ್ರಾಂತಿ ಕೋಣೆಗಳು ಅಥವಾ ಊಟದ ಕೋಣೆಗಳಿಗೆ ಸಾಕಷ್ಟು ಬೆಳಕು ಮತ್ತು ಗಾಳಿ ಬೆಳಕಿನ ವ್ಯವಸ್ಥೆ ಇರತಕ್ಕದ್ದು ಮತ್ತು ಅವುಗಳನ್ನು ತಂಪಾದ ಮತ್ತು ಸ್ವಚ್ಛವಾದ ಸ್ಥಿತಿಯಲ್ಲಿ ನಿರ್ವಹಿಸತಕ್ಕದ್ದು.

(3) ರಾಜ್ಯ ಸರ್ಕಾರವು,–

(ಎ) ಈ ಪ್ರಕರಣದ ಮೇರೆಗೆ ಒದಗಿಸಬೇಕಾದ ಆಶ್ರಯತಾಣಗಳು, ವಿಶ್ರಾಂತಿ ಕೋಣೆಗಳು ಮತ್ತು ಊಟದ ಕೋಣೆಗಳ ರಚನೆ, ಸ್ಥಳಾವಕಾಶ, ಪೀಠೋಪಕರಣ ಮತ್ತು ಇತರೆ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಗುಣಮಟ್ಟಗಳನ್ನು ನಿಯಮಿಸಬಹುದು;

(ಬಿ) ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ಕಾರ್ಖಾನೆಯನ್ನು ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳನ್ನು ಈ ಪ್ರಕರಣದ ಅಗತ್ಯತೆಗಳಿಂದ ವಿನಾಯಿತಿಗೊಳಿಸಬಹುದು.

**48. ಮಕ್ಕಳ ಪಾಲನಾ ಕೊಠಡಿಗಳು.–** (1) ಸಾಮಾನ್ಯವಾಗಿ ಮೂವತ್ತಕ್ಕಿಂತ ಹೆಚ್ಚು ಮಹಿಳಾ ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ, ಅಂಥ ಮಹಿಳೆಯರ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನೊಳಗಿನ ಬಾಲಕ/ಬಾಲಕಿ ಉಪಯೋಗಕ್ಕಾಗಿ ಸೂಕ್ತ ಕೊಠಡಿ ಅಥವಾ ಕೊಠಡಿಗಳನ್ನು ಒದಗಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(2) ಅಂಥ ಕೊಠಡಿಗಳಿಗೆ ಸಾಕಷ್ಟು ಸ್ಥಳಾವಕಾಶವನ್ನು ಒದಗಿಸತಕ್ಕದ್ದು, ಅವುಗಳಿಗೆ ಸಾಕಷ್ಟು ಗಾಳಿಬೆಳಕಿನ ವ್ಯವಸ್ಥೆ ಇರತಕ್ಕದ್ದು ಮತ್ತು ಅವುಗಳನ್ನು ಸ್ವಚ್ಛ ಮತ್ತು ನೈರ್ಮಲ್ಯ ಸ್ಥಿತಿಯಲ್ಲಿ ನಿರ್ವಹಿಸತಕ್ಕದ್ದು ಮತ್ತು ಅವುಗಳು ಬಾಲಕ/ಬಾಲಕಿ ಮತ್ತು ಶಿಶುಗಳ ಪಾಲನೆಯಲ್ಲಿ ತರಬೇತಿ ಹೊಂದಿದ ಮಹಿಳೆಯರ ಪ್ರಭಾರದಲ್ಲಿರತಕ್ಕದ್ದು.

(3) ರಾಜ್ಯ ಸರ್ಕಾರವು,–

(ಎ) ಸ್ಥಳ ಮತ್ತು ಈ ಪ್ರಕರಣದ ಮೇರೆಗೆ ಒದಗಿಸಬೇಕಾದ ಕೋಣೆಗಳ ರಚನೆ, ಸ್ಥಳಾವಕಾಶ, ಪೀಠೋಪಕರಣ ಮತ್ತು ಇತರ ಸಾಧನ ಸಾಮಗ್ರಿಗಳಿಗೆ ಸಂಬಂಧಿಸಿದಂತೆ ಗುಣಮಟ್ಟಗಳನ್ನು ಗೊತ್ತುಪಡಿಸಿ;

(ಬಿ) ಈ ಪ್ರಕರಣವು ಅನ್ವಯವಾಗುವಂತಹ ಕಾರ್ಖಾನೆಯಲ್ಲಿ ಬಾಲಕ/ಬಾಲಕಿ ಉಡುಪುಗಳನ್ನು ಒಗೆಯುವುದಕ್ಕಾಗಿ ಮತ್ತು ಬದಲಾಯಿಸುವುದಕ್ಕಾಗಿ ಸೌಲಭ್ಯಗಳ ಸೂಕ್ತ ವ್ಯವಸ್ಥೆಯನ್ನು ಒಳಗೊಂಡು ಮಹಿಳಾ ಕೆಲಸಗಾರರ ಮಕ್ಕಳ ಪಾಲನೆಗಾಗಿ ಹೆಚ್ಚುವರಿ ಸೌಲಭ್ಯಗಳ ವ್ಯವಸ್ಥೆಯನ್ನು ಅಗತ್ಯಪಡಿಸಿ;

(ಸಿ) ಅಂಥ ಬಾಲಕ/ಬಾಲಕಿಗಾಗಿ ಯಾವುದೇ ಕಾರ್ಖಾನೆಯಲ್ಲಿ ಉಚಿತ ಹಾಲು ಅಥವಾ ಉಪಾಹಾರ ಅಥವಾ ಅವೆರಡನ್ನೂ ಒದಗಿಸಲು ಅಗತ್ಯಪಡಿಸಿ;

(ಡಿ) ಬಾಲಕ/ಬಾಲಕಿಗೆ ಅವಶ್ಯ ಮಧ್ಯಂತರಗಳಲ್ಲಿ ಆಹಾರ ಕೊಡಲು ಯಾವುದೇ ಕಾರ್ಖಾನೆಯಲ್ಲಿ ಅಂಥ ಬಾಲಕ/ಬಾಲಕಿ ತಾಯಂದಿರಿಗೆ ಸೌಲಭ್ಯಗಳನ್ನು ಒದಗಿಸಕ್ಕದ್ದೆಂದು ಅಗತ್ಯಪಡಿಸಿ

– ನಿಯಮಗಳನ್ನು ರಚಿಸಬಹುದು.

**49. ಹಿತರಕ್ಷಣಾ ಅಧಿಕಾರಿಗಳು.–** (1) ಸಾಮಾನ್ಯವಾಗಿ ಐದುನೂರು ಅಥವಾ ಹೆಚ್ಚಿನ ಕೆಲಸಗಾರರನ್ನು ನಿಯೋಜಿಸಿಕೊಂಡಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ ಅಧಿಭೋಗದಾರನು ನಿಯಮಿಸಬಹುದಾದಷ್ಟು ಸಂಖ್ಯೆಯ ಕಲ್ಯಾಣ ಅಧಿಕಾರಿಗಳನ್ನು ಆ ಕಾರ್ಖಾನೆಯಲ್ಲಿ ನಿಯೋಜಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ನಿಯೋಜನೆಗೊಂಡ ಅಧಿಕಾರಿಗಳ ಕರ್ತವ್ಯಗಳನ್ನು, ಅರ್ಹತೆಗಳನ್ನು ಮತ್ತು ಸೇವಾ ಷರತ್ತುಗಳನ್ನು ರಾಜ್ಯ ಸರ್ಕಾರವು ನಿಯಮಿಸಬಹುದು.

**50. ಈ ಅಧ್ಯಾಯಕ್ಕೆ ಪೂರಕವಾದ ನಿಯಮಗಳನ್ನು ರಚಿಸಲು ಅಧಿಕಾರ.–** ರಾಜ್ಯ ಸರ್ಕಾರವು,–

(ಎ) ಕೆಲಸಗಾರರ ಹಿತರಕ್ಷಣೆಗಾಗಿ ನಿಯಮಿಸಬಹುದಾದ ಪರ್ಯಾಯ ವ್ಯವಸ್ಥೆಗಳನ್ನು ಪಾಲಿಸುವುದಕ್ಕೆ ಒಳಪಟ್ಟು, ಈ ಅಧ್ಯಾಯದ ಯಾವುದೇ ಉಪಬಂಧದ ಪಾಲನೆ ಅನ್ವಯವಾಗದಂತೆ ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ವಿನಾಯಿತಿ ನೀಡಿರುವ;

(ಬಿ) ಯಾವುದೇ ಕಾರ್ಖಾನೆಯಲ್ಲಿ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ, ನಿಯೋಜಿತರಾದ ಕೆಲಸಗಾರರ ಪ್ರತಿನಿಧಿಗಳು ಆ ಕೆಲಸಗಾರರ ಹಿತರಕ್ಷಣೆ ವ್ಯವಸ್ಥೆಗಳ ನಿರ್ವಹಣೆಯಲ್ಲಿ ಸಹವರ್ತಿಗಳಾಗಿರತಕ್ಕದ್ದೆಂದು ಅಗತ್ಯಪಡಿಸಿರುವ

– ನಿಯಮಗಳನ್ನು ರಚಿಸಬಹುದು.

## ಅಧ್ಯಾಯ – VI
## ವಯಸ್ಕರ ಕೆಲಸದ ವೇಳೆ

**51. ವಾರದ ವೇಳೆಗಳು.–** ಯಾರೇ ವಯಸ್ಕ ಕೆಲಸಗಾರನನ್ನು ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅವನಿಗೆ ಅನುಮತಿ ಕೊಡತಕ್ಕದ್ದಲ್ಲ.

**52. ವಾರದ ರಜಾ ದಿನಗಳು.–** (1) ಯಾರೇ ವಯಸ್ಕ ಕೆಲಸಗಾರನನ್ನು ವಾರದ ಮೊದಲನೆಯ ದಿವಸದಂದು (ಇಲ್ಲಿ ಇನ್ನು ಮುಂದೆ ಸದರಿ ದಿವಸವೆಂದು ಉಲ್ಲೇಖಿಸಲಾಗಿದೆ) ಕಾರ್ಖಾನೆಯಲ್ಲಿ,–

(ಎ) ಸದರಿ ದಿವಸಕ್ಕೆ ನಿಕಟಪೂರ್ವದ ಅಥವಾ ನಿಕಟೋತ್ತರದ ಮೂರು ದಿವಸಗಳ ಪೈಕಿ ಒಂದು ಇಡೀ ದಿನಕ್ಕಾಗಿ ಅವನು ರಜೆ ಪಡೆದ ಅಥವಾ ಪಡೆಯುವ ಹೊರತು; ಮತ್ತು

(ಬಿ) ಆ ಕಾರ್ಖಾನೆಯ ವ್ಯವಸ್ಥಾಪಕನು (ಎ) ಖಂಡದ ಮೇರೆಗೆ ಸದರಿ ದಿವಸಕ್ಕೆ ಅಥವಾ ಬದಲಾಯಿಸಿದ ದಿವಸಕ್ಕೆ ಮುಂಚೆ ಇವುಗಳಲ್ಲಿ ಯಾವುದು ಮೊದಲು ಬರುವುದೋ ಆ ದಿವಸಕ್ಕೆ ಮುಂಚೆ,–

(i) ವ್ಯವಸ್ಥಾಪಕನ ಅಪೇಕ್ಷೆಯಂತೆ ಸದರಿ ದಿವಸದಂದು ಮತ್ತು ಆ ದಿನದ ಬದಲಿಗೆ ಇನ್ನೊಂದು ದಿನದಂದು ಆ ಕೆಲಸಗಾರನು ಕೆಲಸ ಮಾಡುವಂತೆ ಅಗತ್ಯಪಡಿಸಿರುವ ನೋಟೀಸನ್ನು ಇನ್ಸ್‌ಪೆಕ್ಟರ್‌ನ ಕಚೇರಿಯಲ್ಲಿ ನೀಡಿದ್ದ ಹೊರತು; ಮತ್ತು

(ii) ಕಾರ್ಖಾನೆಯಲ್ಲಿ ಆ ಬಗ್ಗೆ ನೋಟೀಸನ್ನು ಪ್ರದರ್ಶಿಸಿದ್ದ ಹೊರತು

– ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಅವಕಾಶ ಕೊಡತಕ್ಕದ್ದಲ್ಲ:

ಪರಂತು, ಇಡೀ ದಿನ ರಜಾ ಇಲ್ಲದೆಯೇ ನಿರಂತರವಾಗಿ ಬರುವ ಹತ್ತು ದಿವಸಗಳಿಗಿಂತ ಹೆಚ್ಚಾಗಿ ಯಾರೇ ಕೆಲಸಗಾರನು ಕೆಲಸ ಮಾಡುವ ಪರಿಣಾಮ ಉಂಟುಮಾಡುವಂಥ ಯಾವುದೇ ಬದಲಾವಣೆಯನ್ನು ಮಾಡತಕ್ಕದ್ದಲ್ಲ.

(2) ಉಪಪ್ರಕರಣ (1)ರ ಮೇರೆಗೆ ಕೊಟ್ಟ ನೋಟೀಸುಗಳನ್ನು ಮತ್ತು ಸದರಿ ದಿವಸಕ್ಕೆ ಮುಂಚೆ ಅಥವಾ ರದ್ದುಪಡಿಸಬೇಕಾದ ರಜಾ ದಿನಕ್ಕೆ ಮುಂಚೆ ಇವುಗಳಲ್ಲಿ ಯಾವ ದಿನ ಮೊದಲು ಬರುವುದೋ ಆ ದಿವಸಕ್ಕೆ ಮುಂಚಿನ ದಿವಸ ಮೀರದಂತೆ ಇನ್ಸ್‌ಪೆಕ್ಟರ್‌ನ ಕಚೇರಿಯಲ್ಲಿ ನೋಟೀಸನ್ನು ನೀಡುವ ಮೂಲಕ ಮತ್ತು ಕಾರ್ಖಾನೆಯಲ್ಲಿ ನೋಟೀಸನ್ನು ಪ್ರದರ್ಶಿಸಿ ರದ್ದುಪಡಿಸಬಹುದು.

(3) ಉಪಪ್ರಕರಣ (1)ರ ಉಪಬಂಧಗಳಿಗೆ ಅನುಸಾರವಾಗಿ, ಯಾರೇ ಕೆಲಸಗಾರನು ಸದರಿ ದಿವಸದಂದು ಕೆಲಸ ಮಾಡಿದ್ದರೆ ಮತ್ತು ಅದಕ್ಕೆ ನಿಕಟಪೂರ್ವದಲ್ಲಿ ಮೂರು ದಿನಗಳ ಪೈಕಿ ಒಂದು ದಿನ ರಜಾ ದಿನವಾಗಿದ್ದರೆ ಆ ಸದರಿ ದಿನವನ್ನು ಅವನ ವಾರದ ಕೆಲಸದ ವೇಳೆಗಳನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಹಿಂದಿನ ವಾರದಲ್ಲಿ ಸೇರಿಸತಕ್ಕದ್ದು.

**53. ಪರಿಹಾರ ರಜಾ ದಿನಗಳು.–** (1) 52ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಕಾರ್ಖಾನೆಗೆ ಅಥವಾ ಅದರಲ್ಲಿನ ಕೆಲಸಗಾರನಿಗೆ ವಿನಾಯಿತಿ ನೀಡಿ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಆದೇಶವನ್ನು ಮಾಡಿರುವುದರ ಅಥವಾ ನಿಯಮವನ್ನು ರಚಿಸಿರುವುದರ ಪರಿಣಾಮವಾಗಿ, ಆ ಪ್ರಕರಣದ (1)ನೇ ಉಪಪ್ರಕರಣದಲ್ಲಿ ವಾರದ ಯಾವ ರಜಾ ದಿನಗಳಿಗೆ ಅವಕಾಶ ಕಲ್ಪಿಸಲಾಗಿದೆಯೋ ಆ ಯಾವುದೇ ವಾರದ ರಜಾ ದಿನವನ್ನು ಕೆಲಸಗಾರನಿಗೆ, ಯಾವ ತಿಂಗಳಲ್ಲಿ ಆ ರಜಾ ದಿನಗಳು ಅವನಿಗೆ ಸಿಗಬೇಕಾಗಿತ್ತೋ ಆ ತಿಂಗಳ ಒಳಗೆ ಅಥವಾ ಆ ತಿಂಗಳ ನಿಕಟೋತ್ತರದ ಎರಡು ತಿಂಗಳ ಒಳಗೆ, ಹಾಗೆ ಸಿಗದೆ ಹೋದ ರಜಾ ದಿವಸಗಳಿಗೆ ಸಮನಾದ ಸಂಖ್ಯೆಯಷ್ಟು ಪರಿಹಾರ ರಜಾ ದಿನಗಳನ್ನು ಅವನಿಗೆ ಕೊಡತಕ್ಕದ್ದು.

(2) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದಲ್ಲಿ ಕಲ್ಪಿಸಿರುವ ರಜಾ ದಿನಗಳನ್ನು ಯಾವ ರೀತಿಯಲ್ಲಿ ಕೊಡತಕ್ಕದ್ದು ಎಂಬ ಬಗ್ಗೆ ನಿಯಮಿಸಬಹುದು.

**54. ದಿನದಲ್ಲಿ ಕೆಲಸದ ಗಂಟೆಗಳು.–** 51ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾರೇ ವಯಸ್ಕ ಕೆಲಸಗಾರನನ್ನು ಯಾವುದೇ ದಿವಸ ಒಂಬತ್ತು ಗಂಟೆಗಳಿಗಿಂತ ಹೆಚ್ಚಾಗಿ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಹಾಗೆ ಮಾಡಲು ಅವನಿಗೆ ಅನುಮತಿ ಕೊಡತಕ್ಕದ್ದಲ್ಲ:

ಪರಂತು, ಚೀಫ್ ಇನ್ಸ್‌ಪೆಕ್ಟರ್‌ನಿಂದ ಮುಂಚಿತವಾಗಿಯೇ ಅನುಮೋದನೆ ಪಡೆಯುವುದಕ್ಕೆ ಒಳಪಟ್ಟು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ದಿನದಲ್ಲಿನ ಗರಿಷ್ಠ ಕೆಲಸದ ಗಂಟೆಗಳನ್ನು ಪಾಳಿಗಳ ಬದಲಾವಣೆಗೆ ಅನುಕೂಲ ಮಾಡಿಕೊಡಲು ಹೆಚ್ಚಿಸಬಹುದು.

**55. ವಿಶ್ರಾಂತಿಗಾಗಿ ಬಿಡುವುಗಳು.–** (1) ಪ್ರತಿದಿವಸ ಕಾರ್ಖಾನೆಯಲ್ಲಿನ ವಯಸ್ಕ ಕೆಲಸಗಾರರ ಕೆಲಸದ ಅವಧಿಗಳನ್ನು, ಯಾವುದೇ ಅವಧಿಯು ಐದು ಗಂಟೆಗಳನ್ನು ಮೀರದ ಹಾಗೆ ಮತ್ತು ಯಾರೇ ಕೆಲಸಗಾರನು ಕನಿಷ್ಠಪಕ್ಷ ಅರ್ಧ ಗಂಟೆ ವಿಶ್ರಾಂತಿಗೆ ಬಿಡುವನ್ನು ಪಡೆಯುವುದಕ್ಕೆ ಮುಂಚೆ ಅವನು ಐದು ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ಮಾಡದ ಹಾಗೆ ನಿಗದಿಪಡಿಸತಕ್ಕದ್ದು.

(2) ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಚೀಫ್ ಇನ್ಸ್‌ಪೆಕ್ಟರ್‌ನು, ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ಯಾವುದೇ ಕಾರ್ಖಾನೆಯನ್ನು (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿ ನೀಡಬಹುದು. ಆದಾಗ್ಯೂ, ಕೆಲಸಗಾರನು ಬಿಡುವಿಲ್ಲದೇ ಕೆಲಸ ಮಾಡಿದ ಗಂಟೆಗಳ ಒಟ್ಟು ಸಂಖ್ಯೆಯು ಆರು ಗಂಟೆಯನ್ನು ಮೀರತಕ್ಕದ್ದಲ್ಲ.

**56. ವಿಸ್ತಾರ.–** ಕಾರ್ಖಾನೆಯಲ್ಲಿನ ವಯಸ್ಕ ಕೆಲಸಗಾರನ ಕೆಲಸದ ಅವಧಿಗಳನ್ನು 55ನೇ ಪ್ರಕರಣದ ಮೇರೆಗೆ ಅವನ ವಿಶ್ರಾಂತಿ ಬಿಡುವುಗಳನ್ನೂ ಒಳಗೊಂಡು ಯಾವುದೇ ದಿವಸದಲ್ಲಿ ಹತ್ತೂವರೆ ಗಂಟೆಗಳಿಗಿಂತ ಹೆಚ್ಚಿಗೆ ವಿಸ್ತೃತವಾಗದಂತೆ ವ್ಯವಸ್ಥೆ ಮಾಡತಕ್ಕದ್ದು:

ಪರಂತು, ಚೀಫ್ ಇನ್ಸ್‌ಪೆಕ್ಟರ್‌ನು, ಲಿಖಿತದಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ವಿಸ್ತಾರವನ್ನು ಹನ್ನೆರಡು ಗಂಟೆಗಳವರೆಗೆ ಹೆಚ್ಚಿಸಬಹುದು.

**57. ರಾತ್ರಿ ಪಾಳಿಗಳು.–** ಕಾರ್ಖಾನೆಯಲ್ಲಿ ಕೆಲಸಗಾರನು ಮಧ್ಯ ರಾತ್ರಿಯನ್ನೂ ಮೀರಿ ಪಾಳಿಯಲ್ಲಿ ಕೆಲಸ ಮಾಡುವುದಾದರೆ,–

(ಎ) 52ನೇ ಮತ್ತು 53ನೇ ಪ್ರಕರಣಗಳ ಉದ್ದೇಶಗಳಿಗಾಗಿ, ಅವನ ಸಂದರ್ಭದಲ್ಲಿ ಇಡೀ ದಿವಸಕ್ಕಾಗಿ ರಜಾ ದಿನ ಎಂದರೆ ಅವನ ಪಾಳಿಯು ಮುಗಿದಾಗ ಪ್ರಾರಂಭವಾಗುವ ನಿರಂತರ ಇಪ್ಪತ್ನಾಲ್ಕು ಗಂಟೆಗಳ ಅವಧಿ;

(ಬಿ) ಅವನಿಗೆ, ಮುಂಬರುವ ದಿವಸವನ್ನು, ಅಂಥ ಪಾಳಿಯು ಮುಗಿದಾಗ ಪ್ರಾರಂಭವಾಗುವ ಇಪ್ಪತ್ನಾಲ್ಕು ಗಂಟೆಗಳ ಅವಧಿ ಎಂದು ಭಾವಿಸತಕ್ಕದ್ದು ಮತ್ತು ಮಧ್ಯರಾತ್ರಿಯ ತರುವಾಯ ಅವನು ಕೆಲಸ ಮಾಡಿದ ಗಂಟೆಗಳನ್ನು ಹಿಂದಿನ ದಿವಸದ ಲೆಕ್ಕಕ್ಕೆ ಸೇರಿಸತಕ್ಕದ್ದು.

**58. ಪರಸ್ಪರ ವ್ಯಾಪ್ತವಾಗಿರುವ ಪಾಳಿಗಳ ನಿಷೇಧ.–** (1) ಒಂದಕ್ಕಿಂತ ಹೆಚ್ಚು ಕೆಲಸಗಾರರ ತಂಡವು ಒಂದೇ ಕಾಲದಲ್ಲಿ ಒಂದೇ ಬಗೆಯ ಕೆಲಸದಲ್ಲಿ ತೊಡಗಿರುವ ಹಾಗೆ ಪಾಳಿಗಳ ಪದ್ಧತಿಯನ್ನು ವ್ಯವಸ್ಥೆ ಮಾಡಿದ್ದರೆ, ಆ ಪದ್ಧತಿಯಂತೆ ಯಾವುದೇ ಕಾರ್ಖಾನೆಯಲ್ಲಿ ಕೆಲಸ ನಡೆಸತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಚೀಫ್ ಇನ್ಸ್‌ಪೆಕ್ಟರ್‌ನು ಲಿಖಿತ ಆದೇಶದ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ ವಿಹಿತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ (1)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಯಾವುದೇ ಕಾರ್ಖಾನೆಯನ್ನು ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳನ್ನು ಅಥವಾ ಕಾರ್ಖಾನೆಯ ಯಾವುದೇ ವಿಭಾಗವನ್ನು ಅಥವಾ ಶಾಖೆಯನ್ನು ಅಥವಾ ಅದರಲ್ಲಿನ ಯಾವುದೇ ಪ್ರವರ್ಗದ ಅಥವಾ ವರ್ಣನೆಯ ಕೆಲಸಗಾರರನ್ನು ವಿನಾಯಿತಿಗೊಳಿಸಬಹುದು.

**59. ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಹೆಚ್ಚಿನ ಮಜೂರಿ.–** (1) ಕಾರ್ಖಾನೆಯಲ್ಲಿ ಕೆಲಸಗಾರನು ಯಾವುದೇ ಒಂದು ದಿವಸದಲ್ಲಿ ಒಂಬತ್ತು ಗಂಟೆಗಳಿಗಿಂತಲೂ ಹೆಚ್ಚಾಗಿ ಅಥವಾ ಯಾವುದೇ ವಾರದಲ್ಲಿ ನಲವತ್ತೆಂಟು ಗಂಟೆಗಳಿಗಿಂತಲೂ ಹೆಚ್ಚಾಗಿ ಕೆಲಸ ಮಾಡಿದ್ದರೆ, ಅವನು ಅವಧಿಗೂ ಮೀರಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಅವನ ಸಾಮಾನ್ಯ ಮಜೂರಿ ದರದ ಎರಡರಷ್ಟು ದರದಲ್ಲಿ ಮಜೂರಿಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಉಪಪ್ರಕರಣ (1)ರ ಉದ್ದೇಶಗಳಿಗಾಗಿ, "ಸಾಮಾನ್ಯ ಮಜೂರಿ ದರ" ಎಂದರೆ ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬರುವ, ಕೆಲಸಗಾರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವ ಅನುಕೂಲಕ್ಕೆ ಸಮಾನವಾದ ನಗದನ್ನೂ ಒಳಗೊಂಡು, ಮೂಲ ಮಜೂರಿಗಳು ಮತ್ತು ಭತ್ಯೆಗಳು, ಆದರೆ ಅದು ಬೋನಸ್ಸನ್ನು ಮತ್ತು ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಕೊಡುವ ಮಜೂರಿಗಳನ್ನು ಒಳಗೊಳ್ಳುವುದಿಲ್ಲ.

(3) ಕಾರ್ಖಾನೆಯಲ್ಲಿ ಯಾರೇ ಕೆಲಸಗಾರರಿಗೆ ತುಂಡು ದರದ ಆಧಾರದ ಮೇಲೆ ಸಂದಾಯ ಮಾಡುತ್ತಿದ್ದರೆ, ವೇಳಾ ದರವನ್ನು, ಯಾವ ಕ್ಯಾಲೆಂಡರ್ ತಿಂಗಳಲ್ಲಿ ಅವಧಿಗೂ ಮೀರಿ ಕೆಲಸ ಮಾಡಲಾಗಿದೆಯೋ ಆ ಕ್ಯಾಲೆಂಡರ್ ತಿಂಗಳಿನ ನಿಕಟಪೂರ್ವದ ತಿಂಗಳಿನಲ್ಲಿ ಯಾವ ದಿನಗಳಂದು ಅದೇ ಕೆಲಸವನ್ನು ಅಥವಾ ಅದೇ ವಿಧದ ಕೆಲಸವನ್ನು ಅವರು ವಾಸ್ತವವಾಗಿ ಮಾಡಿದ್ದಾರೋ ಆ ದಿವಸಗಳಿಗಾಗಿ ಅವರ ಪೂರ್ಣಕಾಲಿಕ ಗಳಿಕೆಗಳ ದಿನದ ಸರಾಸರಿಗೆ ಸಮವೆಂದು ಭಾವಿಸತಕ್ಕದ್ದು ಮತ್ತು ಅಂಥ ವೇಳಾ ದರಗಳನ್ನು ಆ ಕೆಲಸಗಾರರ ಸಾಮಾನ್ಯ ಮಜೂರಿ ದರವೆಂದು ಭಾವಿಸತಕ್ಕದ್ದು:

ಪರಂತು, ಕೆಲಸಗಾರನು, ಕ್ಯಾಲೆಂಡರ್ ತಿಂಗಳಿನ ನಿಕಟಪೂರ್ವದಲ್ಲಿ ಅದೇ ಕೆಲಸವನ್ನು ಅಥವಾ ಅದೇ ವಿಧದ ಕೆಲಸವನ್ನು ಮಾಡಿಲ್ಲದ ಸಂದರ್ಭದಲ್ಲಿ, ವೇಳಾ ದರವು ಯಾವ ವಾರದಲ್ಲಿ ಅವಧಿಗೂ ಮೀರಿ ಕೆಲಸ ಮಾಡಲಾಯಿತೋ ಆ ವಾರದಲ್ಲಿ ಅವನು ವಾಸ್ತವವಾಗಿ ಕೆಲಸ ಮಾಡಿದ ದಿವಸಗಳಲ್ಲಿ ಕೆಲಸಗಾರನ ಗಳಿಕೆಯ ದಿನದ ಸರಾಸರಿಗೆ ಸಮವೆಂದು ಭಾವಿಸತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಕೆಲಸಗಾರನು ವಾಸ್ತವವಾಗಿ ಕೆಲಸ ಮಾಡಿದ ದಿನಗಳಿಗಾಗಿ ಆ ಗಳಿಕೆಯನ್ನು ಲೆಕ್ಕ ಹಾಕುವಾಗ ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರರಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬರುವ, ಕೆಲಸಗಾರನು ತತ್ಕಾಲದಲ್ಲಿ ಹಕ್ಕುಳ್ಳವನಾಗಿರುವ ಅನುಕೂಲಕ್ಕೆ ಸಮಾನವಾದ ನಗದನ್ನೂ ಒಳಗೊಂಡು, ಅಂಥ ಭತ್ಯೆಗಳನ್ನು ಸೇರಿಸತಕ್ಕದ್ದು. ಆದರೆ ಆ ಗಳಿಕೆಯನ್ನು ಯಾವ ಅವಧಿಗೆ ಲೆಕ್ಕ ಹಾಕಲಾಗುತ್ತಿದೆಯೋ ಆ ಅವಧಿಗೆ ಸಂಬಂಧಪಟ್ಟಂತೆ ಸಂದಾಯವಾಗಬೇಕಾದ ಯಾವುದೇ ಬೋನಸ್ಸನ್ನು ಅಥವಾ ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಕೊಡುವ ಮಜೂರಿಗಳನ್ನು ಹೊರತುಪಡಿಸತಕ್ಕದ್ದು.

(4) ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರನಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬಂದ ಅನುಕೂಲಕ್ಕೆ ಸಮಾನವಾದ ನಗದನ್ನು ಅರ್ಹ ಕುಟುಂಬಕ್ಕೆ ಕೊಡಬಹುದಾದ ಆಹಾರಧಾನ್ಯಗಳ ಮತ್ತು ಇತರ ವಸ್ತುಗಳ ಗರಿಷ್ಠ ಪ್ರಮಾಣದ ಆಧಾರದ ಮೇಲೆ ಆಗಿಂದಾಗ್ಗೆ ನಿಯಮಿಸಬಹುದಾದಂತೆ ಲೆಕ್ಕ ಹಾಕತಕ್ಕದ್ದು.

**ವಿವರಣೆ 1:–** "ಅರ್ಹ ಕುಟುಂಬ" ಎಂದರೆ ಒಟ್ಟಾರೆ ಮೂರು ವಯಸ್ಕ ಬಳಕೆ ಯೂನಿಟ್ಟುಗಳು ಅಗತ್ಯವಾಗುವ ಆ ಕೆಲಸಗಾರ, ಅವನ ಹೆಂಡತಿ ಅಥವಾ ಅವಳ ಗಂಡ ಮತ್ತು ಹದಿನಾಲ್ಕು ವರ್ಷ ವಯಸ್ಸಿಗೆ ಕಮ್ಮಿ ಇರುವ ಇಬ್ಬರು ಮಕ್ಕಳು ಇರುವ ಕುಟುಂಬ.

**ವಿವರಣೆ 2:–** "ವಯಸ್ಕ ಆಹಾರ ವಸ್ತುಗಳ ಬಳಕೆ ಯೂನಿಟ್" ಎಂದರೆ ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನ ಆಹಾರ ವಸ್ತುಗಳ ಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಮಹಿಳೆಯ ಆಹಾರ ವಸ್ತುಗಳ ಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗೆ ಕಡಿಮೆ ವಯಸ್ಸಿನ ಬಾಲಕ/ಬಾಲಕಿಯ ಯೂನಿಟ್ಟನ್ನು ಒಂದು ವಯಸ್ಕ ಆಹಾರ ವಸ್ತುಗಳ ಬಳಕೆ ಯೂನಿಟ್ ಪ್ರಕಾರ ಅನುಕ್ರಮವಾಗಿ 8ರ ಮತ್ತು 6ರ ದರಗಳಲ್ಲಿ ಲೆಕ್ಕ ಹಾಕತಕ್ಕದ್ದು.

(5) ರಾಜ್ಯ ಸರ್ಕಾರವು,–

(ಎ) ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಕೆಲಸಗಾರನಿಗೆ ಒದಗಿಬರುವ ಅನುಕೂಲತೆಗೆ ಸಮನಾದ ನಗದನ್ನು ಲೆಕ್ಕ ಹಾಕತಕ್ಕಂಥ ರೀತಿಯನ್ನು; ಮತ್ತು

(ಬಿ) ಈ ಪ್ರಕರಣದ ಉಪಬಂಧಗಳ ಪಾಲನೆ ಆಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಖಾನೆಯಲ್ಲಿ ಇಡಬೇಕಾದ ರಿಜಿಸ್ಟರುಗಳನ್ನು

– ನಿಯಮಿಸಿ ನಿಯಮಗಳನ್ನು ರಚಿಸಬಹುದು.

**60. ಎರಡು ಕಡೆ ನಿಯೋಜನೆ ಮೇಲೆ ನಿರ್ಬಂಧ.–** ಯಾರೇ ವಯಸ್ಕ ಕೆಲಸಗಾರನನ್ನು, ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಹೊರತು, ಯಾವ ದಿವಸದಂದು ಅವನು ಈಗಾಗಲೇ ಯಾವುದೇ ಇತರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವಾಗ

ಆ ಯಾವುದೇ ದಿವಸದಂದು ಬೇರೆ ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಅನುಮತಿಸತಕ್ಕದ್ದಲ್ಲ.

**61. ವಯಸ್ಕರಿಗಾಗಿ ಕೆಲಸದ ಅವಧಿಗಳ ನೋಟೀಸು.–** (1) 108ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪ್ರತಿಯೊಂದು ಕಾರ್ಖಾನೆಯಲ್ಲಿ, ಪ್ರತಿಯೊಂದು ದಿವಸಕ್ಕಾಗಿ, ವಯಸ್ಕ ಕೆಲಸಗಾರರು ಕೆಲಸ ಮಾಡಬೇಕೆಂದು ಅಗತ್ಯಪಡಿಸಬಹುದಾದ ಅವಧಿಗಳನ್ನು ಸ್ಪಷ್ಟವಾಗಿ ತೋರಿಸುವ ವಯಸ್ಕರ ಕೆಲಸದ ಅವಧಿಗಳ ನೋಟೀಸನ್ನು ಪ್ರದರ್ಶಿಸತಕ್ಕದ್ದು ಮತ್ತು ಆ ಕೆಲಸದ ಅವಧಿಗಳನ್ನು ಸರಿಯಾಗಿ ಪಾಲನೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಮೂಲಕ ಅಗತ್ಯಪಡಿಸಿದ ನೋಟೀಸಿನಲ್ಲಿ ತೋರಿಸಿದ ಅವಧಿಗಳನ್ನು ಈ ಪ್ರಕರಣದ ಕೆಳಕಂಡ ಉಪಬಂಧಗಳಿಗೆ ಅನುಸಾರವಾಗಿ ಮುಂಚಿತವಾಗಿಯೇ ನಿಗದಿಪಡಿಸತಕ್ಕದ್ದು ಮತ್ತು ಆ ಅವಧಿಗಳಲ್ಲಿ ಕೆಲಸ ಮಾಡುವ ಕೆಲಸಗಾರರು 51, 52, 54, 55, 56 ಮತ್ತು 58ನೇ ಪ್ರಕರಣಗಳ ಉಪಬಂಧಗಳನ್ನು ಉಲ್ಲಂಘಿಸಿ ಕೆಲಸ ಮಾಡುವಂತಿಲ್ಲ.

(3) ಎಲ್ಲ ವಯಸ್ಕ ಕೆಲಸಗಾರರನ್ನು ಆ ಕಾರ್ಖಾನೆಯಲ್ಲಿ ಅದೇ ಅವಧಿಗಳಲ್ಲಿ ಕೆಲಸ ಮಾಡಲು ಅಗತ್ಯಪಡಿಸಿದ್ದರೆ, ಕಾರ್ಖಾನೆಯ ವ್ಯವಸ್ಥಾಪಕನು ಆ ಕೆಲಸಗಾರರಿಗಾಗಿ ಸಾಮಾನ್ಯವಾಗಿ ಆ ಅವಧಿಗಳನ್ನು ನಿಗದಿ ಮಾಡತಕ್ಕದ್ದು.

(4) ಕಾರ್ಖಾನೆಯಲ್ಲಿನ ಎಲ್ಲ ವಯಸ್ಕ ಕೆಲಸಗಾರರು ಅವೇ ಅವಧಿಗಳಲ್ಲಿ ಕೆಲಸ ಮಾಡಬೇಕೆಂದು ಅಗತ್ಯಪಡಿಸಿರದಿದ್ದರೆ, ಕಾರ್ಖಾನೆಯ ವ್ಯವಸ್ಥಾಪಕನು ಪ್ರತಿ ತಂಡದಲ್ಲಿನ ಕೆಲಸಗಾರರ ಸಂಖ್ಯೆಯನ್ನು ಸೂಚಿಸಿ ಅವರ ಕೆಲಸದ ಸ್ವರೂಪಕ್ಕನುಸಾರವಾಗಿ ಅವರನ್ನು ತಂಡಗಳನ್ನಾಗಿ ವರ್ಗೀಕರಿಸತಕ್ಕದ್ದು.

(5) ಪಾಳಿಗಳ ವ್ಯವಸ್ಥೆಯ ಪ್ರಕಾರ ಕೆಲಸ ಮಾಡಲು ಅಗತ್ಯಪಡಿಸಿಲ್ಲದ ಪ್ರತಿಯೊಂದು ತಂಡಕ್ಕಾಗಿ, ಕಾರ್ಖಾನೆಯ ವ್ಯವಸ್ಥಾಪಕನು ಆ ತಂಡವು ಕೆಲಸ ಮಾಡಲು ಅಗತ್ಯಪಡಿಸಬಹುದಾದಂಥ ಅವಧಿಗಳನ್ನು ನಿಗದಿಪಡಿಸತಕ್ಕದ್ದು.

(6) ಪಾಳಿಗಳ ಪದ್ಧತಿಯ ಪ್ರಕಾರ ಕೆಲಸ ಮಾಡಲು ಯಾವುದೇ ತಂಡವನ್ನು ಅಗತ್ಯಪಡಿಸಿದ್ದರೆ ಮತ್ತು ಆ ಸರದಿ ತಂಡಗಳು ಮೊದಲೇ ನಿರ್ಧರಿಸಿದ್ದ ನಿಯತಕಾಲಿಕ ಬದಲಾವಣೆಗಳಿಗೆ ಒಳಪಟ್ಟಿರದಿದ್ದರೆ, ಆ ಕಾರ್ಖಾನೆಯ ವ್ಯವಸ್ಥಾಪಕನು ಆ ತಂಡದ ಪ್ರತಿಯೊಂದು ಸರದಿ ತಂಡವು ಯಾವ ಅವಧಿಗಳಲ್ಲಿ ಕೆಲಸ ಮಾಡುವಂತೆ ಅಗತ್ಯಪಡಿಸಬಹುದಾಗಿದೆಯೋ ಆ ಅವಧಿಗಳನ್ನು ನಿಗದಿಪಡಿಸತಕ್ಕದ್ದು.

(7) ಯಾವುದೇ ತಂಡವು ಪಾಳಿಗಳ ವ್ಯವಸ್ಥೆಯ ಪ್ರಕಾರ ಕೆಲಸ ಮಾಡಬೇಕಾಗಿದ್ದರೆ ಮತ್ತು ಸರದಿ ತಂಡಗಳು ಪಾಳಿಗಳ ಬಗ್ಗೆ ಮೊದಲೇ ನಿರ್ಧರಿಸಿದ್ದ ನಿಯತಕಾಲಿಕ ಬದಲಾವಣೆಗಳಿಗೆ ಒಳಪಡಬೇಕಾಗಿದ್ದರೆ, ಆ ಕಾರ್ಖಾನೆಯ ವ್ಯವಸ್ಥಾಪಕನು, ಯಾವ ಪಾಳಿಗಳ ವ್ಯವಸ್ಥೆಯ ಪ್ರಕಾರ ಯಾವ ಅವಧಿಗಳಲ್ಲಿ ತಂಡವು ಯಾವ ಸರದಿ ಪ್ರಕಾರ ಕೆಲಸ ಮಾಡಲು ಅಗತ್ಯಪಡಿಸಬಹುದಾಗಿದೆಯೋ ಆ ಪಾಳಿಗಳ ವ್ಯವಸ್ಥೆಯನ್ನು ಮತ್ತು ಆ ದಿವಸದ ಯಾವುದೇ ವೇಳೆಯಲ್ಲಿ ಯಾವ ಕೆಲಸ ಮಾಡಬೇಕಾಗುತ್ತದೋ ಸರದಿ ಪ್ರಕಾರ ಆ ಸರದಿಯನ್ನು ರೂಪಿಸತಕ್ಕದ್ದು.

(8) ರಾಜ್ಯ ಸರ್ಕಾರವು (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದ ನೋಟೀಸಿನ ನಮೂನೆಗಳನ್ನು ಮತ್ತು ಅವುಗಳನ್ನು ನಿರ್ವಹಿಸುವ ರೀತಿಯನ್ನು ನಿಯಮಿಸಬಹುದು.

(9) ಈ ಅಧಿನಿಯಮದ ಪ್ರಾರಂಭದ ತರುವಾಯ ಕೆಲಸವನ್ನು ಪ್ರಾರಂಭಿಸುವ ಕಾರ್ಖಾನೆಯ ಸಂದರ್ಭದಲ್ಲಿ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ಒಂದು ಪ್ರತಿಯನ್ನು ಆ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭಿಸುವಂಥ ದಿವಸಕ್ಕೆ ಮುಂಚೆ ಇನ್ಸ್‌ಪೆಕ್ಟರ್‌ನಿಗೆ ದ್ವಿಪ್ರತಿಯಲ್ಲಿ ಕಳುಹಿಸತಕ್ಕದ್ದು.

(10) ಯಾವುದೇ ಕಾರ್ಖಾನೆಯ ಕೆಲಸದ ವ್ಯವಸ್ಥೆ ಕುರಿತಂತೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನಲ್ಲಿ ಅವಶ್ಯಕತೆ ಇರುವಂತಹ ಬದಲಾವಣೆಯನ್ನು ಅಗತ್ಯಪಡಿಸುವಂಥ, ಯಾವುದೇ ಉದ್ದೇಶಿತ ಬದಲಾವಣೆಯನ್ನು, ಆ ಬದಲಾವಣೆ ಮಾಡುವುದಕ್ಕೂ ಮೊದಲು ಇನ್ಸ್‌ಪೆಕ್ಟರ್‌ನಿಗೆ ದ್ವಿಪ್ರತಿಯಲ್ಲಿ ತಿಳಿಸತಕ್ಕದ್ದು ಮತ್ತು ಇನ್ಸ್‌ಪೆಕ್ಟರ್‌ನ ಪೂರ್ವ ಮಂಜೂರಾತಿ ಇಲ್ಲದೆ, ಅಂಥ ಯಾವುದೇ ಬದಲಾವಣೆಯನ್ನು, ಹಿಂದಿನ ಬದಲಾವಣೆಯನ್ನು ಮಾಡಿದಂದಿನಿಂದ ಒಂದು ವಾರ ಕಳೆಯುವವರೆಗೆ ಮಾಡತಕ್ಕದ್ದಲ್ಲ.

**62. ವಯಸ್ಕ ಕೆಲಸಗಾರರ ರಿಜಿಸ್ಟರು.–** (1) ಪ್ರತಿಯೊಂದು ಕಾರ್ಖಾನೆಯ ವ್ಯವಸ್ಥಾಪಕನು,–

(ಎ) ಆ ಕಾರ್ಖಾನೆಯಲ್ಲಿನ ಪ್ರತಿಯೊಬ್ಬ ವಯಸ್ಕ ಕೆಲಸಗಾರನ ಹೆಸರು;

(ಬಿ) ಆತನ ಕೆಲಸದ ಸ್ವರೂಪ;

(ಸಿ) ಅವನನ್ನು ಯಾವುದಾದರೂ ತಂಡದಲ್ಲಿ ಸೇರಿಸಿದ್ದರೆ ಆ ತಂಡ;

(ಡಿ) ಆತನ ತಂಡವು ಪಾಳಿಯ ಪ್ರಕಾರ ಕೆಲಸ ಮಾಡುತ್ತಿದ್ದರೆ, ಅವನನ್ನು ಯಾವ ಸರದಿಗೆ ಹಂಚಿಕೆ ಮಾಡಲಾಗಿದೆಯೋ ಆ ಸರದಿ;

(ಇ) ನಿಯಮಿಸಬಹುದಾದಂಥ ಇತರೆ ವಿವರಗಳು

– ಇವುಗಳನ್ನು ತೋರಿಸುವ ವಯಸ್ಕ ಕೆಲಸಗಾರರ ರಿಜಿಸ್ಟರನ್ನು ಕೆಲಸದ ವೇಳೆಗಳಲ್ಲಿ ಎಲ್ಲಾ ಕಾಲಗಳಲ್ಲಿ ಅಥವಾ ಆ ಕಾರ್ಖಾನೆಯಲ್ಲಿ ಯಾವುದೇ ಕೆಲಸವು ನಡೆಯುತ್ತಿರುವಾಗ ಇನ್ಸ್‌ಪೆಕ್ಟರ್‌ನಿಗೆ ಲಭ್ಯವಾಗುವಂತೆ ಇಡತಕ್ಕದ್ದು:

ಪರಂತು, ಕಾರ್ಖಾನೆಯಲ್ಲಿ ಮಾಮೂಲಾಗಿ ಇಟ್ಟಿರುವ ಯಾವುದೇ ಹಾಜರಿಪಟ್ಟಿಯು ಅಥವಾ ರಿಜಿಸ್ಟರು ಆ ಕಾರ್ಖಾನೆಯಲ್ಲಿನ ಯಾರೇ ಅಥವಾ ಎಲ್ಲ ಕೆಲಸಗಾರರಿಗೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಅಗತ್ಯಪಡಿಸಿದ ವಿವರಗಳನ್ನು ಕೊಡುವುದೆಂದು ಇನ್ಸ್‌ಪೆಕ್ಟರ್‌ನು ಅಭಿಪ್ರಾಯಪಟ್ಟರೆ, ಅಂಥ ಹಾಜರಿಪಟ್ಟಿಯನ್ನು ಅಥವಾ ರಿಜಿಸ್ಟರನ್ನು, ಆ ಕಾರ್ಖಾನೆಯಲ್ಲಿನ ವಯಸ್ಕ

ಕೆಲಸಗಾರರಿಗೆ ಅದು ಸರಿಹೊಂದುವಷ್ಟರ ಮಟ್ಟಿಗೆ ಇದ್ದರೆ ಅದನ್ನೇ ರಿಜಿಸ್ಟರ್ ಎಂದು ಪರಿಗಣಿಸತಕ್ಕದ್ದೆಂದು ಮತ್ತು ಇಡತಕ್ಕದ್ದೆಂದು ಲಿಖಿತ ಆದೇಶದ ಮೂಲಕ ಇನ್ಸ್‌ಪೆಕ್ಟರ್‌ನು ನಿರ್ದೇಶಿಸತಕ್ಕದ್ದು.

(1ಎ) ಯಾರೇ ವಯಸ್ಕ ಕೆಲಸಗಾರನನ್ನು ವಯಸ್ಕ ಕೆಲಸಗಾರರ ರಿಜಿಸ್ಟರಿನಲ್ಲಿ ಅವನ ಹೆಸರನ್ನು ಮತ್ತು ಇತರ ವಿವರಗಳನ್ನು ನಮೂದಿಸಿದ್ದ ಹೊರತು, ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಹಾಗೆ ಮಾಡಲು ಅವಕಾಶ ಕೊಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ವಯಸ್ಕ ಕೆಲಸಗಾರರ ರಿಜಿಸ್ಟರಿನ ನಮೂನೆಯನ್ನು, ಅದನ್ನು ಯಾವ ರೀತಿಯಲ್ಲಿ ನಿರ್ವಹಿಸಬೇಕೋ ಆ ರೀತಿಯನ್ನು ಮತ್ತು ಅದನ್ನು ಯಾವ ಅವಧಿಯವರೆಗೆ ಸಂರಕ್ಷಿಸಿಡತಕ್ಕದ್ದೋ ಆ ಅವಧಿಯನ್ನು ನಿಯಮಿಸಬಹುದು.

**63. ಪ್ರಕರಣ 61ರ ಮೇರೆಗಿನ ನೋಟೀಸಿನಲ್ಲಿ ಮತ್ತು 62ನೇ ಪ್ರಕರಣದ ಮೇರೆಗಿನ ರಿಜಿಸ್ಟರಿನಲ್ಲಿ ನಮೂದಾಗಿರುವಂತೆಯೇ ಕೆಲಸದ ಗಂಟೆಗಳು ಇರಬೇಕು.–** ಯಾರೇ ವಯಸ್ಕ ಕೆಲಸಗಾರನನ್ನು ಯಾವುದೇ ಕಾರ್ಖಾನೆಯಲ್ಲಿ ಪ್ರದರ್ಶಿಸಿದ, ವಯಸ್ಕರ ಕೆಲಸದ ಅವಧಿಗಳ ನೋಟೀಸಿನಲ್ಲಿ ಮತ್ತು ಆ ಕಾರ್ಖಾನೆಯ ವಯಸ್ಕ ಕೆಲಸಗಾರರ ರಿಜಿಸ್ಟರಿನಲ್ಲಿ ಅವರ ಹೆಸರಿನ ಮುಂದೆ ಮೊದಲೇ ಮಾಡಿದ ನಮೂದನೆಗಳಿಗೆ ಅನುಸಾರವಾಗಿಯಲ್ಲದೆ ಅನ್ಯಥಾ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವನಿಗೆ ಹಾಗೆ ಮಾಡಲು ಅವಕಾಶ ಕೊಡತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ.

**64. ವಿನಾಯಿತಿಗೊಳಿಸುವ ನಿಯಮಗಳನ್ನು ರಚಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು ಕಾರ್ಖಾನೆಯಲ್ಲಿ ಮೇಲ್ವಿಚಾರಣೆ ಅಥವಾ ವ್ಯವಸ್ಥಾಪನೆಯ ಸ್ಥಾನಗಳನ್ನು ಹೊಂದಿರುವ ಅಥವಾ ಕಾರ್ಖಾನೆಯಲ್ಲಿ ವಿಶ್ವಾಸ ಆಧಾರಿತ ಸ್ಥಾನದಲ್ಲಿ ನಿಯೋಜಿತರಾಗಿರುವ ವ್ಯಕ್ತಿಗಳನ್ನು ನಿರ್ಧರಿಸಿ ಮತ್ತು ಅಂಥ ನಿಯಮಗಳ ಮೂಲಕ ನಿರ್ಧರಿಸಿದ ವ್ಯಕ್ತಿಯನ್ನು ಹೊರತುಪಡಿಸಿ ಯಾರೇ ವ್ಯಕ್ತಿಯು ಕಾರ್ಖಾನೆಯಲ್ಲಿ ಮೇಲ್ವಿಚಾರಣೆ ಅಥವಾ ವ್ಯವಸ್ಥಾಪನೆಯ ಸ್ಥಾನವನ್ನು ಹೊಂದಿರುವ ಅಥವಾ ವಿಶ್ವಾಸ ಆಧಾರಿತ ಸ್ಥಾನದಲ್ಲಿ ನಿಯೋಜನೆಗೊಂಡಿರುವ ವ್ಯಕ್ತಿ ಎಂದು ಚೀಫ್ ಇನ್ಸ್‌ಪೆಕ್ಟರ್‌ನು ಅಭಿಪ್ರಾಯಪಟ್ಟರೆ, ಆ ವ್ಯಕ್ತಿಯು ಅಂಥ ಸ್ಥಾನವನ್ನು ಹೊಂದಿರುವನೆಂದು ಅಥವಾ ಹಾಗೆ ನಿಯೋಜನೆಗೊಂಡಿರುವನೆಂದು ಘೋಷಿಸಲು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಅಧಿಕಾರ ಕೊಡುವ ನಿಯಮಗಳನ್ನು ರಚಿಸಬಹುದು ಮತ್ತು 66ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮತ್ತು ಆ ಉಪಪ್ರಕರಣದ ಪರಂತುಕದ ಉಪಬಂಧಗಳನ್ನು ಹೊರತುಪಡಿಸಿ ಈ ಅಧ್ಯಾಯದ ಉಪಬಂಧಗಳು ಹಾಗೆ ನಿರ್ಧರಿಸಿದ ಅಥವಾ ಘೋಷಿಸಿದ ಯಾರೇ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ:

ಪರಂತು, ಹಾಗೆ ನಿರ್ಧರಿತನಾದ ಅಥವಾ ಘೋಷಿತನಾದ ಯಾರೇ ವ್ಯಕ್ತಿಯು, ಅಂಥ ವ್ಯಕ್ತಿಯ ಮಜೂರಿಗಳ ಸಾಮಾನ್ಯ ದರವು, ಕಾಲಕಾಲಕ್ಕೆ ತಿದ್ದುಪಡಿಯಾದ ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ 1ನೇ ಪ್ರಕರಣದ (6)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮಜೂರಿ ಮಿತಿಯನ್ನು ಮೀರದಿದ್ದರೆ, 59ನೇ ಪ್ರಕರಣದ ಮೇರೆಗಿನ ಅವಧಿಗೂ ಮೀರಿ ಮಾಡಿದ ಕೆಲಸಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮಜೂರಿಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ರಾಜ್ಯ ಸರ್ಕಾರವು ಕಾರ್ಖಾನೆಗಳಲ್ಲಿನ ವಯಸ್ಕ ಕೆಲಸಗಾರರಿಗೆ ಸಂಬಂಧಿಸಿದಂತೆ ನಿಯಮಿಸಬಹುದಾದಷ್ಟುಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೊಳಪಟ್ಟು,–

(ಎ) ತುರ್ತು ದುರಸ್ತಿಗಳಲ್ಲಿ ತೊಡಗಿಸಿರುವ ಕೆಲಸಗಾರರಿಗೆ 51, 52, 54, 55 ಮತ್ತು 56ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗದಂತೆ;

(ಬಿ) ಆ ಕಾರ್ಖಾನೆಯ ಸಾಮಾನ್ಯ ಕೆಲಸಕ್ಕಾಗಿ ವಿಧಿಸಿದ ಪರಿಮಿತಿಗಳ ಹೊರಗೆ ಅವಶ್ಯವಾಗಿ ನಡೆಸಬೇಕಾದಂಥ ಪೂರ್ವಭಾವಿ ಅಥವಾ ಪೂರಕ ಸ್ವರೂಪದ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ 51, 54, 55 ಮತ್ತು 56ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗದಂತೆ;

(ಸಿ) ಕರ್ತವ್ಯದ ಮೇಲೆ ಇರುವಾಗ ಕೆಲಸಗಾರರು ಕೆಲಸ ಮಾಡಬೇಕಾಗಿರದ ಬಿಡುವುಗಳು 55ನೇ ಪ್ರಕರಣದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಿದ ವಿಶ್ರಾಂತಿ ಬಿಡುವುಗಳಿಗಿಂತ ಸಾಮಾನ್ಯವಾಗಿ ಹೆಚ್ಚಾಗುವ, ಅವಶ್ಯವಾಗಿ ಮಧ್ಯಂತರಗಳು ಬರುವ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ 51, 54, 55 ಮತ್ತು 56ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗದಂತೆ;

(ಡಿ) ತಾಂತ್ರಿಕ ಕಾರಣಗಳಿಗಾಗಿ ನಿರಂತರವಾಗಿ ನಡೆಸಬೇಕಾದಂಥ ಯಾವುದೇ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ 51, 52, 54, 55 ಮತ್ತು 56ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

(ಇ) ಪ್ರತಿ ದಿವಸ ಮಾಡಬೇಕಾದ ಅಥವಾ ಸರಬರಾಜು ಮಾಡಬೇಕಾದ ಪ್ರಾಥಮಿಕ ಅವಶ್ಯಕತೆಯ ವಸ್ತುಗಳನ್ನು ತಯಾರಿಸುವುದರಲ್ಲಿ ಅಥವಾ ಸರಬರಾಜು ಮಾಡುವುದರಲ್ಲಿ ತೊಡಗಿರುವ ಕೆಲಸಗಾರರಿಗೆ 51ನೇ ಪ್ರಕರಣದ ಮತ್ತು 52ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

(ಎಫ್) ನಿಗದಿತ ಕಾಲಗಳಲ್ಲಿ ಹೊರತು ಇತರ ಕಾಲಗಳಲ್ಲಿ ನಡೆಸಲಾಗದಂಥ ತಯಾರಿಕಾ ಪ್ರಕ್ರಿಯೆಯಲ್ಲಿ ತೊಡಗಿರುವ ಕೆಲಸಗಾರರಿಗೆ 51ನೇ ಪ್ರಕರಣ, 52ನೇ ಪ್ರಕರಣ ಮತ್ತು 54ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

(ಜಿ) ನೈಸರ್ಗಿಕ ಶಕ್ತಿಗಳ ಅನಿಯಮಿತ ಕ್ರಿಯೆಯನ್ನು ಅವಲಂಬಿಸಿರುವ ಕಾಲಗಳಲ್ಲಿ ಹೊರತು, ಯಾವ ತಯಾರಿಕಾ ಪ್ರಕ್ರಿಯೆಯನ್ನು ನಡೆಸಲಾಗುವುದಿಲ್ಲವೋ ಆ ತಯಾರಿಕಾ ಪ್ರಕ್ರಿಯೆಯಲ್ಲಿ ತೊಡಗಿರುವ ಕೆಲಸಗಾರರಿಗೆ 52ನೇ ಪ್ರಕರಣ ಮತ್ತು 55ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

(ಹೆಚ್) ಎಂಜಿನ್ ಕೊಠಡಿಗಳಲ್ಲಿ, ಬಾಯ್ಲರ್ ಗೃಹಗಳಲ್ಲಿ ಅಥವಾ ವಿದ್ಯುತ್ ಸ್ಥಾವರ ಅಥವಾ ಪ್ರಸರಣ ಯಂತ್ರ ಸಾಮಗ್ರಿಗಳನ್ನು ನೋಡಿಕೊಳ್ಳುವುದರಲ್ಲಿ ತೊಡಗಿರುವ ಕೆಲಸಗಾರರನ್ನು 51ನೇ ಪ್ರಕರಣದ ಮತ್ತು 52ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

(ಐ) ವೃತ್ತ ಪತ್ರಿಕೆಗಳ ಮುದ್ರಣದಲ್ಲಿ ತೊಡಗಿರುವ ಆದರೆ, ಯಂತ್ರವು ಕಾರ್ಯಮಾಡದಿರುವ ಕಾರಣದಿಂದಾಗಿ ಕೆಲಸ ನಿಂತುಹೋಗಿರುವ ಕೆಲಸಗಾರರಿಗೆ 51, 54 ಮತ್ತು 56ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗದಂತೆ;

**ವಿವರಣೆ:**– ಈ ಖಂಡದಲ್ಲಿ "ವೃತ್ತ ಪತ್ರಿಕೆಗಳು" ಎಂಬ ಪದಾವಳಿಯು ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867 (1867ರ 25)ರಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ.

(ಜೆ) ರೈಲ್ವೆ ವ್ಯಾಗನ್‌ಗಳು ಅಥವಾ ಲಾರಿಗಳು ಅಥವಾ ಟ್ರಕ್ಕುಗಳಿಗೆ ಹೇರುವ ಅಥವಾ ಇಳಿಸುವುದರಲ್ಲಿ ತೊಡಗಿರುವ ಕೆಲಸಗಾರರಿಗೆ 51, 52, 54, 55 ಮತ್ತು 56ನೇ ಪ್ರಕರಣಗಳ ಉಪಬಂಧಗಳು ಅನ್ವಯವಾಗದಂತೆ;

(ಕೆ) ರಾಷ್ಟ್ರೀಯ ಮಹತ್ವದ ಕೆಲಸವೆಂದು ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದಂಥ ಯಾವುದೇ ಕೆಲಸದಲ್ಲಿ ತೊಡಗಿರುವ ಕೆಲಸಗಾರರಿಗೆ 51ನೇ ಪ್ರಕರಣ, 52ನೇ ಪ್ರಕರಣ, 54ನೇ ಪ್ರಕರಣ, 55ನೇ ಪ್ರಕರಣ ಮತ್ತು 56ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ;

– ವಿನಾಯಿತಿಗೊಳಿಸುವುದಕ್ಕಾಗಿ ಉಪಬಂಧಿಸಿ ನಿಯಮಗಳನ್ನು ರಚಿಸಬಹುದು.

(3) ಯಾವುದೇ ವಿನಾಯಿತಿಗಾಗಿ ಉಪಬಂಧ ಕಲ್ಪಿಸುವ (2)ನೇ ಉಪಪ್ರಕರಣದ ಮೇರೆಗೆ ರಚಿಸುವ ನಿಯಮಗಳಲ್ಲಿ, 61ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿ ಕೊಡುವುದು ವಿಹಿತವೆಂದು ರಾಜ್ಯ ಸರ್ಕಾರವು ಭಾವಿಸಬಹುದಾದರೆ ಅದು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಅಂಥ ತತ್ಪರಿಣಾಮದ ವಿನಾಯಿತಿಗೂ ಸಹ ಉಪಬಂಧವನ್ನು ಕಲ್ಪಿಸಬಹುದು.

(4) ಈ ಪ್ರಕರಣದ ಮೇರೆಗೆ ನಿಯಮಗಳನ್ನು ರಚಿಸುವಾಗ ರಾಜ್ಯ ಸರ್ಕಾರವು (2)ನೇ ಉಪಪ್ರಕರಣದ (ಎ) ಖಂಡದ ಮೇರೆಗಿನ ವಿನಾಯಿತಿಗೆ ಸಂಬಂಧಿಸಿದಂತೆ ಹೊರತು, ಅವಧಿ ಮೀರಿ ಮಾಡಿದ ಕೆಲಸವನ್ನು ಒಳಗೊಂಡಂತೆ ಕೆಳಕಂಡ ಮಿತಿಗಳನ್ನು ಮೀರತಕ್ಕದ್ದಲ್ಲ ಎಂದರೆ,–

(i) ಯಾವುದೇ ದಿವಸದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಹತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ;

(ii) ವಿಶ್ರಾಂತಿ ಬಿಡುವುಗಳನ್ನು ಒಳಗೊಂಡು ಆ ವಿಸ್ತೃತತೆಯು ಯಾವುದೇ ಒಂದು ಇಡೀ ದಿವಸದಲ್ಲಿ ಹನ್ನೆರಡು ಗಂಟೆಗಳನ್ನು ಮೀರತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು (2)ನೇ ಉಪಪ್ರಕರಣದ (ಡಿ) ಖಂಡದಲ್ಲಿ ಹೇಳಿರುವ ಕೆಲಸಗಾರರ ಯಾವುದೇ ಅಥವಾ ಎಲ್ಲ ಪ್ರವರ್ಗಗಳಿಗೆ ಸಂಬಂಧಿಸಿದಂತೆ, ಕೆಲಸಕ್ಕೆ ಹಾಜರಾಗಲು ತಪ್ಪಿದ ಕೆಲಸಗಾರನ ಗೈರು ಹಾಜರಿಯಲ್ಲಿ ತರುವಾಯದ ಪಾಳಿಯ ಪೂರ್ತಿ ಅಥವಾ ಅದರ ಭಾಗದಲ್ಲಿ ಕೆಲಸ ಮಾಡಲು ಪಾಳಿ ಕೆಲಸಗಾರನಿಗೆ ಅನುವು ಮಾಡಿಕೊಡುವುದಕ್ಕಾಗಿ (i)ನೇ ಖಂಡದಲ್ಲಿ ಮತ್ತು (ii)ನೇ ಖಂಡದಲ್ಲಿ ವಿಧಿಸಿದ ನಿರ್ಬಂಧಗಳು ಯಾವ ಸಂದರ್ಭಗಳಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಅವು ಅನ್ವಯವಾಗತಕ್ಕದ್ದಲ್ಲವೋ ಆ ಯಾವುದೇ ಸಂದರ್ಭಗಳು ಮತ್ತು ಷರತ್ತುಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು;

(iii) ಅವಧಿ ಮೀರಿದ ಕೆಲಸವೂ ಒಳಗೊಂಡಂತೆ ಒಂದು ವಾರದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಅರವತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ;

(iv) ಯಾವುದೇ ಒಂದು ತ್ರೈಮಾಸಿಕದಲ್ಲಿ ಅವಧಿ ಮೀರಿದ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಐವತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ.

**ವಿವರಣೆ:**– "ತ್ರೈಮಾಸಿಕ" ಎಂದರೆ 1ನೇ ಜನವರಿ, 1ನೇ ಏಪ್ರಿಲ್, 1ನೇ ಜುಲೈ ಅಥವಾ 1ನೇ ಅಕ್ಟೋಬರ್‌ನಿಂದ ಪ್ರಾರಂಭವಾಗುವ ಒಂದಾದ ಮೇಲೊಂದರಂತೆ ಬರುವ ಮೂರು ತಿಂಗಳುಗಳ ಅವಧಿ.

(5) ಈ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳು ಐದು ವರ್ಷಗಳಿಗಿಂತ ಹೆಚ್ಚಾಗಿ ಜಾರಿಯಲ್ಲಿರತಕ್ಕದ್ದಲ್ಲ.

**65. ವಿನಾಯಿತಿಗೊಳಿಸುವ ಆದೇಶಗಳನ್ನು ಮಾಡಲು ಅಧಿಕಾರ.**– (1) ನಡೆಯುತ್ತಿರುವ ಕೆಲಸದ ಸ್ವರೂಪ ಅಥವಾ ಇತರ ಸಂದರ್ಭಗಳ ಕಾರಣದಿಂದಾಗಿ ಯಾವುದೇ ಕಾರ್ಖಾನೆಯಲ್ಲಿ ಅಥವಾ ಕಾರ್ಖಾನೆಗಳ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿ ಯಾರೇ ವಯಸ್ಕ ಕೆಲಸಗಾರರ ಕೆಲಸದ ಅವಧಿಗಳನ್ನು ಮೊದಲೇ ನಿಗದಿಪಡಿಸತಕ್ಕದ್ದೆಂದು ಅಗತ್ಯಪಡಿಸುವುದು ಸೂಕ್ತವಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾಗಿದ್ದರೆ, ಅದು ಲಿಖಿತ ಆದೇಶದ ಮೂಲಕ, ಅದರಲ್ಲಿನ ಅಂಥ ಕೆಲಸಗಾರರಿಗೆ ಸಂಬಂಧಿಸಿದಂತೆ, 61ನೇ ಪ್ರಕರಣದ ಉಪಬಂಧಗಳನ್ನು ಅದು ಸೂಕ್ತವೆಂದು ಅದು ಭಾವಿಸಬಹುದಾದಷ್ಟರ ಮಟ್ಟಿಗೆ ಮತ್ತು ಅಂಥ ರೀತಿಯಲ್ಲಿ ಮತ್ತು ಕೆಲಸದ ಅವಧಿಗಳ ಮೇಲೆ ನಿಯಂತ್ರಣವನ್ನು ಸುನಿಶ್ಚಿತಗೊಳಿಸಲು ವಿಹಿತವೆಂದು ಅದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಸಡಿಲಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, ಚೀಫ್ ಇನ್ಸ್‌ಪೆಕ್ಟರ್‌ನು ಲಿಖಿತ ಆದೇಶದ ಮೂಲಕ ಅದು ಅಥವಾ ಅವನು ವಿಹಿತವೆಂದು ಭಾವಿಸಬಹುದಾದಂಥ ಷರತ್ತುಗಳ ಮೇಲೆ ಯಾವುದೇ ಕಾರ್ಖಾನೆ ಅಥವಾ ಗುಂಪು ಅಥವಾ ವರ್ಗ ಅಥವಾ ವರ್ಣನೆಯ ಕಾರ್ಖಾನೆಗಳಲ್ಲಿನ ಯಾರೇ ಅಥವಾ ಎಲ್ಲ ವಯಸ್ಕ ಕೆಲಸಗಾರರನ್ನು, ಕೆಲಸದ ವಿಶೇಷ ಒತ್ತಡದೊಡನೆ ವ್ಯವಹರಿಸಲು ಆ ಕಾರ್ಖಾನೆ ಅಥವಾ ಕಾರ್ಖಾನೆಗಳನ್ನು ಶಕ್ತಗೊಳಿಸಲು ಆ ವಿನಾಯತಿಯು ಅಗತ್ಯವಾಗಿದೆ ಎಂಬ

ಕಾರಣದ ಮೇಲೆ 51, 52, 54 ಮತ್ತು 56ನೇ ಪ್ರಕರಣಗಳ ಯಾವುದೇ ಅಥವಾ ಎಲ್ಲ ಉಪಬಂಧಗಳಿಂದ ವಿನಾಯಿತಿಗೊಳಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ನೀಡಿದ ಯಾವುದೇ ವಿನಾಯಿತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು, ಎಂದರೆ:-

(i) ಯಾವುದೇ ದಿವಸದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಹನ್ನೆರಡು ಗಂಟೆಗಳನ್ನು ಮೀರತಕ್ಕದ್ದಲ್ಲ;

(ii) ವಿಶ್ರಾಂತಿ ಬಿಡುವುಗಳನ್ನು ಒಳಗೊಂಡು, ಆ ವಿಸ್ತರಣೆಯೂ ಯಾವುದೇ ಒಂದು ಇಡೀ ದಿವಸದಲ್ಲಿ ಹದಿಮೂರು ಗಂಟೆಗಳನ್ನು ಮೀರತಕ್ಕದ್ದಲ್ಲ;

(iii) ಅವಧಿ ಮೀರಿದ ಕೆಲಸವನ್ನು ಒಳಗೊಂಡಂತೆ ಯಾವುದೇ ವಾರದಲ್ಲಿ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಅರವತ್ತು ಗಂಟೆಗಳನ್ನು ಮೀರತಕ್ಕದ್ದಲ್ಲ;

(iv) ಯಾರೇ ಕೆಲಸಗಾರನು, ಒಂದೇ ಸಮನೆ ಏಳು ದಿವಸಗಳಿಗಿಂತ ಹೆಚ್ಚಿಗೆ ಅವಧಿ ಮೀರಿದ ಕೆಲಸವನ್ನು ಮಾಡಲು ಅವಕಾಶ ಕೊಡತಕ್ಕದ್ದಲ್ಲ ಮತ್ತು ಯಾವುದೇ ತ್ರೈಮಾಸಿಕದಲ್ಲಿ ಅವಧಿ ಮೀರಿದ ಕೆಲಸದ ಗಂಟೆಗಳ ಒಟ್ಟು ಸಂಖ್ಯೆಯು ಎಪ್ಪತ್ತೈದು ಗಂಟೆಗಳನ್ನು ಮೀರತಕ್ಕದ್ದಲ್ಲ:

**ವಿವರಣೆ:-** ಈ ಉಪಪ್ರಕರಣದ (iv)ನೇ ಖಂಡದಲ್ಲಿ ಹೇಳಿರುವ ತ್ರೈಮಾಸಿಕವು 64ನೇ ಪ್ರಕರಣದ (4)ನೇ ಉಪಪ್ರಕರಣಕ್ಕಿರುವ ವಿವರಣೆಯಲ್ಲಿ ಹೇಳಿರುವ ಅರ್ಥವನ್ನೇ ಹೊಂದಿರುತ್ತದೆ.

**66. ಮಹಿಳೆಯರ ನಿಯೋಜನೆಗೆ ಮತ್ತಷ್ಟು ನಿರ್ಬಂಧಗಳು.-** (1) ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ಈ ಅಧ್ಯಾಯದ ಉಪಬಂಧಗಳನ್ನು ಅನ್ವಯಿಸುವಾಗ ಈ ಕೆಳಕಂಡ ಮತ್ತಷ್ಟು ನಿರ್ಬಂಧಗಳನ್ನು ಪೂರಕವಾಗಿ ಸೇರಿಸತಕ್ಕದ್ದು, ಅವೆಂದರೆ,-

(ಎ) ಯಾರೇ ಮಹಿಳೆಗೆ ಸಂಬಂಧಿಸಿದಂತೆ 54ನೇ ಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ಯಾವುದೇ ವಿನಾಯಿತಿಯನ್ನು ಕೊಡತಕ್ಕದ್ದಲ್ಲ;

(ಬಿ) ಯಾವುದೇ ಕಾರ್ಖಾನೆಯಲ್ಲಿ ಯಾರೇ ಮಹಿಳೆಯನ್ನು ಬೆಳಗಿನ 6 ಗಂಟೆಯಿಂದ ಮತ್ತು ರಾತ್ರಿ 7 ಗಂಟೆಯ ನಡುವೆ ಹೊರತು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಯಾವುದೇ ಕಾರ್ಖಾನೆಗೆ ಅಥವಾ ಕಾರ್ಖಾನೆಯ ಗುಂಪು ಅಥವಾ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ (ಬಿ) ಖಂಡದಲ್ಲಿ ವಿಧಿಸಿದ ಮಿತಿಗಳನ್ನು ವ್ಯತ್ಯಸ್ತಗೊಳಿಸಬಹುದು. ಆದರೆ ಹಾಗೆ ವ್ಯತ್ಯಸ್ತಗೊಳಿಸಿರುವುದು ರಾತ್ರಿ 10 ಗಂಟೆಯಿಂದ ಮತ್ತು ಬೆಳಗಿನ 5 ಗಂಟೆಗಳ ನಡುವೆ ಯಾರೇ ಮಹಿಳೆಯ ನಿಯೋಜನೆಯನ್ನು ಅಧಿಕೃತಗೊಳಿಸತಕ್ಕದ್ದಲ್ಲ.

(ಸಿ) ವಾರದ ರಜಾ ದಿನದ ಅಥವಾ ಯಾವುದೇ ಇತರ ರಜಾ ದಿನದ ತರುವಾಯ ಹೊರತು ಪಾಳಿಗಳನ್ನು ಬದಲಾಯಿಸತಕ್ಕದ್ದಲ್ಲ.

(2) ಯಾವ ಮೀನು ಸಂಸ್ಕರಣೆ ಅಥವಾ ಮೀನುಗಳನ್ನು ಡಬ್ಬಿಗೆ ತುಂಬುವ ಕಾರ್ಖಾನೆಗಳಲ್ಲಿ (1)ನೇ ಉಪಪ್ರಕರಣದಲ್ಲಿ ವಿವರಿಸಿದ ನಿರ್ಬಂಧಗಳಲ್ಲಿ ನಿರ್ದಿಷ್ಟಪಡಿಸಿದ ಗಂಟೆಗಳನ್ನು ಮೀರಿ ಮಹಿಳೆಯರ ನಿಯೋಜನೆಯು ಯಾವುದೇ ಕಚ್ಚಾ ಸಾಮಗ್ರಿಗೆ ಹಾನಿಯನ್ನು ಅಥವಾ ಅದರ ದುಸ್ಥಿತಿಯನ್ನು ತಡೆಗಟ್ಟಲು ಅವಶ್ಯವಿರುವುದೋ ಆ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ರಾಜ್ಯ ಸರ್ಕಾರವು ಅದು ನಿಯಮಿಸಬಹುದಾದಷ್ಟರಮಟ್ಟಿಗೆ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ನಿರ್ಬಂಧಗಳಿಂದ ವಿನಾಯಿತಿಗಾಗಿ ಉಪಬಂಧಿಸುವ ನಿಯಮಗಳನ್ನು ರಚಿಸಬಹುದು.

(3) ಉಪಪ್ರಕರಣ (2)ರ ಮೇರೆಗೆ ರಚಿಸಿದ ನಿಯಮಗಳು ಒಂದು ಸಲಕ್ಕೆ ಮೂರು ವರ್ಷಗಳನ್ನು ಮೀರದ ಅವಧಿಗೆ ಜಾರಿಯಲ್ಲಿರತಕ್ಕದ್ದು.

## ಅಧ್ಯಾಯ - VII

## ಕಿರಿಯ ವಯಸ್ಸಿನ ವ್ಯಕ್ತಿಗಳ ನಿಯೋಜನೆ

**67. ಚಿಕ್ಕ ಮಕ್ಕಳ ನಿಯೋಜನೆಗೆ ನಿಷೇಧ.-** ಹದಿನಾಲ್ಕು ವರ್ಷ ತುಂಬಿರದ ಯಾವುದೇ ಬಾಲಕ/ಬಾಲಕಿಯನ್ನು ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ.

**68. ವಯಸ್ಕರಲ್ಲದ ಕೆಲಸಗಾರರು ಗುರುತು ಬಿಲ್ಲೆಯನ್ನು ಧರಿಸತಕ್ಕದ್ದು.-** ಹದಿನಾಲ್ಕು ವರ್ಷ ತುಂಬಿದ ಬಾಲಕ/ಬಾಲಕಿಯನ್ನು ಅಥವಾ ತರುಣ/ತರುಣಿಯನ್ನು,-

(ಎ) 69ನೇ ಪ್ರಕರಣದ ಮೇರೆಗೆ ಅವನಿಗೆ ಸಂಬಂದಪಟ್ಟಂತೆ ಕೊಟ್ಟಿರುವ ಯೋಗ್ಯತಾ ಪ್ರಮಾಣಪತ್ರವು ಆ ಕಾರ್ಖಾನೆಯ ವ್ಯವಸ್ಥಾಪಕನ ಸುಪರ್ದಿನಲ್ಲಿದ್ದ ಹೊರತು; ಮತ್ತು

(ಬಿ) ಅಂಥ ಬಾಲಕ/ಬಾಲಕಿಯು ಅಥವಾ ತರುಣ/ತರುಣಿಯು ಅಂಥ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ಕೊಟ್ಟಿರುವ ಗುರುತಿನ ಬಿಲ್ಲೆಯನ್ನು ಅವನು ಕೆಲಸ ಮಾಡುತ್ತಿರುವಾಗ ಧರಿಸಿದ್ದ ಹೊರತು

- ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ.

**69. ಯೋಗ್ಯತಾ ಪ್ರಮಾಣಪತ್ರ**.- (1) ಯಾರೇ ಕಿರಿಯ ವಯಸ್ಸಿನ ವ್ಯಕ್ತಿಯು ಕಾರ್ಖಾನೆಯಲ್ಲಿ ಕೆಲಸ ಮಾಡಲು ಯೋಗ್ಯನಾಗಿದ್ದಾನೆಂದು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಪ್ರಮಾಣೀಕರಿಸಿದರೆ ಅಂಥ ವ್ಯಕ್ತಿಯನ್ನು ಕಾರ್ಖಾನೆಯಲ್ಲಿ ನಿಯೋಜಿಸಿಕೊಳ್ಳಲಾಗುವುದೆಂದು ಆ ಕಾರ್ಖಾನೆಯ ವ್ಯವಸ್ಥಾಪಕನು ರುಜು ಮಾಡಿದ ದಸ್ತಾವೇಜಿನ ಸಹಿತ ಯಾರೇ ಕಿರಿಯ ವಯಸ್ಸಿನ ವ್ಯಕ್ತಿಯು ಅಥವಾ ಅವನ ತಂದೆ-ತಾಯಿಯು ಅಥವಾ ಪಾಲಕನು ಅರ್ಜಿ ಸಲ್ಲಿಸಿದಾಗ, ಅಥವಾ ಯಾರೇ ಕಿರಿಯ ವಯಸ್ಸಿನ ವ್ಯಕ್ತಿಯು ಯಾವ ಕಾರ್ಖಾನೆಯಲ್ಲಿ ಕೆಲಸ ಮಾಡಲು ಇಚ್ಛಿಸುತ್ತಾನೋ ಆ ಕಾರ್ಖಾನೆಯ ವ್ಯವಸ್ಥಾಪಕನು ಅರ್ಜಿ ಸಲ್ಲಿಸಿದಾಗ ಅಂಥ ವ್ಯಕ್ತಿಯನ್ನು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಪರೀಕ್ಷಿಸತಕ್ಕದ್ದು ಮತ್ತು ಕಾರ್ಖಾನೆಯಲ್ಲಿ ಕೆಲಸ ಮಾಡಲು ಅವನಿಗಿರುವ ಯೋಗ್ಯತೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(2) ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಪರೀಕ್ಷಿಸಿದ ತರುವಾಯ ನಿಯಮಿಸಿದ ನಮೂನೆಯಲ್ಲಿ ಅಂಥ ಕಿರಿಯ ವಯಸ್ಸಿನ ವ್ಯಕ್ತಿಗೆ,-

(ಎ) ಆ ಕಿರಿಯ ವಯಸ್ಸಿನ ವ್ಯಕ್ತಿಯು ಹದಿನಾಲ್ಕು ವರ್ಷಗಳನ್ನು ಪೂರ್ಣಗೊಳಿಸಿದ್ದಾನೆಂದು, ಅವನು ನಿಯಮಿಸಿದ ದೈಹಿಕ ಗುಣಮಟ್ಟಗಳನ್ನು ಹೊಂದಿದ್ದಾನೆಂದು ಮತ್ತು ಅಂಥ ಕೆಲಸಕ್ಕೆ ಅವನು ಯೋಗ್ಯನಾಗಿದ್ದಾನೆಂದು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನಿಗೆ ಮನದಟ್ಟಾದರೆ, ಆ ಬಾಲಕನು/ಬಾಲಕಿಯು ಕಾರ್ಖಾನೆಯಲ್ಲಿ ಕೆಲಸ ಮಾಡಲು ಯೋಗ್ಯತಾ ಪ್ರಮಾಣಪತ್ರವನ್ನು;

(ಬಿ) ಆ ಕಿರಿಯ ವಯಸ್ಸಿನ ವ್ಯಕ್ತಿಯು ಹದಿನೈದು ವರ್ಷಗಳನ್ನು ಪೂರ್ಣಗೊಳಿಸಿದ್ದಾನೆಂದು, ಮತ್ತು ಕಾರ್ಖಾನೆಯಲ್ಲಿ ಪೂರ್ತಿ ದಿನ ಕೆಲಸ ಮಾಡಲು ಯೋಗ್ಯನಾಗಿದ್ದಾನೆಂದು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನಿಗೆ ಮನದಟ್ಟಾದರೆ, ಆ ತರುಣ/ತರುಣಿಯು ಕಾರ್ಖಾನೆಯಲ್ಲಿ ಕೆಲಸ ಮಾಡಲು ಯೋಗ್ಯತಾ ಪ್ರಮಾಣಪತ್ರವನ್ನು

- ಕೊಡಬಹುದು ಅಥವಾ ಅದನ್ನು ನವೀಕರಿಸಬಹುದು:

ಪರಂತು, ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು, ಆ ಕಿರಿಯ ವಯಸ್ಸಿನ ವ್ಯಕ್ತಿಯು ಯಾವ ಸ್ಥಳದಲ್ಲಿ ಕೆಲಸ ಮಾಡಲು ಉದ್ದೇಶಿಸಿದ್ದಾನೋ ಆ ಸ್ಥಳದ ಬಗ್ಗೆ ಮತ್ತು ಆತನು ನಿಯೋಜನೆಗೊಳ್ಳಬಹುದಾದಂಥ ತಯಾರಿಕಾ ಪ್ರಕ್ರಿಯೆಯ ಬಗ್ಗೆ ಸ್ವತಃ ತಿಳುವಳಿಕೆಯನ್ನು ಹೊಂದಿದ್ದ ಹೊರತು, ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಅಂಥ ಸ್ಥಳವನ್ನು ಪರೀಕ್ಷಿಸುವವರೆಗೆ ಈ ಉಪಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಕೊಡತಕ್ಕದ್ದಲ್ಲ ಅಥವಾ ನವೀಕರಿಸತಕ್ಕದ್ದಲ್ಲ.

(3) ಉಪಪ್ರಕರಣ (2)ರ ಮೇರೆಗೆ ಕೊಟ್ಟ ಅಥವಾ ನವೀಕರಿಸಿದ ಯೋಗ್ಯತಾ ಪ್ರಮಾಣಪತ್ರವು,-

(ಎ) ಅದರ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಮಾತ್ರ ಸಿಂಧುವಾಗಿರತಕ್ಕದ್ದು;

(ಬಿ) ಕಿರಿಯ ವಯಸ್ಸಿನ ವ್ಯಕ್ತಿಯನ್ನು, ಯಾವ ಸ್ವರೂಪದ ಕೆಲಸಕ್ಕೆ ಸಂಬಂಧಿಸಿದಂತೆ ನಿಯೋಜಿಸಿಕೊಳ್ಳಬಹುದೋ ಆ ಕೆಲಸದ ಸ್ವರೂಪಕ್ಕೆ ಸಂಬಂಧಿಸಿದಂತೆ ಇರುವ ಷರತ್ತುಗಳಿಗೆ ಅಥವಾ ಹನ್ನೆರಡು ತಿಂಗಳುಗಳ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಕಿರಿಯ ವಯಸ್ಸಿನ ವ್ಯಕ್ತಿಯನ್ನು ಪುನಃ ಪರೀಕ್ಷಿಸಲು ಅಗತ್ಯಪಡಿಸುವುದಕ್ಕೆ ಒಳಪಟ್ಟು ಆ ಪ್ರಮಾಣ ಪತ್ರವನ್ನು ಕೊಡಬಹುದು.

(4) ಪ್ರಮಾಣೀಕರಿಸಿರುವ ಶಸ್ತ್ರಚಿಕಿತ್ಸಕನು, (2)ನೇ ಉಪಪ್ರಕರಣದ ಮೇರೆಗೆ ಕೊಟ್ಟಿರುವ ಅಥವಾ ನವೀಕರಿಸಿರುವ ಯಾವುದೇ ಪ್ರಮಾಣಪತ್ರವನ್ನು, ಅದನ್ನು ಧಾರಣ ಮಾಡಿರುವವನು ಅದರಲ್ಲಿ ಹೇಳಿರುವ ಸಾಮರ್ಥ್ಯದಲ್ಲಿ ಕಾರ್ಖಾನೆಯಲ್ಲಿ ಕೆಲಸ ಮಾಡಲು ಇನ್ನು ಮುಂದೆ ಯೋಗ್ಯನಾಗಿಲ್ಲವೆಂದು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಅಭಿಪ್ರಾಯಪಟ್ಟರೆ ಅದನ್ನು ರದ್ದುಪಡಿಸತಕ್ಕದ್ದು.

(5) ಪ್ರಮಾಣೀಕರಿಸಿರುವ ಶಸ್ತ್ರಚಿಕಿತ್ಸಕನ ಪ್ರಮಾಣಪತ್ರವನ್ನು ಅಥವಾ ಕೋರಿದ ಬಗೆಯ ಪ್ರಮಾಣಪತ್ರವನ್ನು ಕೊಡಲು ಅಥವಾ ನವೀಕರಿಸಲು ನಿರಾಕರಿಸಿದ್ದರೆ ಅಥವಾ ಪ್ರಮಾಣಪತ್ರವನ್ನು ರದ್ದುಪಡಿಸಿದ್ದರೆ ಪ್ರಮಾಣಪತ್ರಕ್ಕಾಗಿ ಅಥವಾ ಅದರ ನವೀಕರಣಕ್ಕಾಗಿ ಯಾವ ವ್ಯಕ್ತಿಯು ಅರ್ಜಿ ಸಲ್ಲಿಸಿದ್ದನೋ ಆ ಯಾರೇ ವ್ಯಕ್ತಿಯು ಕಾರಣಗಳನ್ನು ಕೋರಿದಾಗ ಶಸ್ತ್ರಚಿಕಿತ್ಸಕನು ತಾನು ಹಾಗೆ ಮಾಡಿದ್ದಕ್ಕೆ ಕಾರಣಗಳನ್ನು ಲಿಖಿತದಲ್ಲಿ ಕೊಡತಕ್ಕದ್ದು.

(6) ಯಾರೇ ಕಿರಿಯ ವಯಸ್ಸಿನ ವ್ಯಕ್ತಿಗೆ ಸಂಬಂಧಿಸಿದಂತೆ ಈ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು (3)ನೇ ಉಪಪ್ರಕರಣದ (ಬಿ) ಖಂಡದಲ್ಲಿ ಹೇಳಿರುವ ಷರತ್ತುಗಳಿಗೊಳಪಟ್ಟು ಕೊಟ್ಟಿದ್ದರೆ ಅಥವಾ ನವೀಕರಿಸಿದ್ದರೆ, ಆ ಕಿರಿಯ ವಯಸ್ಸಿನ ವ್ಯಕ್ತಿಯನ್ನು ಆ ಷರತ್ತುಗಳಿಗನುಸಾರವಾಗಿ ಹೊರತು ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ.

(7) ಈ ಪ್ರಕರಣದ ಮೇರೆಗಿನ ಪ್ರಮಾಣಪತ್ರಕ್ಕಾಗಿ ಸಂದಾಯ ಮಾಡಬೇಕಾದ ಯಾವುದೇ ಫೀಜನ್ನು ಅಧಿಭೋಗದಾರನು ಸಂದಾಯ ಮಾಡತಕ್ಕದ್ದು ಮತ್ತು ಆ ಕಿರಿಯ ವಯಸ್ಸಿನ ವ್ಯಕ್ತಿಯಿಂದ ಅವನ ತಂದೆ-ತಾಯಿಯಿಂದ ಅಥವಾ ಪಾಲಕನಿಂದ ಅದನ್ನು ವಸೂಲಿ ಮಾಡತಕ್ಕದ್ದಲ್ಲ.

**70. ತರುಣ/ತರುಣಿಗೆ ಕೊಟ್ಟ ಯೋಗ್ಯತಾ ಪ್ರಮಾಣಪತ್ರದ ಪರಿಣಾಮ**.- (1) ಯಾವ ತರುಣ/ತರುಣಿಗೆ 69ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕಾರ್ಖಾನೆಯಲ್ಲಿ ವಯಸ್ಕನಂತೆ ಕೆಲಸ ಮಾಡಲು ಯೋಗ್ಯತಾ ಪ್ರಮಾಣಪತ್ರವನ್ನು ಕೊಡಲಾಗಿದೆಯೋ ಮತ್ತು ಯಾವ ತರುಣ/ತರುಣಿಯು ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಪ್ರಮಾಣಪತ್ರಕ್ಕೆ ಉಲ್ಲೇಖಿಸುವ ಗುರುತಿನ ಬಿಲ್ಲೆಯನ್ನು ಧರಿಸಿರುವನೋ ಆ ತರುಣನನ್ನು, VIನೇ ಮತ್ತು VIIIನೇ ಅಧ್ಯಾಯಗಳ ಎಲ್ಲ ಉದ್ದೇಶಗಳಿಗಾಗಿ ವಯಸ್ಕನೆಂದು ಭಾವಿಸತಕ್ಕದ್ದು.

(1ಎ) ಹದಿನೇಳು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸದ ಆದರೆ ಕಾರ್ಖಾನೆಯಲ್ಲಿ ವಯಸ್ಕನಂತೆ ಕೆಲಸ ಮಾಡಲು ಯೋಗ್ಯತಾ ಪ್ರಮಾಣಪತ್ರವನ್ನು ಪಡೆದಿರುವ ಯಾರೇ ತರುಣಿಯನ್ನು ಅಥವಾ ತರುಣ/ತರುಣಿಯನ್ನು ಬೆಳಿಗ್ಗೆ 6 ರಿಂದ ಸಂಜೆ 7 ಗಂಟೆಯ ನಡುವೆ ಹೊರತು ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ:

ಪರಂತು, ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಕಾರ್ಖಾನೆಯ ಅಥವಾ ಕಾರ್ಖಾನೆಯ ಸಮೂಹದ ಅಥವಾ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳ ಸಂಬಂಧದಲ್ಲಿ,-

(i) ಈ ಉಪಪ್ರಕರಣದಲ್ಲಿ ವಿಧಿಸಿದ ಮಿತಿಗಳನ್ನು ವ್ಯತ್ಯಸ್ತಗೊಳಿಸಬಹುದು. ಆದರೆ ಅಂಥ ರಾತ್ರಿ 10 ರಿಂದ ಬೆಳಿಗ್ಗೆ 5 ಗಂಟೆಯ ನಡುವೆ ಯಾರೇ ತರುಣಿಯ ನಿಯೋಜನೆಯನ್ನು ಅಧಿಕೃತಗೊಳಿಸತಕ್ಕದ್ದಲ್ಲ;

(ii) ರಾಷ್ಟ್ರೀಯ ಹಿತದೃಷ್ಟಿಯನ್ನು ಒಳಗೊಂಡಿರುವ ತೀವ್ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಈ ಉಪಪ್ರಕರಣದ ಉಪಬಂಧಗಳು ಅನ್ವಯವಾಗದಂತೆ ವಿನಾಯಿತಿ ನೀಡಬಹುದು.

(2) ಹಿಂದೆ ಹೇಳಿದ (ಬಿ) ಖಂಡದ ಮೇರೆಗೆ ಕಾರ್ಖಾನೆಯಲ್ಲಿ ವಯಸ್ಕನಂತೆ ಕೆಲಸ ಮಾಡಲು ಯಾವ ತರುಣ/ತರುಣಿಗೆ ಯೋಗ್ಯತಾ ಪ್ರಮಾಣಪತ್ರವನ್ನು ಕೊಟ್ಟಿಲ್ಲವೋ, ಆ ತರುಣ/ತರುಣಿಯ ವಯಸ್ಸು ಎಷ್ಟೇ ಇದ್ದರೂ ಈ ಅಧಿನಿಯಮದ ಎಲ್ಲ ಉದ್ದೇಶಗಳಿಗಾಗಿ ಆ ತರುಣ/ತರುಣಿಯನ್ನು ಬಾಲಕ/ಬಾಲಕಿ ಎಂದು ಭಾವಿಸತಕ್ಕದ್ದು.

**71. ಮಕ್ಕಳಿಗಾಗಿ ಕೆಲಸದ ವೇಳೆಗಳು.-** (1) ಯಾರೇ ಬಾಲಕ/ಬಾಲಕಿಯನ್ನು ಯಾವುದೇ ಕಾರ್ಖಾನೆಯಲ್ಲಿ,-

(ಎ) ಯಾವುದೇ ದಿವಸದಲ್ಲಿ ನಾಲ್ಕೂವರೆ ಗಂಟೆಗಳಿಗಿಂತ ಹೆಚ್ಚಿಗೆ;

(ಬಿ) ರಾತ್ರಿ ವೇಳೆಯಲ್ಲಿ

- ಕೆಲಸಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಅವಕಾಶ ಕೊಡತಕ್ಕದ್ದಲ್ಲ.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಕ್ಕಾಗಿ "ರಾತ್ರಿ" ಎಂದರೆ ನಿರಂತರ ಕನಿಷ್ಠ ಹನ್ನೆರಡು ಗಂಟೆಗಳ ಅವಧಿ, ಅದರಲ್ಲಿ ರಾತ್ರಿ 10 ಗಂಟೆಯಿಂದ ಬೆಳಗಿನ 6 ಗಂಟೆಯ ನಡುವಿನ ಮಧ್ಯಂತರವನ್ನು ಒಳಗೊಂಡಿರತಕ್ಕದ್ದು.

(2) ಕಾರ್ಖಾನೆಯಲ್ಲಿ ನಿಯೋಜಿತರಾದ ಎಲ್ಲ ಮಕ್ಕಳ ಕೆಲಸದ ಅವಧಿಯು, ಎರಡು ಪಾಳಿಗಳಿಗೆ ಸೀಮಿತವಾಗಿರತಕ್ಕದ್ದು, ಅದು ಪ್ರತಿ ಐದು ಗಂಟೆಗಳನ್ನು ಮೀರಿ ಪರಸ್ಪರ ವ್ಯಾಪ್ತವಾಗತಕ್ಕದ್ದಲ್ಲ ಅಥವಾ ಅದನ್ನು ಮೀರಿ ವಿಸ್ತರಿಸತಕ್ಕದ್ದಲ್ಲ ಮತ್ತು ಪ್ರತಿಯೊಬ್ಬ ಬಾಲಕ/ಬಾಲಕಿಯನ್ನು ಸರದಿ ತಂಡಗಳ ಪೈಕಿ ಒಂದರಲ್ಲಿ ಮಾತ್ರ ನಿಯೋಜಿಸತಕ್ಕದ್ದು, ಅದನ್ನು ಚೀಫ್ ಇನ್ಸ್‌ಪೆಕ್ಟರ್‌ನ ಲಿಖಿತ ಪೂರ್ವ ಅನುಮತಿಯನ್ನು ಪಡೆದ ಹೊರತು, ಮೂವತ್ತು ದಿವಸಗಳ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಮೇಲಿಂದ ಮೇಲೆ ಬದಲಾಯಿಸತಕ್ಕದ್ದಲ್ಲ.

(3) ಪ್ರಕರಣ 52ರ ಉಪಬಂಧಗಳು ಬಾಲ ಕಾರ್ಮಿಕರಿಗೂ ಸಹ ಅನ್ವಯವಾಗತಕ್ಕದ್ದು ಮತ್ತು ಯಾವುದೇ ಬಾಲಕನಿಗೆ/ಬಾಲಕಿಗೆ ಸಂಬಂಧಿಸಿದಂತೆ ಆ ಪ್ರಕರಣದ ಉಪಬಂಧಗಳಿಂದ ಯಾವುದೇ ವಿನಾಯಿತಿಯನ್ನು ಕೊಡತಕ್ಕದ್ದಲ್ಲ.

(4) ಯಾರೇ ಬಾಲಕ/ಬಾಲಕಿಯನ್ನು ಈಗಾಗಲೇ ಅದು ಮತ್ತೊಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವಂಥ ಯಾವುದೇ ದಿವಸದಂದು, ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅದಕ್ಕೆ ಅವಕಾಶ ನೀಡತಕ್ಕದ್ದಲ್ಲ.

(5) ಯಾರೇ ಹೆಣ್ಣು ಮಗುವನ್ನು ಯಾವುದೇ ಕಾರ್ಖಾನೆಯಲ್ಲಿ ಬೆಳಿಗ್ಗೆ 8 ರಿಂದ ಸಂಜೆ 7 ಗಂಟೆಯವರೆಗೆ ಹೊರತು ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ನೀಡತಕ್ಕದ್ದಲ್ಲ.

**72. ಮಕ್ಕಳಿಗಾಗಿ ಕೆಲಸದ ಅವಧಿಗಳ ನೋಟೀಸು.-** (1) ಮಕ್ಕಳು ನಿಯೋಜಿತರಾಗಿರುವ ಪ್ರತಿಯೊಂದು ಕಾರ್ಖಾನೆಯಲ್ಲಿ 108ನೇ ಪ್ರಕರಣದ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಮಕ್ಕಳನ್ನು ಯಾವ ಅವಧಿಗಳಲ್ಲಿ ಕೆಲಸ ಮಾಡಲು ಅಗತ್ಯಪಡಿಸಬಹುದೋ ಅಥವಾ ಅವಕಾಶ ನೀಡಬಹುದೋ ಆ ಅವಧಿಗಳ ಪ್ರತಿಯೊಂದು ದಿವಸಕ್ಕಾಗಿ ಸ್ಪಷ್ಟವಾಗಿ ತೋರಿಸುವ ಮಕ್ಕಳಿಗಾಗಿ ಇರುವ ಕೆಲಸದ ಅವಧಿಗಳ ನೋಟೀಸನ್ನು ಪ್ರದರ್ಶಿಸತಕ್ಕದ್ದು ಮತ್ತು ಅದನ್ನು ಸರಿಯಾಗಿ ನಿರ್ವಹಿಸಿಕೊಂಡು ಬರತಕ್ಕದ್ದು.

(2) ಉಪಪ್ರಕರಣ (1)ರ ಮೂಲಕ ಅಗತ್ಯಪಡಿಸಿದ ನೋಟೀಸಿನಲ್ಲಿ ತೋರಿಸಿದ ಅವಧಿಗಳನ್ನು, 61ನೇ ಪ್ರಕರಣದಲ್ಲಿ ವಯಸ್ಕ ಕೆಲಸಗಾರರಿಗಾಗಿ ವಿಧಿಸಿರುವ ವಿಧಾನಗಳಿಗನುಸಾರವಾಗಿ ಮೊದಲೇ ನಿಗದಿಪಡಿಸತಕ್ಕದ್ದು ಮತ್ತು ಆ ಅವಧಿಗಳಿಗಾಗಿ ಕೆಲಸ ಮಾಡುವ ಮಕ್ಕಳು 71ನೇ ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿ ಕೆಲಸ ಮಾಡದ ಹಾಗೆ ನಿಗದಿಪಡಿಸತಕ್ಕದ್ದು.

(3) 61ರ ಪ್ರಕರಣದ (8), (9) ಮತ್ತು (10)ನೇ ಉಪಪ್ರಕರಣಗಳ ಉಪಬಂಧಗಳು ಈ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದ ನೋಟೀಸಿಗೂ ಸಹ ಅನ್ವಯವಾಗತಕ್ಕದ್ದು.

**73. ಬಾಲ ಕಾರ್ಮಿಕರ ರಿಜಿಸ್ಟರು.-** (1) ಮಕ್ಕಳು ನಿಯೋಜಿತರಾಗಿರುವಂಥ ಪ್ರತಿಯೊಂದು ಕಾರ್ಖಾನೆಯ ವ್ಯವಸ್ಥಾಪಕನು,-

(ಎ) ಕಾರ್ಖಾನೆಯಲ್ಲಿನ ಪ್ರತಿಯೊಬ್ಬ ಬಾಲ ಕಾರ್ಮಿಕನ ಹೆಸರು;

(ಬಿ) ಆತನ ಕೆಲಸದ ಸ್ವರೂಪ;

(ಸಿ) ಅವನನ್ನು ಯಾವುದಾದರೂ ಸಮೂಹಕ್ಕೆ ಸೇರಿಸಿದ್ದರೆ ಆ ಸಮೂಹ;

(ಡಿ) ಅವನ ಸಮೂಹವು ಪಾಳಿಯ ಮೇಲೆ ಕೆಲಸ ಮಾಡುತ್ತಿದ್ದರೆ, ಅವನನ್ನು ಯಾವ ಸರದಿ ತಂಡಕ್ಕೆ ಹಂಚಿಕೆ ಮಾಡಲಾಗಿದೆಯೋ ಆ ಸರದಿ ತಂಡ; ಮತ್ತು

(ಇ) 69ನೇ ಪ್ರಕರಣದ ಮೇರೆಗೆ ಕೊಟ್ಟ ಅವನ ಯೋಗ್ಯತಾ ಪ್ರಮಾಣಪತ್ರದ ಸಂಖ್ಯೆ

– ಇವುಗಳನ್ನು ತೋರಿಸುವ ಒಂದು ರಿಜಿಸ್ಟರನ್ನು ಇಡತಕ್ಕದ್ದು, ಅದು ಕೆಲಸದ ವೇಳೆಗಳಲ್ಲಿ ಎಲ್ಲ ಸಮಯಗಳಲ್ಲಿ ಅಥವಾ ಕಾರ್ಖಾನೆಗಳಲ್ಲಿ ಯಾವುದೇ ಕೆಲಸವನ್ನು ನಡೆಸುತ್ತಿರುವಾಗ ಇನ್ಸ್‌ಪೆಕ್ಟರ್‌ನಿಗೆ ಲಭ್ಯವಾಗತಕ್ಕದ್ದು.

(1ಎ) ಯಾರೇ ಬಾಲ ಕಾರ್ಮಿಕನನ್ನು ಅವನ ಹೆಸರು ಮತ್ತು ಇತರ ವಿವರಗಳನ್ನು ಬಾಲ ಕಾರ್ಮಿಕರ ರಿಜಿಸ್ಟರಿನಲ್ಲಿ ನಮೂದಿಸಲಾಗಿದ್ದ ಹೊರತು ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ಅವಕಾಶ ನೀಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು, ಬಾಲ ಕಾರ್ಮಿಕರ ರಿಜಿಸ್ಟರಿನ ನಮೂನೆ, ಅದನ್ನು ಇಡಬೇಕಾದ ರೀತಿ ಮತ್ತು ಅದನ್ನು ಯಾವ ಅವಧಿಯವರೆಗೆ ಪರಿರಕ್ಷಿಸಿಕೊಡಬೇಕೋ ಆ ಅವಧಿಯನ್ನು ನಿಯಮಿಸಬಹುದು.

**74. ಕೆಲಸದ ಗಂಟೆಗಳು 72ನೇ ಪ್ರಕರಣದ ಮೇರೆಗಿನ ನೋಟೀಸಿನೊಂದಿಗೆ ಮತ್ತು 73ನೇ ಪ್ರಕರಣದ ಮೇರೆಗಿನ ರಿಜಿಸ್ಟರಿನೊಂದಿಗೆ ಸಂವಾದಿಯಾಗಿರತಕ್ಕದ್ದು.–** ಕಾರ್ಖಾನೆಯಲ್ಲಿ ಮಕ್ಕಳಿಗಾಗಿ ಪ್ರದರ್ಶಿಸಿದ ಕೆಲಸದ ಅವಧಿಗಳ ನೋಟೀಸಿಗೆ ಮತ್ತು ಕಾರ್ಖಾನೆಯ ಬಾಲ ಕಾರ್ಮಿಕರ ರಿಜಿಸ್ಟರಿನಲ್ಲಿ ಅವನ ಹೆಸರಿನ ಮುಂದೆ ಮೊದಲೇ ಮಾಡಿದ ನಮೂದನೆಗಳಿಗೆ ಅನುಸಾರವಾಗಿ ಹೊರತು ಅನ್ಯಥಾ ಯಾವುದೇ ಕಾರ್ಖಾನೆಯಲ್ಲಿ ಯಾರೇ ಬಾಲಕ/ಬಾಲಕಿಯನ್ನು ನಿಯೋಜಿಸಿಕೊಳ್ಳತಕ್ಕದ್ದಲ್ಲ.

**75. ವೈದ್ಯಕೀಯ ಪರೀಕ್ಷೆಯನ್ನು ಅಗತ್ಯಪಡಿಸಲು ಅಧಿಕಾರ.–** ಇನ್ಸ್‌ಪೆಕ್ಟರ್‌ನು,–

(ಎ) ಯೋಗ್ಯತಾ ಪ್ರಮಾಣಪತ್ರವಿಲ್ಲದೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿಯು, ಕಿರಿಯ ವಯಸ್ಸಿನ ವ್ಯಕ್ತಿಯೆಂದು; ಅಥವಾ

(ಬಿ) ಯೋಗ್ಯತಾ ಪ್ರಮಾಣಪತ್ರದೊಡನೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಕಿರಿಯ ವಯಸ್ಸಿನ ವ್ಯಕ್ತಿಯು, ಅದರಲ್ಲಿ ನಿರೂಪಿಸಿದ ಸಾಮರ್ಥ್ಯದಲ್ಲಿ ಕೆಲಸ ಮಾಡಲು ಇನ್ನು ಮುಂದೆ ಅರ್ಹನಾಗಿಲ್ಲವೆಂದು

– ಅವನು ಅಭಿಪ್ರಾಯಪಟ್ಟರೆ, ಸಂದರ್ಭಾನುಸಾರ ಅಂಥ ವ್ಯಕ್ತಿಯನ್ನು ಅಥವಾ ಕಿರಿಯ ವಯಸ್ಸಿನ ವ್ಯಕ್ತಿಯನ್ನು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನಿಂದ ಪರೀಕ್ಷೆ ಮಾಡಿಸತಕ್ಕದ್ದೆಂದು ಅಗತ್ಯಪಡಿಸಿ ಕಾರ್ಖಾನೆಯ ವ್ಯವಸ್ಥಾಪಕನಿಗೆ ನೋಟೀಸನ್ನು ಜಾರಿ ಮಾಡಬಹುದು ಮತ್ತು ಅಂಥ ವ್ಯಕ್ತಿಯನ್ನು ಅಥವಾ ಕಿರಿಯ ವಯಸ್ಸಿನ ವ್ಯಕ್ತಿಯನ್ನು, ಪರೀಕ್ಷಿಸುವವರೆಗೆ ಮತ್ತು 69ನೇ ಪ್ರಕರಣದ ಮೇರೆಗೆ ಸಂದರ್ಭಾನುಸಾರ ಯೋಗ್ಯತಾ ಪ್ರಮಾಣಪತ್ರವನ್ನು ಅಥವಾ ಹೊಸ ಯೋಗ್ಯತಾ ಪ್ರಮಾಣಪತ್ರವನ್ನು ಕೊಡುವವರೆಗೆ ಅಥವಾ ಆ ವ್ಯಕ್ತಿಯನ್ನು ಪರೀಕ್ಷಿಸುವ, ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಆ ವ್ಯಕ್ತಿಯನ್ನು ಕಿರಿಯ ವಯಸ್ಸಿನ ವ್ಯಕ್ತಿ ಅಲ್ಲವೆಂಬುದಾಗಿ ಪ್ರಮಾಣೀಕರಿಸುವವರೆಗೆ, ಕಾರ್ಖಾನೆಗೆ ನಿಯೋಜಿಸಿಕೊಳ್ಳಬಾರದೆಂದು ಅಥವಾ ಕೆಲಸ ಮಾಡಲು ಅನುಮತಿ ಕೊಡಬಾರದೆಂದು ಇನ್ಸ್‌ಪೆಕ್ಟರನು ನಿರ್ದೇಶಿಸಿದರೆ ಆ ವ್ಯಕ್ತಿಯನ್ನು ಯಾವುದೇ ಕಾರ್ಖಾನೆಯಲ್ಲಿ ಕೆಲಸ ಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಕೆಲಸ ಮಾಡಲು ಅನುಮತಿಸತಕ್ಕದ್ದಲ್ಲ.

**76. ನಿಯಮಗಳನ್ನು ರಚಿಸಲು ಅಧಿಕಾರ.–** ರಾಜ್ಯ ಸರ್ಕಾರವು,–

(ಎ) 69ನೇ ಪ್ರಕರಣದ ಮೇರೆಗೆ ಕೊಡಬೇಕಾದ ಯೋಗ್ಯತಾ ಪ್ರಮಾಣಪತ್ರಗಳ ನಮೂನೆಗಳನ್ನು ನಿಯಮಿಸಿ, ಮೂಲ ಪ್ರಮಾಣಪತ್ರಗಳು ಕಳೆದುಹೋದ ಸಂದರ್ಭದಲ್ಲಿ, ದ್ವಿಪ್ರತಿಗಳನ್ನು ಕೊಡುವುದಕ್ಕಾಗಿ ಉಪಬಂಧಿಸಿ ಅಂಥ ಪ್ರಮಾಣಪತ್ರಗಳಿಗೆ ಮತ್ತು ಅವುಗಳ ನವೀಕರಣಕ್ಕಾಗಿ ಮತ್ತು ಅಂಥ ದ್ವಿಪ್ರತಿಗಳಿಗಾಗಿ ವಿಧಿಸಬಹುದಾದಂಥ ಫೀಜುಗಳನ್ನು ನಿಗದಿಪಡಿಸುವ;

(ಬಿ) ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳು ಮತ್ತು ತರುಣ/ತರುಣಿಯು ಹೊಂದಿರಬೇಕಾದ ದೈಹಿಕ ಗುಣಮಟ್ಟಗಳನ್ನು ನಿಯಮಿಸುವ;

(ಸಿ) ಈ ಅಧ್ಯಾಯದ ಮೇರೆಗೆ ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕರ ಕಾರ್ಯವಿಧಾನವನ್ನು ವಿನಿಯಮನಗೊಳಿಸುವ;

(ಡಿ) ಈ ಕಾರ್ಖಾನೆಗಳಲ್ಲಿ ಕಿರಿಯ ವಯಸ್ಸಿನ ವ್ಯಕ್ತಿಗಳ ನಿಯೋಜನೆಗೆ ಸಂಬಂಧಿಸಿದಂತೆ ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕರು ನೆರವೇರಿಸಲು ಅಗತ್ಯಪಡಿಸಬಹುದಾದಂಥ ಇತರ ಕರ್ತವ್ಯಗಳನ್ನು ನಿರ್ದಿಷ್ಟಪಡಿಸುವ ಮತ್ತು ಅಂಥ ಕರ್ತವ್ಯಗಳಿಗಾಗಿ ವಿಧಿಸಬಹುದಾದಂಥ ಫೀಜನ್ನು ಮತ್ತು ಅವುಗಳನ್ನು ಸಂದಾಯ ಮಾಡತಕ್ಕ ವ್ಯಕ್ತಿಗಳನ್ನು ನಿಗದಿಪಡಿಸುವ

– ನಿಯಮಗಳನ್ನು ರಚಿಸಬಹುದು.

**77. ಕಾನೂನಿನ ಕೆಲವು ಇತರ ಉಪಬಂಧಗಳನ್ನು ಪ್ರತಿಷೇಧಿಸಿಲ್ಲ.–** ಈ ಅಧ್ಯಾಯದ ಉಪಬಂಧಗಳು, ಮಕ್ಕಳ ನಿಯೋಜನೆ ಅಧಿನಿಯಮ, 1938 (1938ರ 26)ರ ಉಪಬಂಧಗಳಿಗೆ ಪೂರಕವಾಗಿ ಇರತಕ್ಕದ್ದು ಮತ್ತು ಅವುಗಳನ್ನು ಕುಂಠಿತಗೊಳಿಸುವಂತೆ ಇರತಕ್ಕದ್ದಲ್ಲ.

## ಅಧ್ಯಾಯ – VIII

## ಮಜೂರಿ ಸಹಿತ ವಾರ್ಷಿಕ ರಜೆ

**78. ಅಧ್ಯಾಯದ ಅನ್ವಯ.–** (1) ಕೆಲಸಗಾರನು ಯಾವುದೇ ಇತರ ಕಾನೂನಿನ ಮೇರೆಗೆ ಅಥವಾ ಯಾವುದೇ ಐತೀರ್ಪು, ಒಪ್ಪಂದ (ಇತ್ಯರ್ಥವನ್ನೂ ಒಳಗೊಂಡಂತೆ) ಅಥವಾ ಸೇವೆಯ ಕರಾರಿನ ನಿಬಂಧನೆಗಳ ಮೇರೆಗೆ, ಕೆಲಸಗಾರನು ಹಕ್ಕುಳ್ಳವನಾಗಿರಬಹುದಾದಂಥ ಯಾವುದೇ ಹಕ್ಕಿಗೆ ಬಾಧಕವಾಗುವಂತೆ ಈ ಅಧ್ಯಾಯದ ಉಪಬಂಧಗಳು ಜಾರಿಯಾಗತಕ್ಕದ್ದಲ್ಲ:

ಪರಂತು, ಅಂಥ ಐತೀರ್ಪಿನಲ್ಲಿ, ಒಪ್ಪಂದದಲ್ಲಿ (ಇತ್ಯರ್ಥವನ್ನೂ ಒಳಗೊಂಡಂತೆ) ಅಥವಾ ಸೇವೆಯ ಕರಾರಿನಲ್ಲಿ, ಈ ಅಧ್ಯಾಯದಲ್ಲಿ ಉಪಬಂಧಿಸಿರುವುದಕ್ಕಿಂತ ಮಜೂರಿ ಸಹಿತ ಇನ್ನೂ ದೀರ್ಘ ವಾರ್ಷಿಕ ರಜೆಗಾಗಿ ಉಪಬಂಧಿಸಿದ್ದರೆ, ಆ ಕೆಲಸಗಾರನು ಹಕ್ಕುಳ್ಳವನಾಗತಕ್ಕಂಥ ರಜೆಯ ಪ್ರಮಾಣವು ಅಂಥ ಐತೀರ್ಪಿಗೆ, ಒಪ್ಪಂದಕ್ಕೆ ಅಥವಾ ಸೇವೆಯ ಕರಾರಿಗೆ ಅನುಸಾರವಾಗಿರತಕ್ಕದ್ದು, ಆದರೆ ಅಂಥ ಐತೀರ್ಪಿನಲ್ಲಿ, ಒಪ್ಪಂದದಲ್ಲಿ ಅಥವಾ ಸೇವೆಯ ಕರಾರಿನಲ್ಲಿ ಉಪಬಂಧಿಸಿರದ ವಿಷಯಗಳಿಗೆ ಅಥವಾ ಅದರಲ್ಲಿ ಹೆಚ್ಚು ಅನುಕೂಲಕರವಲ್ಲದಂತೆ ಉಪಬಂಧಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ 79 ರಿಂದ 82ರ ವರೆಗಿನ ಪ್ರಕರಣಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

(2) ಕೇಂದ್ರ ಸರ್ಕಾರವು ಅನುಮೋದಿಸಿದ ರಜಾ ನಿಯಮಗಳಿಗೆ ಒಳಪಡುವ, ಸರ್ಕಾರವು ನಡೆಸುತ್ತಿರುವ ಯಾವುದೇ ರೈಲ್ವೆಯ ಯಾವುದೇ ಕಾರ್ಖಾನೆಯಲ್ಲಿನ ಕೆಲಸಗಾರರಿಗೆ ಈ ಅಧ್ಯಾಯದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**79. ಮಜೂರಿ ಸಹಿತ ವಾರ್ಷಿಕ ರಜೆ.–** (1) ಒಂದು ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಕಾರ್ಖಾನೆಯಲ್ಲಿ 240 ದಿನಗಳು ಅಥವಾ ಅದಕ್ಕಿಂತ ಹೆಚ್ಚು ದಿನಗಳ ಅವಧಿಗಾಗಿ ಕೆಲಸ ಮಾಡಿರುವ ಪ್ರತಿಯೊಬ್ಬ ಕೆಲಸಗಾರನು, ತರುವಾಯದ ಕ್ಯಾಲೆಂಡರ್ ವರ್ಷದಲ್ಲಿ,–

(i) ಅವನು ವಯಸ್ಕನಾಗಿದ್ದರೆ, ಹಿಂದಿನ ಕ್ಯಾಲೆಂಡರ್ ವರ್ಷದಲ್ಲಿ ಅವನು ನೆರವೇರಿಸಿದ ಕೆಲಸದ ಪ್ರತಿ ಇಪ್ಪತ್ತು ದಿನಗಳಿಗಾಗಿ ಅವನಿಗೆ ಒಂದು ದಿನದ;

(ii) ಬಾಲಕನಾಗಿದ್ದರೆ/ಬಾಲಕಿಯಾಗಿದ್ದರೆ, ಹಿಂದಿನ ಕ್ಯಾಲೆಂಡರ್ ವರ್ಷದಲ್ಲಿ ಆ ಬಾಲಕನು/ಬಾಲಕಿಯು ನೆರವೇರಿಸಿದ ಕೆಲಸದ ಪ್ರತಿ ಹದಿನೈದು ದಿನಗಳಿಗಾಗಿ ಅದಕ್ಕೆ ಒಂದು ದಿನದ

– ದರದಲ್ಲಿ ಲೆಕ್ಕ ಹಾಕಿದ ದಿನಗಳ ಸಂಖ್ಯೆಗೆ ಮಜೂರಿ ಸಹಿತ ರಜೆಗೆ ಅವಕಾಶ ಕೊಡತಕ್ಕದ್ದು.

**ವಿವರಣೆ 1:–** ಈ ಉಪಪ್ರಕರಣದ ಉದ್ದೇಶಕ್ಕಾಗಿ,–

(ಎ) ಒಪ್ಪಂದ ಅಥವಾ ಕರಾರಿನ ಮೂಲಕ ಅಥವಾ ಸ್ಥಾಯಿ ಆದೇಶಗಳ ಮೇರೆಗೆ ಅನುಮತಿಸಲಾದಂತೆ ಹಂಗಾಮಿಯಾಗಿ ಕಾರ್ಯಸ್ಥಗಿತಗೊಳಿಸಿದ್ದ ಯಾವುದೇ ದಿವಸಗಳನ್ನು;

(ಬಿ) ಮಹಿಳಾ ಕೆಲಸಗಾರರ ಸಂದರ್ಭದಲ್ಲಿ ಹನ್ನೆರಡು ವಾರಗಳಿಗೆ ಮೀರದ ಯಾವುದೇ ಸಂಖ್ಯೆಯ ದಿವಸಗಳಿಗಾಗಿ ಹೆರಿಗೆ ರಜೆಯನ್ನು; ಮತ್ತು

(ಸಿ) ರಜೆಯನ್ನು ಬಳಸಿಕೊಂಡ ವರ್ಷದ ಹಿಂದಿನ ವರ್ಷದಲ್ಲಿ ಗಳಿಸಿದ ರಜೆಯನ್ನು

– 240 ದಿವಸಗಳನ್ನು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಕೆಲಸಗಾರನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ದಿವಸಗಳೆಂದು ಭಾವಿಸತಕ್ಕದ್ದು, ಆದರೆ ಈ ದಿನಗಳಿಗಾಗಿ ಅವನು ರಜೆಯನ್ನು ಗಳಿಸತಕ್ಕದ್ದಲ್ಲ.

**ವಿವರಣೆ 2:–** (1) ಈ ಉಪಪ್ರಕರಣದ ಮೇರೆಗೆ ಅನುಮತಿಸಲಾಗುವ ರಜೆಯು, ರಜೆಯ ಅವಧಿಯಲ್ಲಾಗಲಿ ಅಥವಾ ಅದರ ಪ್ರಾರಂಭದಲ್ಲಾಗಲಿ ಅಥವಾ ಕೊನೆಯಲ್ಲಾಗಲಿ ಬರುವ ಎಲ್ಲಾ ರಜಾ ದಿವಸಗಳನ್ನು ಹೊರತುಪಡಿಸಿ ಇರತಕ್ಕದ್ದು.

(2) ಯಾವ ಕೆಲಸಗಾರನ ಸೇವೆಯು ಜನವರಿ ಮೊದಲ ದಿವಸವನ್ನು ಹೊರತುಪಡಿಸಿ ಅನ್ಯಥಾ ಪ್ರಾರಂಭವಾಗುವುದೋ ಆ ಕೆಲಸಗಾರನು ಆ ಕ್ಯಾಲೆಂಡರ್ ವರ್ಷದ ಉಳಿದ ಭಾಗಗಳಲ್ಲಿನ ದಿವಸಗಳ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟು ಕೆಲಸ ಮಾಡಿದ್ದರೆ, (i)ನೇ ಉಪಪ್ರಕರಣದ ಒಂದನೇ ಖಂಡದಲ್ಲಿ ಅಥವಾ ಸಂದರ್ಭಾನುಸಾರ (ii)ನೇ ಖಂಡದಲ್ಲಿ ಹೇಳಿರುವ ದರದಲ್ಲಿ ಮಜೂರಿ ಸಹಿತ ರಜೆಗೆ ಹಕ್ಕುಳ್ಳವನಾಗಿರತಕ್ಕದ್ದು.

(3) ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಕೆಲಸಗಾರನನ್ನು ಸೇವೆಯಿಂದ ಬಿಡುಗಡೆ ಮಾಡಿದ್ದರೆ ಅಥವಾ ವಜಾ ಮಾಡಿದ್ದರೆ ಅಥವಾ ನಿಯೋಜನೆಯನ್ನು ಅವನು ಬಿಟ್ಟರೆ ಅಥವಾ ಸೇವೆಯಿಂದ ವಯೋನಿವೃತ್ತಿ ಹೊಂದಿದರೆ ಅಥವಾ ಸೇವೆಯಲ್ಲಿರುವಾಗ ಮರಣ ಹೊಂದಿದರೆ, ಸಂದರ್ಭಾನುಸಾರ ಕೆಲಸಗಾರನು ಅಥವಾ ಅವನ ವಾರಸುದಾರನು ಅಥವಾ ನಾಮನಿರ್ದೇಶಿತನು ಆ ಕೆಲಸಗಾರನನ್ನು ಬಿಡುಗಡೆ ಮಾಡಿದ್ದ, ವಜಾ ಮಾಡಿದ್ದ, ನಿಯೋಜನೆಯನ್ನು ಬಿಟ್ಟುಹೋಗಿರುವುದಕ್ಕೆ, ಸೇವಾ ವಯೋನಿವೃತ್ತಿಗೆ ಅಥವಾ ಕೆಲಸಗಾರನ ಮರಣಕ್ಕೆ ನಿಕಟಪೂರ್ವದಲ್ಲಿ ಕೆಲಸಗಾರನು ಹಕ್ಕುಳ್ಳವನಾಗಿದ್ದಂಥ ರಜೆಯ ಪ್ರಮಾಣದ ಬದಲಾಗಿ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರಗಳಲ್ಲಿ ಲೆಕ್ಕ ಹಾಕಿದಂತೆ ಅಂಥ ರಜೆಯನ್ನು ಕೆಲಸಗಾರನು ತೆಗೆದುಕೊಳ್ಳಲು ಕೆಲಸಗಾರನನ್ನು ಅರ್ಹಗೊಳಿಸುವ (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಇಡೀ ಅವಧಿಗಾಗಿ ಕೆಲಸಗಾರನು ಕೆಲಸವನ್ನು ಮಾಡದೇ ಇದ್ದಾಗ್ಯೂ ಮಜೂರಿಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಸಂದಾಯವನ್ನು,–

(i) ಆ ಕೆಲಸಗಾರನು ಬಿಡುಗಡೆಯಾಗಿದ್ದರೆ ಅಥವಾ ವಜಾ ಆಗಿದ್ದರೆ ಅಥವಾ ನಿಯೋಜನೆಯನ್ನು ಬಿಟ್ಟು ಹೋಗಿದ್ದರೆ, ಅಂಥ ಬಿಡುಗಡೆಯಾದ, ವಜಾ ಆದ ಅಥವಾ ಬಿಟ್ಟು ಹೋದ ದಿನಾಂಕದಿಂದ ಎರಡನೆಯ ಕೆಲಸದ ದಿವಸವು ಮುಕ್ತಾಯವಾಗುವುದಕ್ಕೂ ಮುಂಚೆ; ಮತ್ತು

(ii) ಆ ಕೆಲಸಗಾರನು ಸೇವಾ ವಯೋನಿವೃತ್ತಿಗೊಂಡಿದ್ದರೆ ಅಥವಾ ಸೇವೆಯಲ್ಲಿರುವಾಗ ಮರಣ ಹೊಂದಿದ್ದರೆ, ಆ ಸೇವಾ ವಯೋನಿವೃತ್ತಿಯ ಅಥವಾ ಮರಣದ ದಿನಾಂಕದಿಂದ ಎರಡು ತಿಂಗಳುಗಳ ಮುಕ್ತಾಯಕ್ಕೆ ಮುಂಚೆ

– ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ರಜೆಯನ್ನು ಲೆಕ್ಕ ಹಾಕುವಾಗ ಅರ್ಧ ದಿನದ ಅಥವಾ ಅದಕ್ಕಿಂತ ಹೆಚ್ಚಿನ ರಜೆಯ ಭಾಗವನ್ನು ಒಂದು ಪೂರ್ಣ ದಿನದ ರಜೆ ಎಂದು ಪರಿಗಣಿಸತಕ್ಕದ್ದು ಮತ್ತು ಅರ್ಧ ದಿನಕ್ಕಿಂತ ಕಡಿಮೆ ಭಾಗವನ್ನು ಬಿಟ್ಟುಬಿಡತಕ್ಕದ್ದು.

(5) ಕೆಲಸಗಾರನು ಸಂದರ್ಭಾನುಸಾರ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಅವನಿಗೆ ಅವಕಾಶವಿರುವ ಇಡೀ ರಜೆಯನ್ನು ಯಾವುದೇ ಒಂದು ಕ್ಯಾಲೆಂಡರ್ ವರ್ಷದಲ್ಲಿ ತೆಗೆದುಕೊಳ್ಳದಿದ್ದರೆ ಅವನು ತೆಗೆದುಕೊಂಡಿರದ ಯಾವುದೇ ರಜೆಯನ್ನು ಮುಂದೆ ಬರುವ ಕ್ಯಾಲೆಂಡರ್ ವರ್ಷದಲ್ಲಿ ಅವನಿಗೆ ಅನುಮತಿಸಬಹುದಾದ ರಜೆಗೆ ಸೇರಿಸತಕ್ಕದ್ದು:

ಪರಂತು, ಮುಂದೆ ಬರುವ ವರ್ಷಕ್ಕೆ ಸೇರಿಸಬಹುದಾದ ರಜಾ ದಿನಗಳ ಒಟ್ಟು ಸಂಖ್ಯೆಯು ವಯಸ್ಕನ ಸಂದರ್ಭದಲ್ಲಿ ಮೂವತ್ತನ್ನು ಅಥವಾ ಬಾಲಕನ/ಬಾಲಕಿಯ ಸಂದರ್ಭದಲ್ಲಿ ನಲವತ್ತನ್ನು ಮೀರತಕ್ಕದ್ದಲ್ಲ:

ಮತ್ತೂ ಪರಂತು, ಮಜೂರಿ ಸಹಿತ ರಜೆಗಾಗಿ ಅರ್ಜಿ ಸಲ್ಲಿಸಿರುವ, ಆದರೆ (8)ನೇ ಮತ್ತು (9)ನೇ ಉಪಪ್ರಕರಣಗಳಲ್ಲಿ ಹೇಳಿರುವ ಯಾವುದೇ ಏರ್ಪಾಟಿಗೆ ಅನುಸಾರವಾಗಿ ಅಥವಾ (10)ನೇ ಉಪಪ್ರಕರಣ ಉಲ್ಲಂಘಿಸಿ ಅಂಥ ರಜೆಯನ್ನು ಕೊಟ್ಟಿರದಿದ್ದರೆ, ನಿರಾಕರಿಸಿದ ಆ ರಜೆಯನ್ನು ಕೆಲಸಗಾರನು ಯಾವುದೇ ಮಿತಿ ಇಲ್ಲದೆ ಉಳಿಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(6) ಕೆಲಸಗಾರನು ಕಾರ್ಖಾನೆಯ ವ್ಯವಸ್ಥಾಪಕನಿಗೆ ತನ್ನ ರಜೆಯು ಪ್ರಾರಂಭವಾಗಲು ತಾನು ಇಚ್ಛಿಸುವಂಥ ದಿನಾಂಕಕ್ಕೆ ಮುಂಚೆ ಹದಿನೈದು ದಿವಸಗಳಿಗೆ ಕಡಿಮೆಯಿಲ್ಲದಂತೆ ಆ ಕ್ಯಾಲೆಂಡರ್ ವರ್ಷದಲ್ಲಿ ತನಗೆ ಅನುಮತಿಸಬಹುದಾದ ಎಲ್ಲ ರಜೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಪಡೆಯಲು ಲಿಖಿತದಲ್ಲಿ ಯಾವುದೇ ಕಾಲದಲ್ಲಿ ಅರ್ಜಿ ಸಲ್ಲಿಸಬಹುದು:

ಪರಂತು, ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ 2ನೇ ಪ್ರಕರಣದ (ಎನ್) ಖಂಡದಲ್ಲಿ ಪರಿಭಾಷಿಸಿದಂತೆ ಸಾರ್ವಜನಿಕ ಉಪಯುಕ್ತತಾ ಸೇವೆಯಲ್ಲಿ ಅವನು ನಿಯೋಜಿತನಾಗಿದ್ದರೆ, ಕೆಲಸಗಾರನು, ತನ್ನ ರಜೆಯು ಯಾವಾಗ ಪ್ರಾರಂಭವಾಗಲು ಇಚ್ಛಿಸುವನೋ ಆ ದಿನಾಂಕಕ್ಕೆ ಮುಂಚೆ ಮೂವತ್ತು ದಿವಸಗಳಿಗೆ ಕಡಿಮೆಯಿಲ್ಲದಂತೆ ಆ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಮತ್ತೂ ಪರಂತು, ಯಾವುದೇ ವರ್ಷದಲ್ಲಿ ಮೂರು ಸಲಕ್ಕಿಂತ ಹೆಚ್ಚಾಗಿ ರಜೆ ತೆಗೆದುಕೊಳ್ಳತಕ್ಕದ್ದಲ್ಲ.

(7) ಅನಾರೋಗ್ಯದ ಅವಧಿಯೂ ಒಳಗೊಂಡಂತೆ ಕೆಲಸಗಾರನಿಗೆ ಕೊಡಬೇಕಾದ ಮಜೂರಿ ಸಹಿತ ರಜೆಯನ್ನು, ಕೆಲಸಗಾರನು ಆ ರಜೆಯನ್ನು ಉಪಯೋಗಿಸಿಕೊಳ್ಳಲು ಆತನೇ ಇಚ್ಛಿಸಿದಲ್ಲಿ, (6)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ರಜೆ ಅರ್ಜಿಯನ್ನು ಸಲ್ಲಿಸದೇ ಇದ್ದಾಗ್ಯೂ ಅವನಿಗೆ ಮಂಜೂರು ಮಾಡತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ 81ನೇ ಪ್ರಕರಣದ ಮೇರೆಗೆ ಅನುಮತಿಸಬಹುದಾದಂಥ ಮಜೂರಿಯನ್ನು ರಜೆ ಅರ್ಜಿಯ ದಿನಾಂಕದಿಂದ ಹದಿನೈದು ದಿವಸಗಳಿಗೆ ಮೀರದಂತೆ ಅಥವಾ ಸಾರ್ವಜನಿಕ ಉಪಯುಕ್ತತೆಯ ಸೇವೆಗಳ ಸಂದರ್ಭದಲ್ಲಿ ಮೂವತ್ತು ದಿವಸಗಳಿಗೆ ಮೀರದಂತೆ ಸಂದಾಯ ಮಾಡತಕ್ಕದ್ದು.

(8) ಕೆಲಸದ ಮುಂದುವರಿಕೆಯನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಆ ಕಾರ್ಖಾನೆಯ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ 3ನೇ ಪ್ರಕರಣದ ಮೇರೆಗೆ ರಚಿತವಾದ ಆ ಕಾರ್ಖಾನೆಯ ಕಾಮಗಾರಿ ಸಮಿತಿಯು ಅಥವಾ ಇತರ ಯಾವುದೇ ಅಧಿನಿಯಮದ ಮೇರೆಗೆ ರಚಿತವಾದ ಅಂಥದೇ ಸಮಿತಿಯ ಒಪ್ಪಿಗೆ ಪಡೆದು ಅಥವಾ ಆ ಕಾರ್ಖಾನೆಯಲ್ಲಿ ಕಾಮಗಾರಿ ಸಮಿತಿಯು ಅಥವಾ ಅಂಥದೇ ಸಮಿತಿಯು ಇಲ್ಲದಿದ್ದರೆ ನಿಯಮಿಸಿದ ರೀತಿಯಲ್ಲಿ ಆಯ್ಕೆಗೊಂಡ ಅದರಲ್ಲಿನ ಕೆಲಸಗಾರರ ಪ್ರತಿನಿಧಿಗಳ ಒಪ್ಪಿಗೆ ಪಡೆದು ಯಾವ ವಿಧಾನದ ಮೂಲಕ ಈ ಪ್ರಕರಣದ ಮೇರೆಗೆ ಅನುಮತಿಸಬಹುದಾದ ರಜೆಯ ಮಂಜೂರಾತಿಯನ್ನು ನಿಯಂತ್ರಿಸಬಹುದೋ, ಲಿಖಿತದಲ್ಲಿ ಆ ವಿಧಾನವನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಸಲ್ಲಿಸಬಹುದು.

(9) ಉಪಪ್ರಕರಣ (8)ರ ಮೇರೆಗೆ ಸಲ್ಲಿಸಿದ ವಿಧಾನವನ್ನು ಆ ಕಾರ್ಖಾನೆಯಲ್ಲಿನ ಯಾವುದೇ ಎದ್ದುಕಾಣುವ ಮತ್ತು ಅನುಕೂಲಕರವಾದ ಸ್ಥಳಗಳಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಅದು ಜಾರಿಗೆ ಬಂದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು ಮತ್ತು ಆ ತರುವಾಯ ಒಂದು ಬಾರಿಗೆ ಹನ್ನೆರಡು ತಿಂಗಳುಗಳ ಇನ್ನೂ ಹೆಚ್ಚಿನ ಅವಧಿಗಾಗಿ ಮಾರ್ಪಾಡಿನೊಂದಿಗೆ ಅಥವಾ ಮಾರ್ಪಾಡಿಲ್ಲದೆ (8)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಕಾಮಗಾರಿ ಸಮಿತಿಯ ಅಥವಾ ಅಂಥದೇ ಸಮಿತಿಯ ಅಥವಾ ಸಂದರ್ಭಾನುಸಾರ ಕೆಲಸಗಾರರ ಪ್ರತಿನಿಧಿಗಳ ಒಪ್ಪಿಗೆ ಪಡೆದು ಅದನ್ನು ವ್ಯವಸ್ಥಾಪಕನು ನವೀಕರಿಸಬಹುದು ಮತ್ತು ಅದನ್ನು ನವೀಕರಿಸುವುದಕ್ಕೆ ಮುಂಚೆ ನವೀಕರಣದ ನೋಟೀಸನ್ನು ಚೀಫ್ ಇನ್ಸ್‌ಪೆಕ್ಟರ್‌ನಿಗೆ ಕಳುಹಿಸತಕ್ಕದ್ದು.

(10) ಉಪಪ್ರಕರಣ (6)ರ ಉಪಬಂಧಗಳನ್ನು ಉಲ್ಲಂಘಿಸದೇ ಇರುವಂಥ ರಜೆಯ ಅರ್ಜಿಯನ್ನು, (8)ನೇ ಮತ್ತು (9)ನೇ ಉಪಪ್ರಕರಣಗಳ ಮೇರೆಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ವಿಧಾನಕ್ಕೆ ಅನುಸಾರವಾಗಿ ನಿರಾಕರಿಸಿದ್ದ ಹೊರತು, ನಿರಾಕರಿಸತಕ್ಕದ್ದಲ್ಲ.

(11) ಉಪಪ್ರಕರಣ (1)ರ ಅಥವಾ ಸಂದರ್ಭಾನುಸಾರ (2)ರ ಉಪಪ್ರಕರಣದ ಮೇರೆಗೆ ರಜೆಗೆ ಹಕ್ಕುಳ್ಳವನಾಗಿರುವ ಕೆಲಸಗಾರನ ನಿಯೋಜನೆಯನ್ನು ಅವನು ಹಕ್ಕುಳ್ಳವನಾಗಿರುವಂಥ ಇಡೀ ರಜೆಯನ್ನು ಅವನು ತೆಗೆದುಕೊಳ್ಳುವುದಕ್ಕೆ ಮುಂಚೆ

ಅಧಿಭೋಗದಾರನು ಕೊನೆಗೊಳಿಸಿದ್ದರೆ ಅಥವಾ ಅಂಥ ರಜೆಗಾಗಿ ಅರ್ಜಿಯನ್ನು ಹಾಕಿಕೊಂಡಿದ್ದಾಗ ಅದನ್ನು ಮಂಜೂರು ಮಾಡಿರದಿದ್ದಾಗ, ರಜೆಯನ್ನು ಪಡೆಯುವುದಕ್ಕೆ ಮುಂಚೆ ಕೆಲಸಗಾರನು ನಿಯೋಜನೆಯನ್ನು ಬಿಟ್ಟುಹೋದರೆ, ತೆಗೆದುಕೊಳ್ಳದೇ ಇರುವ ಆ ರಜೆಗೆ ಸಂಬಂಧಿಸಿದಂತೆ 80ನೇ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು, ಅಧಿಭೋಗದಾರನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ಅಧಿಭೋಗದಾರನು ಕೆಲಸಗಾರನ ನಿಯೋಜನೆಯನ್ನು ಕೊನೆಗೊಳಿಸಿದ್ದರೆ, ಹಾಗೆ ಕೊನೆಗೊಳಿಸಿದ ತರುವಾಯದ ಎರಡನೇ ಕೆಲಸದ ದಿವಸವು ಮುಕ್ತಾಯವಾಗುವುದಕ್ಕೆ ಮುಂಚೆ ಮತ್ತು ಕೆಲಸಗಾರನು ನಿಯೋಜನೆಯನ್ನು ತಾನೇ ಬಿಟ್ಟುಹೋಗಿದ್ದರೆ ಮುಂದಿನ ಸಂಬಳದ ದಿನದಂದು ಅಥವಾ ಅದಕ್ಕೂ ಮುಂಚೆ ಸಂದಾಯವನ್ನು ಮಾಡತಕ್ಕದ್ದು.

(12) ಸೇವೆಯಿಂದ ಬಿಡುಗಡೆ ಮಾಡುವುದಕ್ಕೆ ಅಥವಾ ತೆಗೆದು ಹಾಕುವುದಕ್ಕೆ ಮುಂಚೆ ಕೊಡಬೇಕಾದ ಯಾವುದೇ ನೋಟೀಸಿನಲ್ಲಿ ಹೇಳಿರುವ ಅವಧಿಯನ್ನು ಲೆಕ್ಕಹಾಕುವಾಗ ಕೆಲಸಗಾರನು ತೆಗೆದುಕೊಳ್ಳದೇ ಇರುವ ರಜೆಯನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**80. ರಜಾ ಅವಧಿಯಲ್ಲಿ ಮಜೂರಿ.–** (1) 78ನೇ ಪ್ರಕರಣದ ಮೇರೆಗೆ ಅಥವಾ ಸಂದರ್ಭಾನುಸಾರ 79ನೇ ಪ್ರಕರಣದ ಮೇರೆಗೆ ಕೆಲಸಗಾರನಿಗೆ ಅನುಮತಿಸಬಹುದಾದ ರಜೆಯ ಬದಲಾಗಿ, ಯಾವುದೇ ಅವಧಿ ಮೀರಿದ ಮಜೂರಿಯನ್ನು ಮತ್ತು ಬೋನಸ್ಸನ್ನು ಹೊರತುಪಡಿಸಿ, ಆದರೆ ತುಟ್ಟಿಭತ್ಯೆಯನ್ನು ಮತ್ತು ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಬಂದ ಅನುಕೂಲಕ್ಕೆ ಸಮವಾದ ನಗದನ್ನು ಒಳಗೊಂಡಂತೆ, ಅವನ ರಜೆಯ ನಿಕಟಪೂರ್ವದ ತಿಂಗಳಿನಲ್ಲಿ ಅವನು ವಾಸ್ತವವಾಗಿ ಕೆಲಸ ಮಾಡಿದಂಥ ದಿನಗಳಿಗಾಗಿ ಅವನ ಒಟ್ಟು ಪೂರ್ಣ ಕಾಲಾವಧಿ ಗಳಿಕೆಗಳ ದೈನಿಕ ಸರಾಸರಿಗೆ ಸಮನಾದ ದರದಲ್ಲಿ ಮಜೂರಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಕೆಲಸಗಾರನು ತನ್ನ ರಜೆಯ ನಿಕಟಪೂರ್ವದ ಕ್ಯಾಲೆಂಡರ್ ತಿಂಗಳಿನಲ್ಲಿ ಯಾವುದೇ ದಿನದಂದು ಕೆಲಸ ಮಾಡದಿರುವ ಸಂದರ್ಭದಲ್ಲಿ, ಯಾವುದೇ ಅವಧಿ ಮೀರಿದ ಕೆಲಸಕ್ಕಾಗಿ ಪಡೆದ ಮಜೂರಿ ಮತ್ತು ಬೋನಸ್ಸನ್ನು ಹೊರತುಪಡಿಸಿ, ಆದರೆ ತುಟ್ಟಿಭತ್ಯೆಯನ್ನು ಮತ್ತು ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರನಿಗೆ ರಿಯಾಯಿತಿ ಮಾರಾಟದ ಮೂಲಕ ಒದಗಿಬಂದ ಅನುಕೂಲಕ್ಕೆ ಸಮವಾದ ನಗದನ್ನು ಒಳಗೊಂಡು ಅವನ ರಜೆಯ ಪೂರ್ವದ ಕೊನೆಯ ಕ್ಯಾಲೆಂಡರ್ ತಿಂಗಳಿನಲ್ಲಿ ಯಾವ ದಿನಗಳಲ್ಲಿ ಅವನು ವಾಸ್ತವಿಕವಾಗಿ ಕೆಲಸ ಮಾಡಿದ್ದಾನೆಯೋ ಆ ದಿನಗಳಿಗಾಗಿ ಆತನ ಒಟ್ಟು ಪೂರ್ಣ ಕಾಲಾವಧಿ ಗಳಿಕೆಗಳ ದೈನಿಕ ಸರಾಸರಿಗೆ ಸಮಾನವಾದ ದರದಲ್ಲಿ ಸಂದಾಯ ಮಾಡತಕ್ಕದ್ದು.

(2) ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ಕೆಲಸಗಾರನಿಗೆ ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಒದಗಿಬಂದ ಅನುಕೂಲಕ್ಕೆ ಸಮಾನವಾದ ನಗದನ್ನು ನಿಗದಿತ ಕುಟುಂಬಕ್ಕೆ ಕೊಡಬಹುದಾದ ಆಹಾರ ಧಾನ್ಯಗಳನ್ನು ಮತ್ತು ಇತರೆ ವಸ್ತುಗಳನ್ನು ಗರಿಷ್ಠ ಪ್ರಮಾಣದ ಆಧಾರದ ಮೇಲೆ ಆಗಿಂದಾಗ್ಗೆ ನಿಯಮಿಸಬಹುದಾದಂತೆ ಲೆಕ್ಕ ಹಾಕತಕ್ಕದ್ದು.

**ವಿವರಣೆ 1:–** "ಅರ್ಹ ಕುಟುಂಬ" ಎಂದರೆ ಒಟ್ಟಾರೆ ಮೂರು ವಯಸ್ಕ ಬಳಕೆ ಯೂನಿಟ್ಟುಗಳು ಅಗತ್ಯವಾಗುವ ಆ ಕೆಲಸಗಾರ, ಅವನ ಹೆಂಡತಿ ಅಥವಾ ಅವಳ ಗಂಡ ಮತ್ತು ಹದಿನಾಲ್ಕು ವರ್ಷ ವಯಸ್ಸಿಗೆ ಕಮ್ಮಿ ಇರುವ ಇಬ್ಬರು ಮಕ್ಕಳು ಇರುವ ಕುಟುಂಬ.

**ವಿವರಣೆ 2:–** "ವಯಸ್ಕ ಆಹಾರ ವಸ್ತುಗಳ ಬಳಕೆ ಯೂನಿಟ್" ಎಂದರೆ ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನ ಆಹಾರ ವಸ್ತುಗಳ ಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗೆ ಮೇಲ್ಪಟ್ಟ ಮಹಿಳೆಯ ಆಹಾರ ವಸ್ತುಗಳ ಬಳಕೆ ಯೂನಿಟ್ ಮತ್ತು ಹದಿನಾಲ್ಕು ವರ್ಷಗಳ ವಯಸ್ಸಿಗೆ ಕಡಿಮೆ ವಯಸ್ಸಿನ ಬಾಲಕ/ಬಾಲಕಿಯ ಯೂನಿಟ್ಟನ್ನು ಒಂದು ವಯಸ್ಕ ಆಹಾರ ವಸ್ತುಗಳ ಬಳಕೆ ಯೂನಿಟ್ ಪ್ರಕಾರ ಅನುಕ್ರಮವಾಗಿ 8 ಮತ್ತು 6ರ ದರಗಳಲ್ಲಿ ಲೆಕ್ಕ ಹಾಕತಕ್ಕದ್ದು.

(3) ರಾಜ್ಯ ಸರ್ಕಾರವು,–

(ಎ) ಆಹಾರ ಧಾನ್ಯಗಳನ್ನು ಮತ್ತು ಇತರ ವಸ್ತುಗಳನ್ನು ರಿಯಾಯಿತಿಯಲ್ಲಿ ಮಾರಾಟ ಮಾಡಿದಾಗ ಕೆಲಸಗಾರನಿಗೆ ಒದಗಿಬಂದ ಅನುಕೂಲಕ್ಕೆ ಸಮನಾದ ನಗದನ್ನು ಲೆಕ್ಕಹಾಕತಕ್ಕಂಥ ರೀತಿಯನ್ನು; ಮತ್ತು

(ಬಿ) ಈ ಪ್ರಕರಣದ ಉಪಬಂಧಗಳ ಪಾಲನೆ ಆಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕಾರ್ಖಾನೆಯಲ್ಲಿ ಇಡಬೇಕಾದ ರಿಜಿಸ್ಟರುಗಳನ್ನು

– ನಿಯಮಿಸಿ ನಿಯಮಗಳನ್ನು ರಚಿಸಬಹುದು.

**81. ಕೆಲವು ಸಂದರ್ಭಗಳಲ್ಲಿ ಮುಂಗಡವಾಗಿ ಸಂದಾಯ.–** ವಯಸ್ಕನ ಸಂದರ್ಭದಲ್ಲಿ ನಾಲ್ಕು ದಿವಸಗಳಿಗೆ ಮತ್ತು ಬಾಲಕನ/ಬಾಲಕಿಯ ಸಂದರ್ಭದಲ್ಲಿ ಐದು ದಿವಸಗಳಿಗೆ ಕಡಿಮೆ ಇಲ್ಲದಷ್ಟು ರಜೆಯನ್ನು ಯಾವ ಕೆಲಸಗಾರನಿಗೆ ಅನುಮತಿಸಲಾಗಿದೆಯೋ ಆ ಕೆಲಸಗಾರನಿಗೆ ಅವನ ರಜೆಯು ಪ್ರಾರಂಭವಾಗುವುದಕ್ಕೆ ಮುಂಚೆ ಅನುಮತಿಸಲಾದ ರಜಾ ಅವಧಿಗೆ ಕೊಡಬೇಕಾದ ಮಜೂರಿಯನ್ನು ಸಂದಾಯ ಮಾಡತಕ್ಕದ್ದು.

**82. ಸಂದಾಯ ಮಾಡದ ಮಜೂರಿಯ ವಸೂಲಿ ವಿಧಾನ.–** ಈ ಅಧ್ಯಾಯದ ಮೇರೆಗೆ ನಿಯೋಜಕನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಆದರೆ ಅವನು ಸಂದಾಯ ಮಾಡಿರದ ಯಾವುದೇ ಮೊತ್ತವು, ಮಜೂರಿ ಸಂದಾಯ ಅಧಿನಿಯಮ, 1936 (1936ರ 4)ರ ಉಪಬಂಧಗಳ ಮೇರೆಗೆ ವಿಳಂಬಿತ ಮಜೂರಿಯಂತೆ ವಸೂಲು ಮಾಡಬಹುದಾದುದು ಆಗಿರತಕ್ಕದ್ದು.

**83. ನಿಯಮಗಳನ್ನು ರಚಿಸಲು ಅಧಿಕಾರ.–** ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ವಿವರಗಳನ್ನೊಳಗೊಂಡ ರಿಜಿಸ್ಟರುಗಳನ್ನು ಇಡಲು ಮತ್ತು ಇನ್ಸ್‌ಪೆಕ್ಟರ್‌ನ ಪರೀಕ್ಷೆಗಾಗಿ ರಿಜಿಸ್ಟರುಗಳನ್ನು ಲಭ್ಯವಾಗುವಂತೆ ಮಾಡಲು ಕಾರ್ಖಾನೆಗಳ ವ್ಯವಸ್ಥಾಪಕರಿಗೆ ನಿರ್ದೇಶಿಸಿ ನಿಯಮಗಳನ್ನು ರಚಿಸಬಹುದು.

**84. ಕಾರ್ಖಾನೆಗಳಿಗೆ ವಿನಾಯಿತಿ ನೀಡಲು ಅಧಿಕಾರ.–** ಈ ಅಧ್ಯಾಯವು ಯಾವ ಪ್ರಯೋಜನಗಳಿಗೆ ಅವಕಾಶ ಕಲ್ಪಿಸಿರುವುದೋ ಆ ಯಾವ ಪ್ರಯೋಜನಗಳು ಕಡಿಮೆ ಏನಲ್ಲವೆಂದು ರಾಜ್ಯ ಸರ್ಕಾರವು ಅಭಿಪ್ರಾಯಪಡುತ್ತದೋ ಆ ಪ್ರಯೋಜನಗಳನ್ನು ಕಾರ್ಖಾನೆಯಲ್ಲಿನ ಕೆಲಸಗಾರರಿಗೆ ಅನ್ವಯವಾಗಬಹುದಾದ ರಜಾ ನಿಯಮಗಳಲ್ಲಿ ಕಲ್ಪಿಸಲಾಗಿದೆಯೆಂಬುದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ ಅದು ಲಿಖಿತ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧ್ಯಾಯದ ಎಲ್ಲ ಅಥವಾ ಯಾವುದೇ ಉಪಬಂಧಗಳು ಅನ್ವಯವಾಗದಂತೆ ಆ ಕಾರ್ಖಾನೆಗೆ ವಿನಾಯಿತಿ ನೀಡಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ ಯಾವುವೇ ರಜಾ ನಿಯಮಗಳ ಮೂಲಕ ಉಪಬಂಧಿಸಿರುವಂಥ ಪ್ರಯೋಜನಗಳು ಈ ಅಧ್ಯಾಯವು ಉಪಬಂಧಿಸಿರುವಂಥ ಪ್ರಯೋಜನಗಳಿಗಿಂತ ಕಡಿಮೆ ಅನುಕೂಲಕರವಾಗಿವೆಯೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸುವಾಗ, ಒಟ್ಟಾರೆ ಪ್ರಯೋಜನಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದು.

## ಅಧ್ಯಾಯ – IX
## ವಿಶೇಷ ಉಪಬಂಧಗಳು

**85. ಕೆಲವು ಆವರಣಗಳಿಗೆ ಅಧಿನಿಯಮವನ್ನು ಅನ್ವಯಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉಪಬಂಧಗಳು, ಯಾವ ಸ್ಥಳದಲ್ಲಿ ತಯಾರಿಕಾ ಪ್ರಕ್ರಿಯೆಯನ್ನು ವಿದ್ಯುಚ್ಛಕ್ತಿಯ ನೆರವಿನಿಂದ ಅಥವಾ ಅದಿಲ್ಲದೇ ನಡೆಸಲಾಗುತ್ತಿದೆಯೋ ಅಥವಾ ಹಾಗೆ ಸಾಮಾನ್ಯವಾಗಿ ನಡೆಸಲಾಗುತ್ತಿದೆಯೋ ಆ ಯಾವುದೇ ಸ್ಥಳದಲ್ಲಿ,–

(i) ನಿಯೋಜಿತರಾಗಿರುವ ವ್ಯಕ್ತಿಗಳು, ವಿದ್ಯುಚ್ಛಕ್ತಿಯ ನೆರವಿನೊಂದಿಗೆ ಕೆಲಸ ಮಾಡುತ್ತಿರುವ ವ್ಯಕ್ತಿಗಳ ಸಂಖ್ಯೆಯು ಹತ್ತಕ್ಕಿಂತ ಕಡಿಮೆ ಇದ್ದರೂ ಮತ್ತು ವಿದ್ಯುಚ್ಛಕ್ತಿಯ ನೆರವಿಲ್ಲದೆ ಕೆಲಸ ಮಾಡುತ್ತಿರುವ ವ್ಯಕ್ತಿಗಳ ಸಂಖ್ಯೆ ಇಪ್ಪತ್ತಕ್ಕಿಂತ ಕಡಿಮೆ ಇದ್ದರೂ; ಅಥವಾ

(ii) ಕೆಲಸ ಮಾಡುತ್ತಿರುವ ವ್ಯಕ್ತಿಗಳು ಆ ಸ್ಥಳದ ಒಡೆಯನಿಂದ ನಿಯೋಜಿತರಾಗಿರದೆ, ಆದರೆ ಅಂಥ ಒಡೆಯನ ಅನುಮತಿ ಪಡೆದು ಅಥವಾ ಆತನೊಂದಿಗಿನ ಒಪ್ಪಂದದಂತೆ ಕೆಲಸ ಮಾಡುತ್ತಿದ್ದರೂ

– ಆ ಯಾವುದೇ ಸ್ಥಳಕ್ಕೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು:

ಪರಂತು, ತಯಾರಿಕಾ ಪ್ರಕ್ರಿಯೆಯನ್ನು ಒಡೆಯನ ಕುಟುಂಬದ ನೆರವಿನೊಂದಿಗೆ ಮಾತ್ರವೇ ನಡೆಸುತ್ತಿರಕೂಡದು.

(2) ಆ ಸ್ಥಳವನ್ನು ಹಾಗೆ ಘೋಷಿಸಿದ ತರುವಾಯ, ಅದನ್ನು ಈ ಅಧಿನಿಯಮದ ಉದ್ದೇಶಗಳಿಗಾಗಿ ಕಾರ್ಖಾನೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಆ ಒಡೆಯನನ್ನು ಅಧಿಭೋಗದಾರನೆಂದು ಮತ್ತು ಅದರಲ್ಲಿ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿಯನ್ನು ಕೆಲಸಗಾರನೆಂದು ಭಾವಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ 'ಒಡೆಯ' ಎಂಬುದು ಆ ಆವರಣಗಳನ್ನು ಗೇಣಿ ಪಡೆದವನನ್ನು ಅಥವಾ ಅಡಮಾನಕ್ಕೆ ಪಡೆದುಕೊಂಡವನನ್ನು ಒಳಗೊಳ್ಳತಕ್ಕದ್ದು.

**86. ಸಾರ್ವಜನಿಕ ಸಂಸ್ಥೆಗಳಿಗೆ ವಿನಾಯಿತಿ ನೀಡಲು ಅಧಿಕಾರ.–** ತಯಾರಿಕಾ ಪ್ರಕ್ರಿಯೆಯು ನಡೆಯುತ್ತಿರುವ ಮತ್ತು ಶಿಕ್ಷಣ, ತರಬೇತಿ, ಸಂಶೋಧನೆ ಅಥವಾ ಸುಧಾರಣೆಯ ಉದ್ದೇಶಗಳಿಗಾಗಿ ನಡೆಸುತ್ತಿರುವ ಸಾರ್ವಜನಿಕ ಸಂಸ್ಥೆಗೆ ಸೇರಿದ ಯಾವುದೇ ಕಾರ್ಯಾಗಾರವನ್ನು ಅಥವಾ ಕೆಲಸದ ಸ್ಥಳವನ್ನು ರಾಜ್ಯ ಸರ್ಕಾರವು, ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಎಲ್ಲ ಅಥವಾ ಯಾವುವೇ ಉಪಬಂಧಗಳು ಅದಕ್ಕೆ ಅನ್ವಯವಾಗದಂತೆ ವಿನಾಯಿತಿಗೊಳಿಸಬಹುದು:

ಪರಂತು, ಕೆಲಸದ ವೇಳೆಗಳಿಗೆ ಮತ್ತು ರಜಾ ದಿವಸಗಳಿಗೆ ಸಂಬಂಧಪಟ್ಟ ಉಪಬಂಧಗಳು ಅನ್ವಯವಾಗದಂತೆ ಕೊಡುವ ಯಾವುದೇ ವಿನಾಯಿತಿಯನ್ನು, ಆ ಸಂಸ್ಥೆಯ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಗಳು ರಾಜ್ಯ ಸರ್ಕಾರದ ಅನುಮೋದನೆಗಾಗಿ, ಆ ಸಂಸ್ಥೆಯಲ್ಲಿ ನಿಯೋಜಿತರಾದ ಅಥವಾ ಅದರಲ್ಲಿ ಹಾಜರಾಗುತ್ತಿರುವ ವ್ಯಕ್ತಿಗಳ ಅಥವಾ ಆ ಸಂಸ್ಥೆಯಲ್ಲಿನ ನಿವಾಸಿಗಳ ಉದ್ಯೋಗದ ವೇಳೆಗಳು, ಊಟಕ್ಕಾಗಿ ಮಧ್ಯಂತರಗಳು ಮತ್ತು ರಜಾ ದಿವಸಗಳ ವಿನಿಯಮನಕ್ಕಾಗಿ ಕಾರ್ಯಯೋಜನೆಯನ್ನು ಸಲ್ಲಿಸಿದ ಹೊರತು ಮತ್ತು ಆ ಯೋಜನೆಯ ಉಪಬಂಧಗಳು ಈ ಅಧಿನಿಯಮದ ಸಂವಾದಿ ಉಪಬಂಧಗಳಿಗಿಂತ ಕಡಿಮೆ ಏನಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದ ಹೊರತು ಮಂಜೂರು ಮಾಡತಕ್ಕದ್ದಲ್ಲ.

**87. ಅಪಾಯಕಾರಿ ಕಾರ್ಯಾಚರಣೆಗಳು.–** ಕಾರ್ಖಾನೆಯಲ್ಲಿ ನಡೆಸುತ್ತಿರುವ ಯಾವುದೇ ತಯಾರಿಕಾ ಪ್ರಕ್ರಿಯೆಯು ಅಥವಾ ಕಾರ್ಯಾಚರಣೆಯು, ಅದರಲ್ಲಿ ನಿಯೋಜಿತರಾಗಿರುವ ಯಾರೇ ವ್ಯಕ್ತಿಗಳನ್ನು ದೈಹಿಕ ಕ್ಷತಿಯ, ವಿಷ ಸೇವನೆಯ ಅಥವಾ ರೋಗದ ತೀವ್ರ ಅಪಾಯಕ್ಕೆ ಈಡು ಮಾಡುತ್ತದೆ ಎಂದು ರಾಜ್ಯ ಸರ್ಕಾರವು ಅಭಿಪ್ರಾಯಪಟ್ಟರೆ, ತಯಾರಿಕಾ ಪ್ರಕ್ರಿಯೆಯನ್ನು ಅಥವಾ ಕಾರ್ಯಾಚರಣೆಯನ್ನು ನಡೆಸುತ್ತಿರುವಂಥ ಯಾವುದೇ ಕಾರ್ಖಾನೆಗೆ ಅಥವಾ ಯಾವುದೇ ವರ್ಗದ ಅಥವಾ ವರ್ಣನೆಯ ಕಾರ್ಖಾನೆಗಳಿಗೆ ಅನ್ವಯವಾಗುವ ಹಾಗೆ,–

(ಎ) ಆ ತಯಾರಿಕಾ ಪ್ರಕ್ರಿಯೆಯನ್ನು ಅಥವಾ ಕಾರ್ಯಾಚರಣೆಯನ್ನು ನಿರ್ದಿಷ್ಟಪಡಿಸಿ ಮತ್ತು ಅದು ಅಪಾಯಕಾರಿಯೆಂದು ಘೋಷಿಸಿ;

(ಬಿ) ಆ ತಯಾರಿಕಾ ಪ್ರಕ್ರಿಯೆಯನ್ನು ಅಥವಾ ಕಾರ್ಯಾಚರಣೆಯಲ್ಲಿ ಮಹಿಳೆಯರ, ತರುಣ/ತರುಣಿಯ ಅಥವಾ ಬಾಲಕ/ಬಾಲಕಿಯ ನಿಯೋಜನೆಯನ್ನು ನಿಷೇಧಿಸಿ ಅಥವಾ ನಿರ್ಬಂಧಿಸಿ;

(ಸಿ) ಆ ತಯಾರಿಕಾ ಪ್ರಕ್ರಿಯೆಯಲ್ಲಿ ಅಥವಾ ಕಾರ್ಯಾಚರಣೆಯಲ್ಲಿ ನಿಯೋಜಿತರಾದ, ಅಥವಾ ನಿಯೋಜಿತರಾಗಬಯಸುವ ವ್ಯಕ್ತಿಗಳ ನಿಯತಕಾಲಿಕ ವೈದ್ಯಕೀಯ ಪರೀಕ್ಷೆಗಾಗಿ ಉಪಬಂಧಿಸಿ ಮತ್ತು ಅಂಥ ನಿಯೋಜನೆಗೆ ಯೋಗ್ಯರೆಂದು ಪ್ರಮಾಣೀಕರಿಸಿರದ ವ್ಯಕ್ತಿಗಳ ನಿಯೋಜನೆಯನ್ನು ನಿಷೇಧಿಸಿ ಮತ್ತು ಅಂಥ ವೈದ್ಯಕೀಯ ಪರೀಕ್ಷೆಗಾಗಿ ಫೀಜುಗಳನ್ನು ಕಾರ್ಖಾನೆಯ ಅಧಿಭೋಗದಾರನು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿ;

(ಡಿ) ಆ ತಯಾರಿಕಾ ಪ್ರಕ್ರಿಯೆಯಲ್ಲಿ ಅಥವಾ ಕಾರ್ಯಾಚರಣೆಯಲ್ಲಿ ನಿಯೋಜಿತರಾದ ಅಥವಾ ಅದನ್ನು ನಡೆಸುತ್ತಿರುವ ಸ್ಥಳಗಳ ಅಕ್ಕಪಕ್ಕದಲ್ಲಿ ಇರುವ ಎಲ್ಲ ವ್ಯಕ್ತಿಗಳ ರಕ್ಷಣೆಗಾಗಿ ಉಪಬಂಧಿಸಿ;

(ಇ) ಆ ತಯಾರಿಕಾ ಪ್ರಕ್ರಿಯೆಗೆ ಅಥವಾ ಕಾರ್ಯಾಚರಣೆಗೆ ಸಂಬಂಧಿಸಿದ ಯಾವುದೇ ನಿರ್ದಿಷ್ಟಪಡಿಸಿದ ಸಾಮಗ್ರಿಗಳನ್ನು ಮತ್ತು ಪ್ರಕ್ರಿಯೆಗಳನ್ನು ನಿಷೇಧಿಸಿ, ನಿರ್ಬಂಧಿಸಿ ಅಥವಾ ನಿಯಂತ್ರಿಸಿ;

(ಎಫ್) ಹೆಚ್ಚಿನ ಕ್ಷೇಮಾಭಿವೃದ್ಧಿ ಸೌಕರ್ಯಗಳು ಮತ್ತು ನೈರ್ಮಲ್ಯ ಸೌಲಭ್ಯಗಳು ಮತ್ತು ರಕ್ಷಕ ಸಾಧನ-ಸಾಮಗ್ರಿ ಮತ್ತು ಉಡುಪುಗಳ ಸರಬರಾಜನ್ನು ಅಗತ್ಯಪಡಿಸಿ ಮತ್ತು ಆ ತಯಾರಿಕಾ ಪ್ರಕ್ರಿಯೆಯ ಅಥವಾ ಕಾರ್ಯಾಚರಣೆಯ ಅಪಾಯಕಾರಿ ಸ್ವರೂಪವನ್ನು ಗಮನಿಸಿ ಅವುಗಳ ಗುಣಮಟ್ಟಗಳನ್ನು ಗೊತ್ತುಪಡಿಸಿ

– ರಾಜ್ಯ ಸರ್ಕಾರವು, ನಿಯಮಗಳನ್ನು ರಚಿಸಬಹುದು.

**87ಎ. ಗಂಭೀರ ಅಪಾಯದ ಕಾರಣದಿಂದ ನಿಯೋಜನೆಯನ್ನು ನಿಷೇಧಿಸಲು ಅಧಿಕಾರ.**– (1) ಕಾರ್ಖಾನೆಯಲ್ಲಿನ ಅಥವಾ ಅದರ ಭಾಗದಲ್ಲಿನ ಸ್ಥಿತಿಗತಿಗಳು ಅದರಲ್ಲಿ ನಿಯೋಜನೆಗೊಂಡ ವ್ಯಕ್ತಿಗಳಿಗೆ ಅಥವಾ ಆಸುಪಾಸಿನ ಸಾರ್ವಜನಿಕರಿಗೆ ಗಾಯ ಅಥವಾ ಮರಣದ ರೂಪದಲ್ಲಿ ತೀವ್ರ ಅಪಾಯ ಉಂಟುಮಾಡುವವುಗಳಾಗಿವೆಯೆಂದು ಇನ್ಸ್‌ಪೆಕ್ಟರ್‌ನಿಗೆ ಕಂಡುಬಂದಲ್ಲಿ, ಅವನು ಲಿಖಿತ ಆದೇಶದ ಮೂಲಕ, ಅವನು ಯಾವ ವಿವರಗಳ ಮೇರೆಗೆ ಕಾರ್ಖಾನೆಯು ಅಥವಾ ಅದರ ಭಾಗವು ತೀವ್ರ ಅಪಾಯಕ್ಕೆ ಕಾರಣವಾಗುವುದೆಂದು ಅವನು ಭಾವಿಸುವನೋ ಆ ವಿವರಗಳನ್ನು ಕಾರ್ಖಾನೆಯ ಅಧಿಭೋಗದಾರನಿಗೆ ತಿಳಿಸತಕ್ಕದ್ದು ಮತ್ತು ಅಂಥ ಅಧಿಭೋಗದಾರನು ಅಪಾಯವನ್ನು ನಿವಾರಿಸುವವರೆಗೆ ಕಾರ್ಖಾನೆಯಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಗತ್ಯ ಕೆಲಸವನ್ನು ನಿರ್ವಹಿಸುವುದಕ್ಕೆ ಅವಶ್ಯಕವಾದ ಕನಿಷ್ಠ ಸಂಖ್ಯೆಯ ವ್ಯಕ್ತಿಗಳ ಹೊರತು ಯಾರೇ ವ್ಯಕ್ತಿಯನ್ನು ನಿಯೋಜಿಸುವುದನ್ನು ನಿಷೇಧಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಇನ್ಸ್‌ಪೆಕ್ಟರ್‌ನು ಹೊರಡಿಸಿದ ಯಾವುದೇ ಆದೇಶವು, ಚೀಫ್ ಇನ್ಸ್‌ಪೆಕ್ಟರ್‌ನು ತರುವಾಯದ ಆದೇಶದ ಮೂಲಕ ಅವಧಿಯನ್ನು ವಿಸ್ತರಿಸುವವರೆಗೆ ಮೂರು ದಿವಸಗಳ ಅವಧಿಯವರೆಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗಿನ ಇನ್ಸ್‌ಪೆಕ್ಟರ್‌ನ ಮತ್ತು (2)ನೇ ಉಪಪ್ರಕರಣದ ಮೇರೆಗಿನ ಚೀಫ್ ಇನ್ಸ್‌ಪೆಕ್ಟರ್‌ನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಹಕ್ಕನ್ನು ಹೊಂದಿರತಕ್ಕದ್ದು.

(4) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಆದೇಶದಿಂದ ಯಾರ ನಿಯೋಜನೆಯು ಬಾಧಿತವಾಗಿದೆಯೋ ಆ ಯಾರೇ ವ್ಯಕ್ತಿಯು ಮಜೂರಿಗಳು ಮತ್ತು ಇತರ ಪ್ರಯೋಜನೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಮತ್ತು ನಿಯಮಿಸಿದ ರೀತಿಯಲ್ಲಿ ಅವನಿಗೆ ಬದಲಿ ಉದ್ಯೋಗ ಒದಗಿಸುವುದು ಅಧಿಭೋಗದಾರನ ಕರ್ತವ್ಯವಾಗಿರತಕ್ಕದ್ದು.

(5) ಉಪಪ್ರಕರಣ (4)ರ ಉಪಬಂಧಗಳು, ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಮೇರೆಗಿನ ಪಕ್ಷಕಾರರ ಹಕ್ಕುಗಳಿಗೆ ಪ್ರತಿಕೂಲವಾಗಿರತಕ್ಕದ್ದಲ್ಲ.

**88. ಕೆಲವು ಅಪಘಾತಗಳ ಬಗ್ಗೆ ನೋಟೀಸು.**– (1) ಯಾವುದೇ ಕಾರ್ಖಾನೆಯಲ್ಲಿ ಮರಣವನ್ನುಂಟುಮಾಡುವಂಥ ಅಥವಾ ಯಾವ ದೈಹಿಕ ಕ್ಷತಿಯ ಕಾರಣದಿಂದಾಗಿ ಕ್ಷತಿಗೊಂಡ ವ್ಯಕ್ತಿಯು ಅಪಘಾತದ ನಿಕಟೋತ್ತರದಲ್ಲಿ ನಲವತ್ತೆಂಟು ಗಂಟೆಗಳು ಅಥವಾ ಅದಕ್ಕಿಂತಲೂ ಹೆಚ್ಚಿನ ಅವಧಿಗೆ ಕೆಲಸ ಮಾಡುವುದಕ್ಕೆ ಆಗದಂಥ ಅಥವಾ ಈ ಬಗ್ಗೆ ನಿಯಮಿಸಬಹುದಾದಂತಹ ಸ್ವರೂಪದ ಯಾವುದೇ ದೈಹಿಕ ಕ್ಷತಿಯನ್ನುಂಟು ಮಾಡುವಂಥ ಅಪಘಾತವು ಸಂಭವಿಸಿದ್ದರೆ, ಆ ಕಾರ್ಖಾನೆಯ ವ್ಯವಸ್ಥಾಪಕನು ಅದರ ಬಗ್ಗೆ ನೋಟೀಸನ್ನು ನಿಯಮಿಸಬಹುದಾದ ಪ್ರಾಧಿಕಾರಿಗಳಿಗೆ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಕಳುಹಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಕೊಟ್ಟ ನೋಟೀಸು ಮರಣವನ್ನುಂಟು ಮಾಡುವ ಅಪಘಾತಕ್ಕೆ ಸಂಬಂಧಪಟ್ಟಿದ್ದರೆ, ಯಾರಿಗೆ ಆ ನೋಟೀಸನ್ನು ಕಳುಹಿಸಲಾಗಿದೆಯೋ ಆ ಪ್ರಾಧಿಕಾರಿಯು, ಆ ನೋಟೀಸನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಆ ಘಟನೆಯ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದು ಅಥವಾ ಯಾರೇ ಅಂಥ ಪ್ರಾಧಿಕಾರಿಯು ಇನ್ಸ್‌ಪೆಕ್ಟರ್‌ನಾಗಿಲ್ಲದಿದ್ದರೆ ಸದರಿ ಅವಧಿಯೊಳಗೆ ಇನ್ಸ್‌ಪೆಕ್ಟರ್‌ನಿಂದ ವಿಚಾರಣೆಯನ್ನು ಮಾಡಿಸತಕ್ಕದ್ದು.

(3) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗಿನ ವಿಚಾರಣೆಗಳಲ್ಲಿನ ಪ್ರಕ್ರಿಯೆಯನ್ನು ವಿನಿಯಮಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

**88ಎ. ಕೆಲವು ಅಪಾಯಕಾರಿ ಘಟನೆಗಳ ಬಗ್ಗೆ ನೋಟೀಸು.**– ಕಾರ್ಖಾನೆಯಲ್ಲಿ ನಿಯಮಿಸಬಹುದಾದಂಥ ಸ್ವರೂಪದ ಯಾವುದೇ ಅಪಾಯಕಾರಿ ಘಟನೆಯು, ಅದು ಯಾವುದೇ ದೈಹಿಕ ಕ್ಷತಿಯನ್ನು ಅಥವಾ ಅಸಮರ್ಥತೆಯನ್ನುಂಟು ಮಾಡಿರಲಿ ಅಥವಾ ಮಾಡಿಲ್ಲದಿರಲಿ ಸಂಭವಿಸಿದ್ದರೆ, ಆ ಕಾರ್ಖಾನೆಯ ವ್ಯವಸ್ಥಾಪಕನು ಅದರ ಬಗ್ಗೆ ನೋಟೀಸನ್ನು ನಿಯಮಿಸಬಹುದಾದಂಥ ಪ್ರಾಧಿಕಾರಿಗಳಿಗೆ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಕಳುಹಿಸತಕ್ಕದ್ದು.

**89. ಕೆಲವು ರೋಗಗಳ ಬಗ್ಗೆ ನೋಟೀಸು.**– (1) ಕಾರ್ಖಾನೆಯಲ್ಲಿನ ಯಾರೇ ಕೆಲಸಗಾರನಿಗೆ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರೋಗವು ತಗುಲಿದರೆ, ಆ ಕಾರ್ಖಾನೆಯ ವ್ಯವಸ್ಥಾಪಕನು ಅದರ ಬಗ್ಗೆ ನೋಟೀಸನ್ನು ನಿಯಮಿಸಬಹುದಾದಂಥ ಪ್ರಾಧಿಕಾರಿಗಳಿಗೆ ಮತ್ತು ಅಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಕಳುಹಿಸತಕ್ಕದ್ದು.

(2) ಯಾರೇ ವೈದ್ಯಕೀಯ ವೃತ್ತಿಗನು ಕಾರ್ಖಾನೆಯಲ್ಲಿ ನಿಯೋಜಿತನಾಗಿರುವ ಅಥವಾ ನಿಯೋಜಿತನಾಗಿದ್ದ ವ್ಯಕ್ತಿಗೆ ಚಿಕಿತ್ಸೆ ಮಾಡಿದರೆ ಮತ್ತು ಆ ವ್ಯಕ್ತಿಯು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ರೋಗದಿಂದ ನರಳುತ್ತಿದ್ದರೆ ಅಥವಾ ನರಳುತ್ತಿರುವನೆಂದು ವೈದ್ಯಕೀಯ ವೃತ್ತಿಗನು ನಂಬಿದರೆ ಆ ವೈದ್ಯಕೀಯ ವೃತ್ತಿಗನು ವಿಳಂಬವಿಲ್ಲದೆ ಚೀಫ್ ಇನ್ಸ್‌ಪೆಕ್ಟರ್‌ನ ಕಚೇರಿಗೆ,-

(ಎ) ರೋಗಿಯ ಹೆಸರು ಮತ್ತು ಅವನ ಪೂರ್ಣ ಅಂಚೆ ವಿಳಾಸ;

(ಬಿ) ರೋಗಿಯು ಯಾವ ರೋಗದಿಂದ ನರಳುತ್ತಿದ್ದಾನೆಂದು ಅವನು ನಂಬಿರುವನೋ ಆ ರೋಗ; ಮತ್ತು

(ಸಿ) ರೋಗಿಯು ನಿಯೋಜಿತನಾಗಿರುವ ಅಥವಾ ಕೊನೆಯಲ್ಲಿ ನಿಯೋಜಿತನಾಗಿದ್ದಂಥ ಕಾರ್ಖಾನೆಯ ಹೆಸರು ಮತ್ತು ವಿಳಾಸ

– ಇವುಗಳನ್ನು ತಿಳಿಸಿರುವ ವರದಿಯನ್ನು ಕಳುಹಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗಿನ ವರದಿಯು, ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ರೋಗದಿಂದ ಆ ವ್ಯಕ್ತಿಯು ನರಳುತ್ತಿದ್ದಾನೆಂದು ಪ್ರಮಾಣೀಕರಿಸಿದ ಶಸ್ತ್ರಚಿಕಿತ್ಸಕನ ಪ್ರಮಾಣಪತ್ರದಿಂದ ಅಥವಾ ಅನ್ಯಥಾ ಚೀಫ್ ಇನ್ಸ್‌ಪೆಕ್ಟರ್‌ನಿಗೆ ಮನದಟ್ಟಾಗುವಂತೆ ಸ್ಥಿರಪಟ್ಟರೆ, ಅವನು ನಿಯಮಿಸಬಹುದಾದಂಥ ಫೀಜನ್ನು ಆ ವೈದ್ಯಕೀಯ ವೃತ್ತಿಗನಿಗೆ ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ಫೀಜು ಯಾವ ಕಾರ್ಖಾನೆಯಲ್ಲಿ ವ್ಯಕ್ತಿಗೆ ಆ ರೋಗವು ತಗುಲಿತ್ತೋ ಆ ಕಾರ್ಖಾನೆಯ ಅಧಿಭೋಗದಾರನಿಂದ ಭೂಕಂದಾಯದ ಬಾಕಿಯಂತೆ ವಸೂಲು ಮಾಡಬಹುದಾಗಿರುವಂಥದ್ದು ಆಗಿರತಕ್ಕದ್ದು.

(4) ಯಾರೇ ವೈದ್ಯಕೀಯ ವೃತ್ತಿಗನು (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(5) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಮೂರನೇ ಅನುಸೂಚಿಗೆ ಹೆಚ್ಚಿನದನ್ನು ಸೇರಿಸಬಹುದು ಅಥವಾ ಅದನ್ನು ವ್ಯತ್ಯಾಸಗೊಳಿಸಬಹುದು ಮತ್ತು ಅಂಥ ಯಾವುದನ್ನಾದರೂ ಹೆಚ್ಚಿಗೆ ಸೇರಿಸಿರುವುದು ಅಥವಾ ವ್ಯತ್ಯಾಸವು ಅದನ್ನು ಈ ಅಧಿನಿಯಮದ ಮೂಲಕ ಮಾಡಿದ್ದಿದ್ದರೆ ಹೇಗೆ ಪರಿಣಾಮಕಾರಿಯಾಗುತ್ತಿತ್ತೋ ಹಾಗೆಯೇ ಪರಿಣಾಮಕಾರಿಯಾಗಿರತಕ್ಕದ್ದು.

**90. ಅಪಘಾತ ಅಥವಾ ರೋಗ ಪ್ರಕರಣದ ಬಗ್ಗೆ ವಿಚಾರಣೆಗೆ ನಿರ್ದೇಶಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು ಕಾರ್ಖಾನೆಯಲ್ಲಿ ಸಂಭವಿಸಿದ ಯಾವುದೇ ಅಪಘಾತದ ಕಾರಣಗಳ ಬಗ್ಗೆ ಅಥವಾ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ರೋಗವು ಕಾರ್ಖಾನೆಯಲ್ಲಿ ತಗುಲಿದೆಯೇ ಅಥವಾ ತಗುಲಿದೆ ಎಂಬ ಶಂಕೆಗೆ ಆಸ್ಪದ ಕೊಟ್ಟಿರುವ ಯಾವುದೇ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಸಕ್ಷಮ ವ್ಯಕ್ತಿಯನ್ನು ನೇಮಕ ಮಾಡುವುದು ವಿಹಿತವೆಂದು ಅದು ಭಾವಿಸಿದರೆ ಅದು ಹಾಗೆ ಮಾಡಬಹುದು ಮತ್ತು ಅಂಥ ವಿಚಾರಣೆಯಲ್ಲಿ ನ್ಯಾಯ ಸಲಹೆಗಾರರಾಗಿ ಕಾರ್ಯನಿರ್ವಹಿಸಲು ಕಾನೂನಿನ ಜ್ಞಾನವನ್ನು ಅಥವಾ ವಿಶೇಷ ಜ್ಞಾನವನ್ನು ಹೊಂದಿರುವ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳನ್ನು ಸಹ ನೇಮಕ ಮಾಡಬಹುದು.

(2) ಈ ಪ್ರಕರಣದ ಮೇರೆಗೆ ವಿಚಾರಣೆ ನಡೆಸಲು ನೇಮಕಗೊಂಡ ವ್ಯಕ್ತಿಯು, ಸಾಕ್ಷಿದಾರರ ಹಾಜರಾತಿಯನ್ನು ಜಾರಿಗೊಳಿಸುವ ಮತ್ತು ದಸ್ತಾವೇಜುಗಳನ್ನು ಮತ್ತು ಮಹತ್ವದ ವಸ್ತುಗಳನ್ನು ಹಾಜರುಪಡಿಸುವುದನ್ನು ಒತ್ತಾಯಪಡಿಸುವ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ವಿಚಾರಣೆಯ ಉದ್ದೇಶಗಳಿಗಾಗಿ ಅವಶ್ಯವಿರಬಹುದಾದಷ್ಟರಮಟ್ಟಿಗೆ ಈ ಅಧಿನಿಯಮದ ಮೇರೆಗೆ ಇನ್ಸ್‌ಪೆಕ್ಟರ್‌ನ ಯಾವುದೇ ಅಧಿಕಾರವನ್ನು ಕೂಡ ಚಲಾಯಿಸಬಹುದು ಮತ್ತು ವಿಚಾರಣೆ ನಡೆಸುತ್ತಿರುವ ವ್ಯಕ್ತಿಯು, ಯಾವುದೇ ಮಾಹಿತಿಯನ್ನು ಒದಗಿಸಲು ಯಾವ ವ್ಯಕ್ತಿಯನ್ನು ಅಗತ್ಯಪಡಿಸುತ್ತಾನೋ ಆ ಪ್ರತಿಯೊಬ್ಬ ವ್ಯಕ್ತಿಯು, ಭಾರತ ದಂಡ ಸಂಹಿತೆ, 1860 (1860ರ 45)ರ 176ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಹಾಗೆ ಮಾಡಲು ಕಾನೂನುಸಮ್ಮತವಾಗಿ ಬದ್ಧನಾಗಿರುವುದಾಗಿ ಭಾವಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುತ್ತಿರುವ ವ್ಯಕ್ತಿಯು, ರಾಜ್ಯ ಸರ್ಕಾರಕ್ಕೆ ಅಪಘಾತದ ಅಥವಾ ಸಂದರ್ಭಾನುಸಾರ ರೋಗದ ಕಾರಣಗಳನ್ನು ಮತ್ತು ಯಾವುವೇ ಸಹವರ್ತಿ ಸಂದರ್ಭಗಳನ್ನು ವಿವರಿಸಿ ಮತ್ತು ಅವನು ಅಥವಾ ಯಾರೇ ನ್ಯಾಯ ಸಲಹೆಗಾರರು ಹೇಳುವುದು ಸೂಕ್ತವೆಂದು ತಾವು ಭಾವಿಸಬಹುದಾದಂಥ ಯಾವುವೇ ಅಭಿಪ್ರಾಯೋಕ್ತಿಗಳನ್ನು ಸೇರಿಸಿ ವರದಿ ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ವರದಿಯನ್ನು ಅಥವಾ ಅದರ ಯಾವುದೇ ಉದ್ಧೃತ ಭಾಗವನ್ನು ಪ್ರಕಟಪಡಿಸುವುದು ಸೂಕ್ತವೆಂದು ರಾಜ್ಯ ಸರ್ಕಾರವು ಯೋಚಿಸಿದರೆ ಅದು ಹಾಗೆ ಮಾಡಬಹುದು.

(5) ಈ ಪ್ರಕರಣದ ಮೇರೆಗಿನ ವಿಚಾರಣೆಗಳಲ್ಲಿನ ಪ್ರಕ್ರಿಯೆಯನ್ನು ವಿನಿಯಮನ ಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರವು ನಿಯಮಗಳನ್ನು ರಚಿಸಬಹುದು.

**91. ಮಾದರಿಗಳನ್ನು ತೆಗೆದುಕೊಳ್ಳಲು ಅಧಿಕಾರ.–** (1) ಇನ್ಸ್‌ಪೆಕ್ಟರ್‌ನು ಕಾರ್ಖಾನೆಯ ಸಾಮಾನ್ಯ ಕೆಲಸದ ವೇಳೆಗಳಲ್ಲಿ ಯಾವುದೇ ಕಾಲದಲ್ಲಿ ಆ ಕಾರ್ಖಾನೆಯ ಅಧಿಭೋಗದಾರನಿಗೆ ಅಥವಾ ವ್ಯವಸ್ಥಾಪಕನಿಗೆ ಅಥವಾ ತತ್ಕಾಲದಲ್ಲಿ ಆ ಕಾರ್ಖಾನೆಯ ಪ್ರಭಾರದಲ್ಲಿ ಇರುವುದಾಗಿ ತಾತ್ಪರ್ಯವಾಗುವ ಇತರ ವ್ಯಕ್ತಿಗೆ ತಿಳಿಸಿದ ತರುವಾಯ ಆ ಕಾರ್ಖಾನೆಯಲ್ಲಿ ಬಳಸಿದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ವಸ್ತುವಿನ ಬಳಕೆಯನ್ನು,-

(ಎ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸಿ ಮಾಡಲಾಗಿದೆಯೆಂದು ಆ ಇನ್ಸ್‌ಪೆಕ್ಟರ್‌ನು ನಂಬಿದರೆ; ಅಥವಾ

(ಬಿ) ಅಂಥ ವಸ್ತುವಿನ ಬಳಕೆಯಿಂದ ಆ ಕಾರ್ಖಾನೆಯ ಕೆಲಸಗಾರರಿಗೆ ದೈಹಿಕ ಕ್ಷತಿ ಅಥವಾ ಅವರ ಆರೋಗ್ಯಕ್ಕೆ ಹಾನಿಯಾಗುವ ಸಂಭವವಿದೆಯೆಂದು ಇನ್ಸ್‌ಪೆಕ್ಟರ್‌ನು ಅಭಿಪ್ರಾಯಪಟ್ಟರೆ,

– ಆ ವಸ್ತುವಿನ ಸಾಕಷ್ಟು ಮಾದರಿಯನ್ನು ಇಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ತೆಗೆದುಕೊಳ್ಳಬಹುದು.

(2) ಉಪಪ್ರಕರಣ (1)ರ ಮೇರೆಗೆ ಇನ್ಸ್‌ಪೆಕ್ಟರ್‌ನು ಮಾದರಿಯನ್ನು ತೆಗೆದುಕೊಂಡಿದ್ದರೆ, ಅವನು, ಆ ಉಪಪ್ರಕರಣದ ಮೇರೆಗೆ ಯಾವ ವ್ಯಕ್ತಿಗೆ ತಿಳಿಸಲಾಗಿದೆಯೋ ಆ ವ್ಯಕ್ತಿಯು ಉದ್ದೇಶಪೂರ್ವಕವಾಗಿ ತಾನಾಗಿಯೇ ಗೈರು ಹಾಜರಾಗಿದ್ದಾಗ ಹೊರತು, ಆ ವ್ಯಕ್ತಿಯ ಸಮಕ್ಷಮದಲ್ಲಿ ಆ ಮಾದರಿಯನ್ನು ಮೂರು ಭಾಗಗಳಾಗಿ ವಿಭಾಗಿಸತಕ್ಕದ್ದು ಮತ್ತು ಅವುಗಳಿಗೆ ಸುಸ್ಪಷ್ಟವಾಗಿ ಮೊಹರು ಮಾಡತಕ್ಕದ್ದು ಮತ್ತು ಸೂಕ್ತವಾಗಿ ಗುರುತು ಹಾಕತಕ್ಕದ್ದು ಮತ್ತು ಅವುಗಳಿಗೆ ಆ ವ್ಯಕ್ತಿಯು ತನ್ನದೇ ಆದ ಮೊಹರನ್ನು ಹಾಕಲು ಮತ್ತು ಗುರುತನ್ನು ಸೇರಿಸಲು ಅವನಿಗೆ ಅನುಮತಿಸತಕ್ಕದ್ದು.

(3) ಈ ಹಿಂದೆ ಹೇಳಿದಂತೆ, ಯಾವ ವ್ಯಕ್ತಿಗೆ ತಿಳಿಸಲಾಗಿದೆಯೋ ಆ ವ್ಯಕ್ತಿಯು, ಇನ್ಸ್‌ಪೆಕ್ಟರ್‌ನು ಈ ಪ್ರಕರಣದ ಮೇರೆಗೆ ಮಾದರಿಯಾಗಿ ತೆಗೆದುಕೊಂಡ ವಸ್ತುವನ್ನು ವಿಭಾಗಿಸಲು, ಮೊಹರು ಮಾಡಲು ಮತ್ತು ಗುರುತು ಹಾಕಲು ಬೇಕಾದ ಸಾಧನ ಸಾಮಗ್ರಿಗಳನ್ನು ಒದಗಿಸಬೇಕೆಂದು ಅಗತ್ಯಪಡಿಸಿದರೆ, ಆ ಸಾಧನ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

(4) ಇನ್ಸ್‌ಪೆಕ್ಟರ್‌ನು,–

(ಎ) ಉಪಪ್ರಕರಣ (1)ರ ಮೇರೆಗೆ ಯಾವ ವ್ಯಕ್ತಿಗೆ ತಿಳಿಸಲಾಗಿದೆಯೋ ಆ ವ್ಯಕ್ತಿಗೆ ಮಾದರಿಯ ಒಂದು ಭಾಗವನ್ನು ತಕ್ಷಣವೇ ಕೊಡತಕ್ಕದ್ದು;

(ಬಿ) ಎರಡನೆಯ ಭಾಗವನ್ನು ವಿಶ್ಲೇಷಣೆಗಾಗಿ ಮತ್ತು ಅದರ ಬಗ್ಗೆ ವರದಿಯನ್ನು ಸಲ್ಲಿಸುವುದಕ್ಕಾಗಿ ಸರ್ಕಾರಿ ವಿಶ್ಲೇಷಕನಿಗೆ ತಕ್ಷಣವೇ ಕಳುಹಿಸತಕ್ಕದ್ದು;

(ಸಿ) ಮೂರನೆಯ ಭಾಗವನ್ನು ಯಾವ ನ್ಯಾಯಾಲಯದಲ್ಲಿ ಆ ವಸ್ತುವಿಗೆ ಸಂಬಂಧಿಸಿದಂತೆ ಯಾವುವಾದರೂ ವ್ಯವಹರಣೆಗಳನ್ನು ಹೂಡಿದ್ದರೆ, ಆ ನ್ಯಾಯಾಲಯಕ್ಕೆ ಹಾಜರುಪಡಿಸುವುದಕ್ಕಾಗಿ ಇಟ್ಟುಕೊಂಡಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ ಮತ್ತು ವರದಿ ಸಲ್ಲಿಸಲು ಯಾರೇ ಸರ್ಕಾರಿ ವಿಶ್ಲೇಷಕನಿಗೆ ಒಪ್ಪಿಸಿದ ಯಾವುದೇ ವಸ್ತುವಿನ ಬಗ್ಗೆ ಅವನು ಸಹಿ ಮಾಡಿರುವ, ವರದಿಯಾಗಿರುವುದಾಗಿ ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಆ ವಸ್ತುವಿಗೆ ಸಂಬಂಧಿಸಿದಂತೆ ಹೂಡಿದ ಯಾವುದೇ ವ್ಯವಹರಣೆಗಳಲ್ಲಿ ಸಾಕ್ಷ್ಯವಾಗಿ ಉಪಯೋಗಿಸಬಹುದು.

**91ಎ. ಸುರಕ್ಷತೆ ಮತ್ತು ವೃತ್ತೀಯ ಆರೋಗ್ಯ ಸಮೀಕ್ಷೆಗಳು.–** (1) ಚೀಫ್ ಇನ್ಸ್‌ಪೆಕ್ಟರ್‌ನು ಅಥವಾ ಕಾರ್ಖಾನೆಯ ಸಲಹಾ ಸೇವೆ ಮತ್ತು ಕಾರ್ಮಿಕ ಸಂಸ್ಥೆಗಳ ಮಹಾ ನಿರ್ದೇಶಕನು ಅಥವಾ ಭಾರತ ಸರ್ಕಾರದ ಆರೋಗ್ಯ ಸೇವೆಗಳ ಮಹಾ ನಿರ್ದೇಶಕನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಥವಾ ಚೀಫ್ ಇನ್ಸ್‌ಪೆಕ್ಟರ್‌ನು ಅಥವಾ ಕಾರ್ಖಾನೆ ಸಲಹಾ ಸೇವೆ ಮತ್ತು ಕಾರ್ಮಿಕ ಸಂಸ್ಥೆಗಳ ಮಹಾ ನಿರ್ದೇಶಕನು ಅಥವಾ ಆರೋಗ್ಯ ಸೇವೆಗಳ ಮಹಾ ನಿರ್ದೇಶಕನು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಕಾರ್ಖಾನೆಯ ಸಾಮಾನ್ಯ ಕೆಲಸದ ವೇಳೆಗಳಲ್ಲಿ ಯಾವುದೇ ಕಾಲದಲ್ಲಿ ಅಥವಾ ಅವಶ್ಯವೆಂದು ಅವನಿಗೆ ಕಂಡುಬರುವ ಯಾವುದೇ ಇತರ ಕಾಲದಲ್ಲಿ ಕಾರ್ಖಾನೆಯ ಅಧಿಭೋಗದಾರನಿಗೆ ಅಥವಾ ವ್ಯವಸ್ಥಾಪಕನಿಗೆ ಅಥವಾ ತತ್ಕಾಲದಲ್ಲಿ ಆ ಕಾರ್ಖಾನೆಯ ಪ್ರಭಾರದಲ್ಲಿ ಇರುವುದಾಗಿ ತಾತ್ಪರ್ಯವಾಗುವ ಯಾರೇ ಇತರ ವ್ಯಕ್ತಿಗೆ ಲಿಖಿತ ನೋಟೀಸನ್ನು ಕೊಟ್ಟ ತರುವಾಯ, ಸುರಕ್ಷತೆ ಮತ್ತು ವೃತ್ತೀಯ ಆರೋಗ್ಯ ಸಮೀಕ್ಷೆಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಅಥವಾ ಇತರ ವ್ಯಕ್ತಿಯು ಸ್ಥಿರಯಂತ್ರದ ಮತ್ತು ಯಂತ್ರ ಸಾಮಗ್ರಿಯ ಪರೀಕ್ಷೆಗೆ ಮತ್ತು ಉಪಪರೀಕ್ಷೆಗೆ ಮತ್ತು ಸಮೀಕ್ಷೆಗೆ ಸುಸಂಗತವಾದ ಮಾದರಿಗಳ ಮತ್ತು ಇತರ ದತ್ತಾಂಶ ಸಂಗ್ರಹಣೆಗಾಗಿ ಸೌಲಭ್ಯಗಳನ್ನೂ ಒಳಗೊಂಡಂತೆ ಎಲ್ಲ ಸೌಲಭ್ಯಗಳನ್ನು ಒದಗಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಸಮೀಕ್ಷೆಗಳು ಸುಗಮವಾಗಿ ನಡೆಯಲೆಂಬ ಉದ್ದೇಶಕ್ಕಾಗಿ ಪ್ರತಿಯೊಬ್ಬ ಕೆಲಸಗಾರನು, ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿಕೊಳ್ಳಲು ಹಾಜರಾಗತಕ್ಕದ್ದೆಂದು ಮತ್ತು ಅವನ ಬಳಿಯಿರುವ ಮತ್ತು ಆ ಸಮೀಕ್ಷೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಯನ್ನು ಒದಗಿಸತಕ್ಕದ್ದೆಂದು ಆ ಸಮೀಕ್ಷೆಯನ್ನು ನಡೆಸುತ್ತಿರುವ ವ್ಯಕ್ತಿಯು ಅಗತ್ಯಪಡಿಸಿದರೆ ವೈದ್ಯಕೀಯ ಪರೀಕ್ಷೆಗೆ ಹಾಜರಾಗತಕ್ಕದ್ದು ಮತ್ತು ಎಲ್ಲ ಮಾಹಿತಿಯನ್ನು ಒದಗಿಸತಕ್ಕದ್ದು.

(3) ಉಪಪ್ರಕರಣ (2)ರ ಮೇರೆಗೆ ವೈದ್ಯಕೀಯ ಪರೀಕ್ಷೆಯನ್ನು ಮಾಡಿಸಿಕೊಳ್ಳಲು ಅಥವಾ ಮಾಹಿತಿಯನ್ನು ಒದಗಿಸಲು ಕೆಲಸಗಾರನು ತೆಗೆದುಕೊಂಡ ಯಾವುದೇ ಕಾಲವನ್ನು, ಮಜೂರಿಯನ್ನು ಮತ್ತು ಅವಧಿಗೂ ಮೀರಿ ಮಾಡಿದ ಕೆಲಸಕ್ಕಾಗಿ ಹೆಚ್ಚಿನ ಮಜೂರಿಗಳನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಆ ಕೆಲಸಗಾರನು ಕಾರ್ಖಾನೆಯಲ್ಲಿ ಕೆಲಸ ಮಾಡಿದ ಕಾಲವೆಂದು ಭಾವಿಸತಕ್ಕದ್ದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ, (1)ನೇ ಉಪಪ್ರಕರಣದ ಮೇರೆಗೆ ಸಮೀಕ್ಷೆಯನ್ನು ನಡೆಸಿದ ವ್ಯಕ್ತಿಯು ರಾಜ್ಯ ಸರ್ಕಾರಕ್ಕೆ ಯಾವುದಾದರೂ ವರದಿಯನ್ನು ಸಲ್ಲಿಸಿದ್ದರೆ, ಅದನ್ನು ಈ ಅಧಿನಿಯಮದ ಮೇರೆಗೆ ಇನ್ಸ್‌ಪೆಕ್ಟರ್‌ನು ಸಲ್ಲಿಸಿದ ವರದಿಯೆಂದು ಭಾವಿಸತಕ್ಕದ್ದು.

## ಅಧ್ಯಾಯ – X
## ದಂಡನೆಗಳು ಮತ್ತು ಪ್ರಕ್ರಿಯೆ

**92. ಅಪರಾಧಗಳಿಗಾಗಿ ಸಾಮಾನ್ಯ ದಂಡನೆ.–** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನು ಹೊರತುಪಡಿಸಿ ಮತ್ತು 93ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಕಾರ್ಖಾನೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳ ಅಥವಾ ಅವುಗಳ ಮೇರೆಗೆ ಲಿಖಿತದಲ್ಲಿ ಕೊಟ್ಟ ಯಾವುದೇ ಆದೇಶದ ಉಲ್ಲಂಘನೆಯಾಗಿದ್ದರೆ, ಕಾರ್ಖಾನೆಯ ಅಧಿಭೋಗದಾರ ಮತ್ತು ವ್ಯವಸ್ಥಾಪಕ –

ಇವರಲ್ಲಿ ಪ್ರತಿಯೊಬ್ಬನು ಅಪರಾಧದ ತಪ್ಪಿತಸ್ಥನಾಗತಕ್ಕದ್ದು ಮತ್ತು ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ತರುವಾಯವೂ ಉಲ್ಲಂಘನೆಯನ್ನು ಮುಂದುವರಿಸಿದರೆ, ಆ ಉಲ್ಲಂಘನೆಯನ್ನು ಹಾಗೆ ಮುಂದುವರಿಸಿದಂಥ ಪ್ರತಿಯೊಂದು ದಿವಸಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು IVನೇ ಅಧ್ಯಾಯದ ಯಾವುದೇ ಉಪಬಂಧದ ಅಥವಾ ಅದರ ಮೇರೆಗೆ ಅಥವಾ 87ನೇ ಪ್ರಕರಣದ ಮೇರೆಗೆ ರಚಿಸಿದ ಯಾವುದೇ ನಿಯಮದ ಮೇರೆಗಿನ ಉಲ್ಲಂಘನೆಯ ಪರಿಣಾಮದಿಂದಾಗಿ ಮರಣ ಅಥವಾ ಗಂಭೀರ ದೈಹಿಕ ಕ್ಷತಿಯನ್ನುಂಟುಮಾಡುವ ಅಪಘಾತ ಉಂಟಾದರೆ, ಆ ಜುಲ್ಮಾನೆಯು, ಮರಣವನ್ನುಂಟುಮಾಡುವ ಅಪಘಾತದ ಸಂದರ್ಭದಲ್ಲಿ ಇಪ್ಪತ್ತೈದು ಸಾವಿರ ರೂಪಾಯಿಗಳಿಗಿಂತ ಮತ್ತು ಗಂಭೀರ ದೈಹಿಕ ಕ್ಷತಿಯನ್ನುಂಟು ಮಾಡುವ ಅಪಘಾತದ ಸಂದರ್ಭದಲ್ಲಿ ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

**ವಿವರಣೆ:**– ಈ ಪ್ರಕರಣದಲ್ಲಿ ಮತ್ತು 94ನೇ ಪ್ರಕರಣದಲ್ಲಿ "ಗಂಭೀರ ದೈಹಿಕ ಕ್ಷತಿ" ಎಂದರೆ ಯಾವುದೇ ಸಂದರ್ಭದಲ್ಲಿ ಅಥವಾ ಸಂಭವನೀಯ ಸಂದರ್ಭದಲ್ಲಿ ಯಾವುದೇ ಅವಯವಕ್ಕೆ ಅದರ ಬಳಕೆಯು ಶಾಶ್ವತವಾಗಿ ತಪ್ಪಿಹೋಗುವುದು ಅಥವಾ ಅದಕ್ಕೆ ಶಾಶ್ವತ ಹಾನಿಯಾಗುವುದು ಅಥವಾ ದೃಷ್ಟಿ ಅಥವಾ ಶ್ರವಣದ ಶಾಶ್ವತ ನಷ್ಟ ಅಥವಾ ಅದಕ್ಕೆ ಹಾನಿಯಾಗುವುದು ಅಥವಾ ಯಾವುದೇ ಮೂಳೆಯ ಮುರಿತ ಆದರೆ, ಅದು ಕೈಯ ಅಥವಾ ಪಾದದ ಯಾವುದೇ ಬೆರಳಿನ ಮೂಳೆಯ ಅಥವಾ ಕೀಲಿನ (ಒಂದಕ್ಕಿಂತ ಹೆಚ್ಚು ಮೂಳೆಯ ಅಥವಾ ಕೀಲಿನ ಮುರಿತ ಅಲ್ಲದ) ಮುರಿತವನ್ನು ಒಳಗೊಳ್ಳತಕ್ಕದ್ದಲ್ಲ.

**93. ಕೆಲವು ಸಂದರ್ಭಗಳಲ್ಲಿ ಆವರಣದ ಒಡೆಯನ ಹೊಣೆಗಾರಿಕೆ.–** (1) ಯಾವುದೇ ಆವರಣದಲ್ಲಿ ಪ್ರತ್ಯೇಕ ಕಟ್ಟಡಗಳನ್ನು, ಬೇರೆ ಬೇರೆ ಅಧಿಭೋಗದಾರರಿಗೆ ಪ್ರತ್ಯೇಕ ಕಾರ್ಖಾನೆಗಳಾಗಿ ಬಳಕೆ ಮಾಡಲು ಬಾಡಿಗೆಗೆ ಕೊಟ್ಟಿದ್ದರೆ, ಆವರಣದ ಒಡೆಯನು ಕೂಡು ದಾರಿಗಳು, ಚರಂಡಿ ವ್ಯವಸ್ಥೆ, ನೀರು ಸರಬರಾಜು, ದೀಪದ ವ್ಯವಸ್ಥೆ ಮತ್ತು ನೈರ್ಮಲ್ಯದಂಥ ಸಾಮಾನ್ಯ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಒದಗಿಸಲು ಮತ್ತು ನಿರ್ವಹಿಸಲು ಜವಾಬ್ದಾರನಾಗಿರತಕ್ಕದ್ದು.

(2) ಚೀಫ್ ಇನ್ಸ್‌ಪೆಕ್ಟರ್‌ನು, ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, (1)ನೇ ಉಪಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಆವರಣದ ಒಡೆಯನಿಗೆ ಆದೇಶಗಳನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(3) ಯಾವುದೇ ಆವರಣದಲ್ಲಿ ಸ್ವತಂತ್ರ ಅಥವಾ ಸ್ವಯಂಪೂರ್ಣವಾದ ಮಹಡಿಗಳನ್ನು ಅಥವಾ ಫ್ಲಾಟ್‌ಗಳನ್ನು ಬೇರೆ ಬೇರೆ ಅಧಿಭೋಗದಾರರಿಗೆ ಪ್ರತ್ಯೇಕ ಕಾರ್ಖಾನೆಗಳಂತೆ ಬಳಸಲು ಬಾಡಿಗೆಗೆ ಕೊಟ್ಟಿದ್ದರೆ, ಆ ಆವರಣದ ಒಡೆಯನು, ಅವನೇ ಕಾರ್ಖಾನೆಯ ಅಧಿಭೋಗದಾರ ಅಥವಾ ವ್ಯವಸ್ಥಾಪಕನಾಗಿದ್ದಿದ್ದರೆ,–

(i) ಕಕ್ಕಸುಗಳು, ಮೂತ್ರಿಗಳು ಮತ್ತು ತೊಳೆಯುವ ಸೌಲಭ್ಯಗಳ ಉದ್ದೇಶಗಳಿಗಾಗಿ ನೀರಿನ ಸಾಮಾನ್ಯ ಸರಬರಾಜನ್ನು ನಿರ್ವಹಿಸಬೇಕಾದಷ್ಟರಮಟ್ಟಿಗೆ ಸಂಬಂಧಿಸಿದಂತೆ;

(ii) ಒಡೆಯನಿಗೆ ಸೇರಿದ ಆದರೆ ಅಧಿಭೋಗದಾರನ ಅಭಿರಕ್ಷೆಗೆ ಅಥವಾ ಬಳಕೆಗೆ ನಿರ್ದಿಷ್ಟವಾಗಿ ವಹಿಸಿಕೊಟ್ಟಿಲ್ಲದ ಯಂತ್ರ ಸಾಮಗ್ರಿಗೆ ಮತ್ತು ಸ್ಥಿರ ಯಂತ್ರಕ್ಕೆ ಬೇಲಿ ಹಾಕುವುದು;

(iii) ಮಹಡಿಗಳಿಗೆ ಅಥವಾ ಫ್ಲಾಟ್‌ಗಳಿಗೆ, ಪ್ರವೇಶಿಸಲು ಸುರಕ್ಷಿತ ಸಾಧನಗಳು, ಮತ್ತು ಮೆಟ್ಟಿಲು ಸಾಲುಗಳ ಹಾಗೂ ಸಾಮೂಹಿಕ ದಾರಿಗಳ ನಿರ್ವಹಣೆ ಮತ್ತು ಸ್ವಚ್ಛತೆ;

(iv) ಅಗ್ನಿ ಆಕಸ್ಮಿಕದ ಸಂದರ್ಭದಲ್ಲಿ ಮುನ್ನೆಚ್ಚರಿಕೆಗಳು;

(v) ಹಾಯಿಸ್ಟ್‌ಗಳ ಮತ್ತು ಲಿಫ್ಟ್‌ಗಳ ನಿರ್ವಹಣೆ; ಮತ್ತು

(vi) ಆ ಆವರಣದಲ್ಲಿ ಒದಗಿಸಿದ ಯಾವುದೇ ಇತರ ಸಾಮಾನ್ಯ ಸೌಲಭ್ಯಗಳ ನಿರ್ವಹಣೆ

– ಇವುಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉಪಬಂಧಗಳ ಯಾವುದೇ ಉಲ್ಲಂಘನೆಗಾಗಿ ಹೇಗೆ ಹೊಣೆಗಾರನಾಗಿರುತ್ತಿದ್ದನೋ ಹಾಗೆಯೇ ಹೊಣೆಗಾರನಾಗಿರತಕ್ಕದ್ದು.

(4) ಚೀಫ್ ಇನ್ಸ್‌ಪೆಕ್ಟರ್‌ನು ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, (3)ನೇ ಉಪಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಆ ಆವರಣದ ಒಡೆಯನಿಗೆ ಆದೇಶಗಳನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(5) ಒಡೆಯನ ಹೊಣೆಗಾರಿಕೆಗೆ ಸಂಬಂಧಪಡುವ (3)ನೇ ಉಪಪ್ರಕರಣದ ಉಪಬಂಧಗಳು ಯಾವುದೇ ಆವರಣದಲ್ಲಿ ಸಾಮೂಹಿಕ ಶೌಚಾಲಯಗಳು, ಮೂತ್ರಿಗಳು ಮತ್ತು ತೊಳೆಯುವ ಸೌಲಭ್ಯಗಳು ಇರುವ ಸ್ವತಂತ್ರ ಕೊಠಡಿಗಳನ್ನು ಬೇರೆ ಬೇರೆ ಅಧಿಭೋಗದಾರರಿಗೆ ಪ್ರತ್ಯೇಕ ಕಾರ್ಖಾನೆಗಳಂತೆ ಬಾಡಿಗೆಗೆ ಕೊಟ್ಟಿರುವಲ್ಲಿ ಅನ್ವಯವಾಗತಕ್ಕದ್ದು:

ಪರಂತು, ಒಡೆಯನು, ಶೌಚಾಲಯಗಳು, ಮೂತ್ರಿಗಳು ಮತ್ತು ತೊಳೆಯುವ ಸೌಲಭ್ಯಗಳನ್ನು ಒದಗಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಸಂಬಂಧಪಟ್ಟ ಅಗತ್ಯತೆಗಳನ್ನು ಪಾಲಿಸಲು ಸಹ ಜವಾಬ್ದಾರನಾಗಿರತಕ್ಕದ್ದು.

(6) ಚೀಫ್ ಇನ್ಸ್‌ಪೆಕ್ಟರ್‌ನು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, 46ನೇ ಪ್ರಕರಣದ ಅಥವಾ 48ನೇ ಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ (5)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಆವರಣದ ಒಡೆಯನಿಗೆ ಆದೇಶಗಳನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(7) ಯಾವುದೇ ಆವರಣದಲ್ಲಿ ಕೊಠಡಿಯ ಅಥವಾ ಷೆಡ್ಡಿನ ಭಾಗಗಳನ್ನು ಬೇರೆ ಬೇರೆ ಅಧಿಭೋಗದಾರರಿಗೆ ಪ್ರತ್ಯೇಕ ಕಾರ್ಖಾನೆಗಳಂತೆ ಬಳಸಲು ಬಾಡಿಗೆಗೆ ಕೊಟ್ಟಿರುವಲ್ಲಿ, ಆ ಆವರಣದ ಒಡೆಯನು,-

(i) 14ನೇ ಮತ್ತು 15ನೇ ಪ್ರಕರಣಗಳನ್ನು ಹೊರತುಪಡಿಸಿ, IIIನೇ ಅಧ್ಯಾಯದ;

(ii) 22ನೇ, 23ನೇ, 27ನೇ, 34ನೇ, 35ನೇ ಮತ್ತು 36ನೇ ಪ್ರಕರಣಗಳನ್ನು ಹೊರತುಪಡಿಸಿ, IVನೇ ಅಧ್ಯಾಯದ:

ಪರಂತು, 21ನೇ, 24ನೇ ಮತ್ತು 32ನೇ ಪ್ರಕರಣಗಳ ಉಪಬಂಧಗಳಿಗೆ ಸಂಬಂಧಿಸಿದಂತೆ ಒಡೆಯನ ಹೊಣೆಗಾರಿಕೆಯು, ಅವನ ನಿಯಂತ್ರಣದಲ್ಲಿರುವ ವಸ್ತುಗಳಿಗೆ ಆ ಉಪಬಂಧಗಳು ಸಂಬಂಧಪಡುವಷ್ಟರಮಟ್ಟಿಗೆ ಮಾತ್ರ ಇರತಕ್ಕದ್ದು:

ಮತ್ತೂ ಪರಂತು, ಅಧಿಭೋಗದಾರನಿಗೆ ಸೇರಿದ ಅಥವಾ ಅವನು ಸರಬರಾಜು ಮಾಡಿದ ಸ್ಥಿರಯಂತ್ರ ಮತ್ತು ಯಂತ್ರ ಸಾಮಗ್ರಿಗೆ ಸಂಬಂಧಿಸಿದಂತೆ IVನೇ ಅಧ್ಯಾಯದ ಉಪಬಂಧಗಳನ್ನು ಪಾಲಿಸಲು ಅವನು ಜವಾಬ್ದಾರನಾಗಿರತಕ್ಕದ್ದು;

(iii) 42ನೇ ಪ್ರಕರಣದ

– ಉಪಬಂಧಗಳ ಯಾವುದೇ ಉಲ್ಲಂಘನೆಗಾಗಿ ಹೊಣೆಗಾರನಾಗಿರತಕ್ಕದ್ದು.

(8) ಚೀಫ್ ಇನ್ಸ್‌ಪೆಕ್ಟರ್‌ನು, ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟು, (7)ನೇ ಉಪಪ್ರಕರಣದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಆ ಆವರಣದ ಒಡೆಯನಿಗೆ ಆದೇಶಗಳನ್ನು ಹೊರಡಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(9) ಉಪಪ್ರಕರಣ (5) ಕ್ಕೆ ಮತ್ತು (7) ಕ್ಕೆ ಸಂಬಂಧಿಸಿದಂತೆ, ಈ ಅಧಿನಿಯಮದ ಯಾವುದೇ ಉಪಬಂಧದ ಉದ್ದೇಶಗಳಿಗಾಗಿ ನಿಯೋಜಿತರಾದ ಒಟ್ಟು ಕೆಲಸಗಾರರ ಸಂಖ್ಯೆಯನ್ನು ಲೆಕ್ಕ ಹಾಕುವಾಗ ಇಡೀ ಆವರಣವನ್ನು ಒಂದೇ ಕಾರ್ಖಾನೆ ಎಂದು ಭಾವಿಸತಕ್ಕದ್ದು.

**94. ಈ ಹಿಂದೆ ಅಪರಾಧ ನಿರ್ಣೀತನಾಗಿದ್ದರೆ ಹೆಚ್ಚಿನ ದಂಡನೆ.–** (1) 92ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ತಪ್ಪಿತಸ್ಥನೆಂದು ನಿರ್ಣೀತನಾದ ಯಾರೇ ವ್ಯಕ್ತಿಯು, ಪುನಃ ಅದೇ ಉಪಬಂಧದ ಉಲ್ಲಂಘನೆಯನ್ನೊಳಗೊಂಡ ಅಪರಾಧದ ತಪ್ಪಿತಸ್ಥನೆಂದು ನಿರ್ಣೀತನಾದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ ಆದರೆ ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ನ್ಯಾಯಾಲಯವು ತೀರ್ಪಿನಲ್ಲಿ ಯಾವುದೇ ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ನಮೂದಿಸಿ ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು:

ಮತ್ತೂ ಪರಂತು, IVನೇ ಅಧ್ಯಾಯದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ 87ನೇ ಪ್ರಕರಣದ ಅಥವಾ ಯಾವುದೇ ಉಪಬಂಧದ ಉಲ್ಲಂಘನೆಯ ಪರಿಣಾಮವಾಗಿ ಮರಣ ಅಥವಾ ಗಂಭೀರ ದೈಹಿಕ ಕ್ಷತಿಯನ್ನುಂಟು ಮಾಡುವ ಅಪಘಾತವಾಗಿದ್ದರೆ, ಆ ಜುಲ್ಮಾನೆಯು, ಮರಣವನ್ನುಂಟು ಮಾಡುವ ಅಪಘಾತದ ಸಂದರ್ಭದಲ್ಲಿ ಮೂವತ್ತೈದು ಸಾವಿರ ರೂಪಾಯಿಗಳಿಗಿಂತ ಮತ್ತು ತೀವ್ರ ದೈಹಿಕ ಹಾನಿಯನ್ನುಂಟು ಮಾಡುವ ಅಪಘಾತದ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉದ್ದೇಶಗಳಿಗಾಗಿ, ಯಾವ ಅಪರಾಧಕ್ಕಾಗಿ ವ್ಯಕ್ತಿಯನ್ನು ತರುವಾಯದಲ್ಲಿ ತಪ್ಪಿತಸ್ಥ ಎಂದು ನಿರ್ಣಯಿಸಲಾಗುವುದೋ ಆ ಅಪರಾಧವನ್ನು ಮಾಡುವುದಕ್ಕೆ ಮುಂಚೆ ಎರಡು ವರ್ಷಗಳ ಹಿಂದೆ ಮಾಡಿದ ಯಾವುದೇ ಅಪರಾಧ ನಿರ್ಣಯವನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**95. ಇನ್ಸ್‌ಪೆಕ್ಟರ್‌ನಿಗೆ ಅಡ್ಡಿಪಡಿಸಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಇನ್ಸ್‌ಪೆಕ್ಟರ್‌ನಿಗೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಅವನಿಗೆ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುವ ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮವನ್ನು ಅನುಸರಿಸಿ ಅವನು ಅಭಿರಕ್ಷೆಯಲ್ಲಿಟ್ಟುಕೊಂಡಿರುವ ಯಾವುವೇ ರಿಜಿಸ್ಟರುಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಇನ್ಸ್‌ಪೆಕ್ಟರ್‌ನು ಕೇಳಿದಾಗ ಹಾಜರುಪಡಿಸಲು ತಪ್ಪುವ ಅಥವಾ ಕಾರ್ಖಾನೆಯಲ್ಲಿನ ಯಾರೇ ಕೆಲಸಗಾರನು ಇನ್ಸ್‌ಪೆಕ್ಟರ್‌ನ ಮುಂದೆ ಹಾಜರಾಗದಂತೆ ಅಥವಾ ಇನ್ಸ್‌ಪೆಕ್ಟರ್‌ನ ಪರೀಕ್ಷೆಗೆ ಒಳಪಡದಂತೆ ಬಚ್ಚಿಡುವ ಅಥವಾ ತಡೆಗಟ್ಟುವ ಯಾರೇ ಆಗಲಿ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**96. ಪ್ರಕರಣ 91ರ ಮೇರೆಗಿನ ವಿಶ್ಲೇಷಣೆಯ ಫಲಿತಾಂಶಗಳನ್ನು ಅಕ್ರಮವಾಗಿ ಬಹಿರಂಗಪಡಿಸಿದ್ದಕ್ಕಾಗಿ ದಂಡನೆ.–** 91ನೇ ಪ್ರಕರಣದ ಮೇರೆಗೆ ಮಾಡಿದ ವಿಶ್ಲೇಷಣೆಯು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ನಿನ ಉದ್ದೇಶಗಳಿಗಾಗಿ ಅವಶ್ಯವಾಗಿರಬಹುದಾದಷ್ಟರಮಟ್ಟಿಗೆ ಹೊರತು, ಅದರ ಫಲಿತಾಂಶಗಳನ್ನು ಪ್ರಕಟಿಸುವ ಅಥವಾ ಯಾರೇ ವ್ಯಕ್ತಿಗೆ ಅವುಗಳನ್ನು ಬಹಿರಂಗಪಡಿಸುವ ಯಾರೇ ವ್ಯಕ್ತಿಯು ಆರು ತಿಂಗಳುಗಳಿಗೆ

ವಿಸ್ತರಿಸಬಹುದುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**96ಎ. 41ಬಿ, 41ಸಿ ಮತ್ತು 41ಹೆಚ್ ಪ್ರಕರಣಗಳ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆ.–** (1) ಯಾರೇ ವ್ಯಕ್ತಿಯು 41ಬಿ, 41ಸಿ ಅಥವಾ 41ಹೆಚ್ ಪ್ರಕರಣಗಳ ಯಾವುದೇ ಉಪಬಂಧಗಳನ್ನು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳನ್ನು ಪಾಲಿಸಲು ವಿಫಲನಾದರೆ ಅಥವಾ ಉಲ್ಲಂಘಿಸಿದರೆ, ಅಂಥ ವಿಫಲತೆಯ ಅಥವಾ ಉಲ್ಲಂಘನೆಯ ಸಂಬಂಧದಲ್ಲಿ ಏಳು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಎರಡು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮೊದಲನೇ ಅಂಥ ವಿಫಲತೆಗಾಗಿ ಅಥವಾ ಉಲ್ಲಂಘನೆಗಾಗಿ ತಪ್ಪಿತಸ್ಥನೆಂದು ನಿರ್ಣೀತನಾದ ನಂತರವೂ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರಿದ ಪ್ರತಿಯೊಂದು ದಿನಕ್ಕಾಗಿ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಉಲ್ಲೇಖಿಸಿದ ವಿಫಲತೆಯು ಅಥವಾ ಉಲ್ಲಂಘನೆಯು ತಪ್ಪಿತಸ್ಥನೆಂದು ನಿರ್ಣೀತನಾದ ದಿನಾಂಕದ ನಂತರವೂ ಒಂದು ವರ್ಷದ ಅವಧಿ ಮೀರಿ ಮುಂದುವರಿದಿದ್ದರೆ, ತಪ್ಪಿತಸ್ಥನು ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**97. ಕೆಲಸಗಾರರಿಂದ ಅಪರಾಧಗಳು.–** (1) ಪ್ರಕರಣ 111ರ ಉಪಬಂಧಗಳಿಗೆ ಒಳಪಟ್ಟು ಕಾರ್ಖಾನೆಯಲ್ಲಿ ನಿಯೋಜಿತನಾದ ಯಾರೇ ಕೆಲಸಗಾರನು ಕೆಲಸಗಾರರ ಮೇಲೆ ಯಾವುದೇ ಕರ್ತವ್ಯವನ್ನು ಅಥವಾ ಹೊಣೆಗಾರಿಕೆಯನ್ನು ವಿಧಿಸುವ ಈ ಅಧಿನಿಯಮದ ಯಾವುವೇ ಉಪಬಂಧವನ್ನು ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳನ್ನು ಅಥವಾ ಮಾಡಿದ ಯಾವುದೇ ಆದೇಶಗಳನ್ನು ಉಲ್ಲಂಘಿಸಿದರೆ, ಅವನು ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಕೆಲಸಗಾರನನ್ನು ತಪ್ಪಿತಸ್ಥನೆಂದು ನಿರ್ಣಯಿಸಿರುವಲ್ಲಿ, ಕಾರ್ಖಾನೆಯ ಅಧಿಭೋಗದಾರನನ್ನು ಅಥವಾ ವ್ಯವಸ್ಥಾಪಕನನ್ನು, ಆ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಎಲ್ಲಾ ಯುಕ್ತ ಕ್ರಮಗಳನ್ನು ತೆಗೆದುಕೊಳ್ಳಲು ವಿಫಲನಾಗಿದ್ದಾನೆಂದು ರುಜುವಾತುಪಡಿಸಿದ ಹೊರತು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದಲ್ಲ.

**98. ಯೋಗ್ಯತೆಯ ಸುಳ್ಳು ಪ್ರಮಾಣಪತ್ರವನ್ನು ಉಪಯೋಗಿಸಿದ್ದಕ್ಕಾಗಿ ದಂಡನೆ.–** 70ನೇ ಪ್ರಕರಣದ ಮೇರೆಗೆ ಬೇರೊಬ್ಬ ವ್ಯಕ್ತಿಗೆ ಕೊಟ್ಟ ಪ್ರಮಾಣಪತ್ರವನ್ನು ತಿಳಿದೂ ತಿಳಿದೂ ಆ ಪ್ರಕರಣದ ಮೇರೆಗೆ ತನಗೆ ಕೊಟ್ಟ ಯೋಗ್ಯತಾ ಪ್ರಮಾಣಪತ್ರವೆಂದು ಬಳಸುವ ಅಥವಾ ಬಳಸಲು ಪ್ರಯತ್ನಿಸುವ ಯಾರೇ ಆಗಲಿ ಅಥವಾ ಅಂತಹ ಪ್ರಮಾಣಪತ್ರವನ್ನು ಪಡೆದು ಕೊಂಡಿದ್ದ ವ್ಯಕ್ತಿಯು ತಿಳಿದೂ ತಿಳಿದೂ ಅದನ್ನು ಇನ್ನೊಬ್ಬ ವ್ಯಕ್ತಿಯು ಬಳಸಲು ಅಥವಾ ಬಳಸುವ ಪ್ರಯತ್ನವನ್ನು ಮಾಡಲು ಅವಕಾಶ ಮಾಡಿಕೊಟ್ಟರೆ ಎರಡು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**99. ಎರಡು ಕಡೆ ಮಗುವಿನ ನಿಯೋಜನೆಗೆ ಅನುಮತಿಸುವುದಕ್ಕಾಗಿ ದಂಡನೆ.–** ಬಾಲಕ/ ಬಾಲಕಿಯು ಈಗಾಗಲೇ ಒಂದು ಕಾರ್ಖಾನೆಯಲ್ಲಿ ಯಾವ ದಿನದಂದು ಕೆಲಸ ಮಾಡುತ್ತಿದ್ದಾನೋ ಅದೇ ದಿವಸದಲ್ಲಿ ಇನ್ನೊಂದು ಕಾರ್ಖಾನೆಯಲ್ಲಿ ಕೆಲಸ ಮಾಡಿದರೆ ಅವರ ಮಜೂರಿಗಳಿಂದ ಯಾವುದೇ ಪ್ರಯೋಜನವನ್ನು ಪಡೆಯುತ್ತಿರುವ ತಂದೆ–ತಾಯಂದಿರು ಅಥವಾ ಪಾಲಕನು ಅಥವಾ ಅವನ ಅಭಿರಕ್ಷೆಯನ್ನು, ಅಥವಾ ಅವನ ಮೇಲೆ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಅಂಥ ತಂದೆ–ತಾಯಂದಿರ, ಪಾಲಕರ ಅಥವಾ ವ್ಯಕ್ತಿಯ ಸಮ್ಮತಿ ಅಥವಾ ಪರೋಕ್ಷ ಸಮ್ಮತಿ ಇಲ್ಲದೆ ಬಾಲಕ/ಬಾಲಕಿಯು ಹಾಗೆ ಕೆಲಸ ಮಾಡಿದ್ದಾರೆಂದು ನ್ಯಾಯಾಲಯಕ್ಕೆ ಕಂಡುಬಂದ ಹೊರತು, ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**100.** [X X X X]

**101. ಕೆಲವು ಸಂದರ್ಭಗಳಲ್ಲಿ ಹೊಣೆಗಾರಿಕೆಯಿಂದ ಅಧಿಭೋಗದಾರನಿಗೆ ಅಥವಾ ವ್ಯವಸ್ಥಾಪಕನಿಗೆ ವಿನಾಯಿತಿ.–** ಕಾರ್ಖಾನೆಯ ಅಧಿಭೋಗದಾರನ ಅಥವಾ ವ್ಯವಸ್ಥಾಪಕನ ಮೇಲೆ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವನ್ನು ಆಪಾದಿಸಿರುವಲ್ಲಿ, ಅವನು ಕ್ರಮಬದ್ಧವಾಗಿ ಫಿರ್ಯಾದನ್ನು ಮಾಡಿಕೊಂಡರೆ ಮತ್ತು ವಾಸ್ತವ ಅಪರಾಧಿಯೆಂದು ತಾನು ಆರೋಪಿಸಿದ ಯಾರೇ ವ್ಯಕ್ತಿಯನ್ನು, ಆಪಾದನೆಯ ವಿಚಾರಣೆಗಾಗಿ ನಿಗದಿಪಡಿಸಿದ ಕಾಲದಲ್ಲಿ ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಕೇಳುವ ತನ್ನ ಆ ಉದ್ದೇಶವನ್ನು ಪ್ರಾಸಿಕ್ಯೂಟರನಿಗೆ ಸ್ಪಷ್ಟ ಮೂರು ದಿನಗಳಿಗೆ ಕಡಿಮೆಯಿಲ್ಲದಂತೆ ಲಿಖಿತದಲ್ಲಿ ತಿಳಿಸಿ, ಆರೋಪದ ವಿಚಾರಣೆಗೆ ನಿಗದಿ ಮಾಡಿದ ದಿನಾಂಕದಂದು ಅಪರಾಧಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಕೇಳಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಪರಾಧ ಮಾಡಿರುವುದನ್ನು ರುಜುವಾತುಪಡಿಸಿದ ತರುವಾಯ ಆ ಕಾರ್ಖಾನೆಯ ಅಧಿಭೋಗದಾರನು ಅಥವಾ ಸಂದರ್ಭಾನುಸಾರ ವ್ಯವಸ್ಥಾಪಕನು,–

(ಎ) ಈ ಅಧಿನಿಯಮವನ್ನು ಜಾರಿಗೊಳಿಸಲು ತಾನು ಸೂಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು; ಮತ್ತು

(ಬಿ) ಸದರಿ ಆ ಯಾರೇ ವ್ಯಕ್ತಿಯು ಪ್ರಶ್ನಿತ ಅಪರಾಧವನ್ನು ತನ್ನ ತಿಳುವಳಿಕೆ, ಸಮ್ಮತಿ ಅಥವಾ ಪರೋಕ್ಷ ಸಮ್ಮತಿ ಇಲ್ಲದೆ ಮಾಡಿರುವನೆಂದು

– ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ, ಆ ಯಾರೇ ವ್ಯಕ್ತಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸತಕ್ಕದ್ದು ಮತ್ತು ಅವನು ಆ ಕಾರ್ಖಾನೆಯ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಆಗಿದ್ದಿದ್ದರೆ, ಹೇಗೆ ಶಿಕ್ಷೆಗೆ ಗುರಿಯಾಗುತ್ತಿದ್ದನೋ ಹಾಗೆಯೇ ಶಿಕ್ಷೆಗೆ ಗುರಿಯಾಗತಕ್ಕದ್ದು ಮತ್ತು ಸಂದರ್ಭಾನುಸಾರ ಆ

ಅಧಿಭೋಗದಾರನನ್ನು ಅಥವಾ ವ್ಯವಸ್ಥಾಪಕನನ್ನು ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗಿನ ಯಾವುದೇ ಹೊಣೆಗಾರಿಕೆಯಿಂದ ವಿಮೋಚನೆಗೊಳಿಸತಕ್ಕದ್ದು:

ಪರಂತು, ಹಿಂದೆ ಹೇಳಿದಂತೆ ರುಜುವಾತುಪಡಿಸಲು ಕೋರುವಾಗ, ಸಂದರ್ಭಾನುಸಾರ, ಆ ಕಾರ್ಖಾನೆಯ ಅಧಿಭೋಗದಾರನನ್ನು ಅಥವಾ ವ್ಯವಸ್ಥಾಪಕನನ್ನು ಪ್ರಮಾಣ ಮಾಡಿಸಿ ಪರೀಕ್ಷಿಸಬಹುದು ಮತ್ತು ಅವನ ಸಾಕ್ಷ್ಯವು ಮತ್ತು ತನ್ನನ್ನು ಸಮರ್ಥಿಸಲು ತಾನು ಯಾವ ಸಾಕ್ಷಿದಾರನನ್ನು ಕರೆಸಿದ್ದನೋ ಆ ಸಾಕ್ಷಿದಾರನ ಸಾಕ್ಷ್ಯವು, ವಾಸ್ತವಿಕ ಅಪರಾಧಿಯೆಂದು ತಾನು ಆರೋಪಿಸಿದ ವ್ಯಕ್ತಿಯಿಂದ ಮತ್ತು ಪ್ರಾಸಿಕ್ಯೂಟರನ ಪಾಟೀ ಸವಾಲಿಗೆ ಒಳಪಟ್ಟಿರತಕ್ಕದ್ದು:

ಮತ್ತೂ ಪರಂತು, ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ವಾಸ್ತವ ಅಪರಾಧಿಯೆಂದು ಆರೋಪಿಸಿದ ವ್ಯಕ್ತಿಯನ್ನು ವಿಚಾರಣೆಗಾಗಿ ನಿಗದಿಪಡಿಸಿದ ಕಾಲದಲ್ಲಿ ನ್ಯಾಯಾಲಯದ ಮುಂದೆ ಕರೆತರಲು ಆಗದಿದ್ದರೆ, ನ್ಯಾಯಾಲಯವು ವಿಚಾರಣೆಯನ್ನು ಮೂರು ತಿಂಗಳಿಗೆ ಮೀರಿದ ಅವಧಿಗಾಗಿ ಕಾಲಕಾಲಕ್ಕೆ ಮುಂದಕ್ಕೆ ಹಾಕತಕ್ಕದ್ದು ಮತ್ತು ಸದರಿ ಅವಧಿಯ ಕೊನೆಯಲ್ಲಿಯೂ ವಾಸ್ತವ ಅಪರಾಧಿಯೆಂದು ಆರೋಪಿತನಾದ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಕರೆತರಲಾಗದಿದ್ದರೆ, ನ್ಯಾಯಾಲಯವು, ಅಧಿಭೋಗದಾರನ ಅಥವಾ ವ್ಯವಸ್ಥಾಪಕನ ವಿರುದ್ಧ ಆಪಾದನೆಯ ವಿಚಾರಣೆಯನ್ನು ಮುಂದುವರಿಸತಕ್ಕದ್ದು ಮತ್ತು ಆ ಅಪರಾಧವನ್ನು ರುಜುವಾತುಪಡಿಸಿದರೆ, ಆ ಅಧಿಭೋಗದಾರನನ್ನು ಅಥವಾ ವ್ಯವಸ್ಥಾಪಕನನ್ನು ಅಪರಾಧಿಯೆಂದು ನಿರ್ಣಯಿಸತಕ್ಕದ್ದು.

**102. ಆದೇಶಗಳನ್ನು ಮಾಡಲು ನ್ಯಾಯಾಲಯದ ಅಧಿಕಾರ.–** (1) ಕಾರ್ಖಾನೆಯ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ತಪ್ಪಿತಸ್ಥನೆಂದು ನಿರ್ಣೀತನಾಗಿದ್ದರೆ, ಆ ನ್ಯಾಯಾಲಯವು ಯಾವುದೇ ಶಿಕ್ಷೆಯನ್ನು ವಿಧಿಸುವುದರ ಜೊತೆಗೆ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ (ಸೂಕ್ತವೆಂದು ನ್ಯಾಯಾಲಯವು ಭಾವಿಸಿದ ಮತ್ತು ಆ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದಾಗ ಕಾಲಕಾಲಕ್ಕೆ ವಿಸ್ತರಿಸಬಹುದಾದ) ಅವಧಿಯೊಳಗೆ ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಯಿತೋ, ಆ ವಿಷಯಗಳನ್ನು ಸರಿಪಡಿಸಲು ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಕ್ರಮಗಳನ್ನು ಕೈಗೊಳ್ಳಲು ಅವನನ್ನು ಅಗತ್ಯಪಡಿಸಬಹುದು.

(2) ಉಪಪ್ರಕರಣ (1)ರ ಮೇರೆಗೆ ಆದೇಶವನ್ನು ಮಾಡಿದ್ದಾಗ, ಸಂದರ್ಭಾನುಸಾರ ಕಾರ್ಖಾನೆಯ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು ಆ ಅವಧಿಯಲ್ಲಿ ಅಥವಾ ನ್ಯಾಯಾಲಯವು ವಿಸ್ತೃತ ಅವಧಿಗೆ ಅನುಮತಿಯನ್ನೇನಾದರೂ ನೀಡಿದ್ದರೆ ಆ ಅವಧಿಯಲ್ಲಿ ಆ ಅಪರಾಧದ ಮುಂದುವರಿಕೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ಹೊಣೆಗಾರನಾಗಿರತಕ್ಕದ್ದಲ್ಲ, ಆದರೆ ಸಂದರ್ಭಾನುಸಾರ ಅಂತಹ ಅವಧಿ ಅಥವಾ ವಿಸ್ತೃತ ಅವಧಿಯು ಮುಕ್ತಾಯವಾದ ಮೇಲೆ ಆ ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಪಾಲಿಸದಿದ್ದರೆ ಸಂದರ್ಭಾನುಸಾರ, ಆ ಅಧಿಭೋಗದಾರ ಅಥವಾ ವ್ಯವಸ್ಥಾಪಕನು ಅಪರಾಧವನ್ನು ಮುಂದುವರೆಸಿರುವುದಾಗಿ ಭಾವಿಸತಕ್ಕದ್ದು ಮತ್ತು ಅದಕ್ಕಾಗಿ ನ್ಯಾಯಾಲಯವು, ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸವನ್ನು ಅನುಭವಿಸಲು ಅಥವಾ ಹಾಗೆ ಮುಕ್ತಾಯವಾದ ತರುವಾಯ ಆ ಆದೇಶವನ್ನು ಪಾಲಿಸದಿರುವಂಥ ಪ್ರತಿಯೊಂದು ದಿವಸಕ್ಕೆ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯನ್ನು ಸಂದಾಯ ಮಾಡಲು ಅಥವಾ ಹಿಂದೆ ಹೇಳಲಾದಂತೆ ಕಾರಾವಾಸವನ್ನು ಅನುಭವಿಸಲು ಮತ್ತು ಅಂಥ ಜುಲ್ಮಾನೆಯನ್ನು ಸಂದಾಯ ಮಾಡಲು ಸಹ ದಂಡನೆ ವಿಧಿಸಬಹುದು.

**103. ನಿಯೋಜನೆಯ ಬಗ್ಗೆ ಪೂರ್ವಭಾವನೆ.–** ಊಟ ಅಥವಾ ವಿಶ್ರಾಂತಿಗಾಗಿ ಬಿಡುವುಗಳಲ್ಲಿ ಹೊರತು, ಕೆಲಸವು ನಡೆಯುತ್ತಿರುವಾಗ ಅಥವಾ ಯಂತ್ರ ಸಾಮಗ್ರಿಯು ಚಾಲನೆಯಲ್ಲಿರುವಾಗ ಯಾವುದೇ ಕಾಲದಲ್ಲಿ, ಕಾರ್ಖಾನೆಯಲ್ಲಿ ವ್ಯಕ್ತಿಯು ಕಂಡುಬಂದರೆ ತದ್ವಿರುದ್ಧವಾದುದು ರುಜುವಾತಾಗುವವರೆಗೆ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ ಅವನು ಆ ಕಾಲದಲ್ಲಿ ಕಾರ್ಖಾನೆಯಲ್ಲಿ ನಿಯೋಜಿತನಾಗಿರುವುದಾಗಿ ಭಾವಿಸತಕ್ಕದ್ದು.

**104. ವಯಸ್ಸನ್ನು ರುಜುವಾತುಪಡಿಸುವ ಹೊಣೆ.–** (1) ಒಬ್ಬ ವ್ಯಕ್ತಿಯು, ಒಂದು ನಿಶ್ಚಿತ ವಯಸ್ಸಿಗಿಂತ ಕಡಿಮೆ ವಯಸ್ಸಿನವನಾಗಿದ್ದಾಗ ಮಾಡಿದ ಯಾವುದೇ ಕಾರ್ಯವು ಅಥವಾ ಲೋಪವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವಾಗುವುದಿದ್ದರೆ ಮತ್ತು ಆ ವ್ಯಕ್ತಿಯು ಮೇಲ್ನೋಟಕ್ಕೆ ಅಂಥ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂದು ನ್ಯಾಯಾಲಯವು ಅಭಿಪ್ರಾಯಪಟ್ಟರೆ ಆ ವ್ಯಕ್ತಿಯು ಅಂಥ ವಯಸ್ಸಿಗಿಂತ ಕಡಿಮೆ ವಯಸ್ಸಿನವನಲ್ಲವೆಂದು ರುಜುವಾತುಪಡಿಸುವ ಹೊಣೆಯು ಆಪಾದಿತನ ಮೇಲಿರತಕ್ಕದ್ದು.

(2) ಕೆಲಸಗಾರನಿಗೆ ಸಂಬಂಧಪಟ್ಟಂತೆ ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನು ಅವನನ್ನು ತಾನು ಖುದ್ದಾಗಿ ಪರೀಕ್ಷಿಸಿರುವುದಾಗಿ ಮತ್ತು ಅಂಥ ಘೋಷಣೆಯಲ್ಲಿ ಹೇಳಲಾದ ವಯಸ್ಸಿಗಿಂತ ಅವನು ಕಡಿಮೆ ವಯಸ್ಸಿನವನಾಗಿದ್ದನೆಂದು ನಂಬುವುದಾಗಿ ಅವನು ಲಿಖಿತದಲ್ಲಿ ನೀಡಿದ ಘೋಷಣೆಯು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಉದ್ದೇಶಗಳಿಗಾಗಿ, ಆ ಕೆಲಸಗಾರನ ವಯಸ್ಸಿನ ಸಾಕ್ಷ್ಯವಾಗಿ ಅಂಗೀಕಾರಾರ್ಹವಾಗಿರತಕ್ಕದ್ದು.

**104ಎ. ಕಾರ್ಯಸಾಧ್ಯವಾಗಬಹುದಾದ ಮಿತಿಗಳನ್ನು ರುಜುವಾತುಪಡಿಸುವ ಹೊಣೆ, ಇತ್ಯಾದಿ.–** ಈ ಅಧಿನಿಯಮದ ಯಾವುದೇ ಉಪಬಂಧದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಲ್ಲಂಘನೆಗಾಗಿ ಏನನ್ನಾದರೂ ಮಾಡುವ ಕರ್ತವ್ಯ ಅಥವಾ ಅಗತ್ಯತೆಯನ್ನು ಪಾಲಿಸಲು ವಿಫಲತೆಯನ್ನು ಒಳಗೊಂಡಿರುವ ಅಪರಾಧದ ಬಗೆಗಿನ ಯಾವುದೇ ವ್ಯವಹರಣೆಯಲ್ಲಿ ಅಂಥ ಕರ್ತವ್ಯ ಅಥವಾ ಅಗತ್ಯತೆಗಳನ್ನು ಪಾಲಿಸಲು ವಿಫಲನಾಗಿದ್ದಾನೆಂದು ಆಪಾದಿತನಾಗಿರುವ ವ್ಯಕ್ತಿಯು, ಅದು ಯುಕ್ತವಾಗಿ ಕಾರ್ಯಸಾಧ್ಯವಾಗಿರಲಿಲ್ಲವೆಂದು ಅಥವಾ ಸಂದರ್ಭಾನುಸಾರ ಆ ಕರ್ತವ್ಯ ಅಥವಾ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆಂದು ಆತನು ರುಜುವಾತುಪಡಿಸತಕ್ಕದ್ದು.

**105. ಅಪರಾಧಗಳ ನ್ಯಾಯಿಕ ಗ್ರಹಿಕೆ.–** (1) ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞೇಯತೆಯನ್ನು ಇನ್ಸ್‌ಪೆಕ್ಟರ್‌ನ ದೂರಿನ ಮೇಲೆ ಅಥವಾ ಅವನ ಲಿಖಿತ ಪೂರ್ವ ಮಂಜೂರಾತಿಯ ಹೊರತು ತೆಗೆದುಕೊಳ್ಳತಕ್ಕದ್ದಲ್ಲ.

(2) ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

**106. ಪ್ರಾಸಿಕ್ಯೂಷನ್ನುಗಳ ಬಗ್ಗೆ ಕಾಲಪರಿಮಿತಿ.–** ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞೇಯತೆಯನ್ನು, ಆಪಾದಿಸಲಾದ ಅಪರಾಧವು ಇನ್ಸ್‌ಪೆಕ್ಟರ್‌ನ ತಿಳುವಳಿಕೆಗೆ ಬಂದ ದಿನಾಂಕದಿಂದ ಮೂರು ತಿಂಗಳೊಳಗೆ ಆ ಬಗ್ಗೆ ಫಿರ್ಯಾದನ್ನು ಸಲ್ಲಿಸಿದ್ದ ಹೊರತು, ತೆಗೆದುಕೊಳ್ಳತಕ್ಕದ್ದಲ್ಲ:

ಪರಂತು, ಆ ಅಪರಾಧವು ಇನ್ಸ್‌ಪೆಕ್ಟರ್‌ನು ಮಾಡಿದ ಲಿಖಿತ ಆದೇಶದ ಉಲ್ಲಂಘನೆಯಿಂದಾಗಿ ಆಗಿದ್ದರೆ, ಅದರ ಬಗ್ಗೆ ಫಿರ್ಯಾದನ್ನು, ಅಪರಾಧವನ್ನು ಮಾಡಿರುವುದಾಗಿ ಆಪಾದಿಸಲಾದ ದಿನಾಂಕದಿಂದ ಆರು ತಿಂಗಳೊಳಗಾಗಿ ಸಲ್ಲಿಸಬಹುದು.

**ವಿವರಣೆ:–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಮುಂದುವರೆಯುತ್ತಿರುವ ಅಪರಾಧದ ಸಂದರ್ಭದಲ್ಲಿ ಕಾಲಪರಿಮಿತಿಯ ಅವಧಿಯನ್ನು, ಅಪರಾಧವು ಮುಂದುವರೆಯುತ್ತಿರುವಂಥ ಕಾಲದ ಪ್ರತಿಯೊಂದು ಹಂತಕ್ಕೆ ಸಂಬಂಧಿಸಿದಂತೆ ಲೆಕ್ಕ ಹಾಕತಕ್ಕದ್ದು.

(ಬಿ) ಯಾವುದೇ ಕಾರ್ಯವನ್ನು ನೆರವೇರಿಸುವುದಕ್ಕಾಗಿ, ಕಾರ್ಖಾನೆಯ ಅಧಿಭೋಗದಾರನು ಅಥವಾ ವ್ಯವಸ್ಥಾಪಕನು, ಅರ್ಜಿ ಸಲ್ಲಿಸಿದಾಗ ಕಾಲಾವಧಿಯನ್ನು ಮಂಜೂರು ಮಾಡಿದ್ದರೆ ಅಥವಾ ವಿಸ್ತರಿಸಿದ್ದರೆ, ಕಾಲಪರಿಮಿತಿಯ ಅವಧಿಯನ್ನು ಹಾಗೆ ಮಂಜೂರು ಮಾಡಿದ ಅಥವಾ ವಿಸ್ತರಿಸಿದ ಕಾಲಾವಧಿ ಮುಕ್ತಾಯವಾಗುವ ದಿನಾಂಕದಿಂದ ಲೆಕ್ಕಹಾಕತಕ್ಕದ್ದು.

**106ಎ. ಅಪರಾಧದ ಬಗೆಗಿನ ವ್ಯವಹರಣೆಗಳನ್ನು ಪುರಸ್ಕರಿಸಲು ನ್ಯಾಯಾಲಯದ ಅಧಿಕಾರವ್ಯಾಪ್ತಿ, ಇತ್ಯಾದಿ.–** ಯಾವುದೇ ಸ್ಥಾವರದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗಿನ ಅಪರಾಧಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯನ್ನು ಪ್ರದಾನ ಮಾಡುವ ಉದ್ದೇಶಗಳಿಗಾಗಿ, ತತ್ಕಾಲದಲ್ಲಿ ಸ್ಥಾವರವು ಇರುವ ಸ್ಥಳವನ್ನು ಅಂಥ ಅಪರಾಧವು ನಡೆದಿರುವ ಸ್ಥಳವೆಂದು ಭಾವಿಸತಕ್ಕದ್ದು.

## ಅಧ್ಯಾಯ – XI
## ಪೂರಕ

**107. ಅಪೀಲುಗಳು.–** (1) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಇನ್ಸ್‌ಪೆಕ್ಟರ್‌ನ ಲಿಖಿತ ಆದೇಶವನ್ನು ಕಾರ್ಖಾನೆಯ ಯಾವ ವ್ಯವಸ್ಥಾಪಕನಿಗೆ ಜಾರಿ ಮಾಡಲಾಗಿದೆಯೋ ಆ ವ್ಯವಸ್ಥಾಪಕನು ಅಥವಾ ಕಾರ್ಖಾನೆಯ ಅಧಿಭೋಗದಾರನು, ಆ ಆದೇಶವನ್ನು ಜಾರಿ ಮಾಡಿದಂದಿನಿಂದ ಮೂವತ್ತು ದಿವಸಗಳೊಳಗೆ ಅದರ ವಿರುದ್ಧ ನಿಯಮಿಸಿದ ಪ್ರಾಧಿಕಾರಕ್ಕೆ ಅಪೀಲನ್ನು ಮಾಡಿಕೊಳ್ಳಬಹುದು ಮತ್ತು ಅಂಥ ಪ್ರಾಧಿಕಾರವು, ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಿದ ನಿಯಮಗಳಿಗೆ ಒಳಪಟ್ಟು ಆ ಆದೇಶವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ವಿಪರ್ಯಸ್ಥಗೊಳಿಸಬಹುದು.

(2) ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಿದ ನಿಯಮಗಳಿಗೆ ಒಳಪಟ್ಟು, (ನ್ಯಾಯ ಸಲಹೆಗಾರರ ನೆರವಿನೊಂದಿಗೆ ವಿಚಾರಣೆ ಮಾಡಬೇಕಾಗಿಲ್ಲದಂಥ ಅಪೀಲುಗಳ ವರ್ಗಗಳನ್ನು ಅದು ನಿಯಮಿಸಬಹುದು) ಅಪೀಲು ಪ್ರಾಧಿಕಾರವು, ನ್ಯಾಯ ಸಲಹೆಗಾರರ ನೆರವಿನೊಂದಿಗೆ ಅಪೀಲನ್ನು ವಿಚಾರಣೆ ಮಾಡಬಹುದು ಅಥವಾ ಅಪೀಲು ಅರ್ಜಿಯಲ್ಲಿ ಹಾಗೆ ಅಪೇಕ್ಷಿಸಿದರೆ ನ್ಯಾಯ ಸಲಹೆಗಾರರ ನೆರವಿನೊಂದಿಗೆ ವಿಚಾರಣೆ ಮಾಡತಕ್ಕದ್ದು, ಅವರಲ್ಲಿ ಒಬ್ಬರನ್ನು ಅಪೀಲು ಪ್ರಾಧಿಕಾರವು ಮತ್ತು ಇತರರನ್ನು, ಸಂಬಂಧಿಸಿದ ಕೈಗಾರಿಕೆಯನ್ನು ಪ್ರತಿನಿಧಿಸುವ ನಿಯಮಿಸಬಹುದಾದಂಥ ನಿಕಾಯವು ನೇಮಕ ಮಾಡತಕ್ಕದ್ದು:

ಪರಂತು, ಅಪೀಲನ್ನು ವಿಚಾರಣೆ ಮಾಡುವುದಕ್ಕೆ ನಿಗದಿಪಡಿಸಿದ ಕಾಲಕ್ಕೆ ಮುಂಚೆ ಅಂಥ ನಿಕಾಯವು ಯಾರೇ ನ್ಯಾಯ ಸಲಹೆಗಾರರನ್ನು ನೇಮಕ ಮಾಡಿಕೊಂಡಿರದಿದ್ದರೆ ಅಥವಾ ಹಾಗೆ ನೇಮಕಗೊಂಡ ನ್ಯಾಯ ಸಲಹೆಗಾರನು ಅಂಥ ಕಾಲದಲ್ಲಿ ವಿಚಾರಣೆಗೆ ಹಾಜರಾಗಲು ತಪ್ಪಿದರೆ, ಅಪೀಲು ಪ್ರಾಧಿಕಾರವು ಹಾಜರಾಗಲು ತಪ್ಪಿರುವುದು ಸಾಕಷ್ಟು ಕಾರಣದಿಂದ ಎಂದು ಮನದಟ್ಟು ಮಾಡಿಕೊಂಡ ಹೊರತು ಅಂಥ ನ್ಯಾಯ ಸಲಹೆಗಾರನ ನೆರವಿಲ್ಲದೆ ಅಥವಾ ಅದು ಸೂಕ್ತವೆಂದು ಯೋಚಿಸಿದರೆ ಯಾರೇ ನ್ಯಾಯ ಸಲಹೆಗಾರನ ನೆರವಿಲ್ಲದೆ ಅಪೀಲಿನ ವಿಚಾರಣೆಯನ್ನು ಮುಂದುವರೆಸಬಹುದು.

(3) ಈ ಬಗ್ಗೆ ರಾಜ್ಯ ಸರ್ಕಾರವು ರಚಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು ಮತ್ತು ಅಪೀಲು ಪ್ರಾಧಿಕಾರವು ಯಾವುದೇ ಪ್ರಕರಣದಲ್ಲಿ ವಿಧಿಸಲು ಸೂಕ್ತವೆಂದು ಯೋಚಿಸಬಹುದಾದಂಥ ಅಂಶಿಕ ಪಾಲನೆ ಅಥವಾ ತಾತ್ಕಾಲಿಕ ಕ್ರಮಗಳನ್ನು ಅಂಗೀಕರಿಸುವ ಬಗೆಗಿನ ಷರತ್ತುಗಳಿಗೆ ಒಳಪಟ್ಟು ಅಪೀಲು ಪ್ರಾಧಿಕಾರವು ತಾನು ಸೂಕ್ತವೆಂದು ಯೋಚಿಸಿದರೆ, ಅಪೀಲಿನ ತೀರ್ಮಾನವನ್ನು ಇತ್ಯರ್ಥದಲ್ಲಿರಿಸಿ ಯಾವ ಆದೇಶದ ವಿರುದ್ಧ ಅಪೀಲನ್ನು ಮಾಡಿಕೊಳ್ಳಲಾಗಿದೆಯೋ ಆ ಆದೇಶವನ್ನು ಅಮಾನತುಗೊಳಿಸಬಹುದು.

**108. ನೋಟೀಸುಗಳ ಪ್ರದರ್ಶನ.–** (1) ಯಾವುದೇ ಕಾರ್ಖಾನೆಯಲ್ಲಿ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದರ್ಶಿಸಲು ಅಗತ್ಯಪಡಿಸಿದ ನೋಟೀಸುಗಳ ಜೊತೆಗೆ, ನಿಯಮಿಸಬಹುದಾದಂಥ ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಸಾರಾಂಶಗಳನ್ನು ಮತ್ತು ಇನ್ಸ್‌ಪೆಕ್ಟರ್‌ನ ಮತ್ತು ಪ್ರಮಾಣೀಕರಿಸುವ ಶಸ್ತ್ರಚಿಕಿತ್ಸಕನ ಹೆಸರು ಮತ್ತು ವಿಳಾಸವನ್ನು ಸಹ ಒಳಗೊಂಡ ನೋಟೀಸನ್ನು ಪ್ರತಿಯೊಂದು ಕಾರ್ಖಾನೆಯಲ್ಲಿ ಪ್ರದರ್ಶಿಸತಕ್ಕದ್ದು.

(2) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಕಾರ್ಖಾನೆಯಲ್ಲಿ ಪ್ರದರ್ಶಿಸಲು ಅಗತ್ಯಪಡಿಸಿದ ಎಲ್ಲ ನೋಟೀಸುಗಳು ಇಂಗ್ಲಿಷಿನಲ್ಲಿ ಮತ್ತು ಆ ಕಾರ್ಖಾನೆಯಲ್ಲಿನ ಬಹುಸಂಖ್ಯಾತ ಕೆಲಸಗಾರರಿಗೆ ತಿಳಿದಿರುವ ಭಾಷೆಯಲ್ಲಿ ಇರತಕ್ಕದ್ದು ಮತ್ತು ಕಾರ್ಖಾನೆಯ ಮುಖ್ಯ ಪ್ರವೇಶದ್ವಾರದಲ್ಲಿ ಅಥವಾ ಅದರ ಸಮೀಪದಲ್ಲಿ ಯಾವುದೇ ಎದ್ದುಕಾಣುವ ಮತ್ತು ಅನುಕೂಲಕರವಾದ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು ಮತ್ತು ಸ್ಪಷ್ಟ ಹಾಗೂ ಓದಬಹುದಾದ ಸ್ಥಿತಿಯಲ್ಲಿ ಇಟ್ಟಿರತಕ್ಕದ್ದು.

(3) ಚೀಫ್ ಇನ್ಸ್‌ಪೆಕ್ಟರ್‌ನು ಯಾವುದೇ ಕಾರ್ಖಾನೆಯ ವ್ಯವಸ್ಥಾಪಕನಿಗೆ ಜಾರಿ ಮಾಡಿದ ಲಿಖಿತ ಆದೇಶದ ಮೂಲಕ, ಆ ಕಾರ್ಖಾನೆಯಲ್ಲಿನ ಕೆಲಸಗಾರರ ಆರೋಗ್ಯ, ಸುರಕ್ಷೆ ಅಥವಾ ಕಲ್ಯಾಣಕ್ಕೆ ಸಂಬಂಧಪಟ್ಟ ಇತರ ಯಾವುದೇ ನೋಟೀಸನ್ನು ಅಥವಾ ಭಿತ್ತಿಪತ್ರವನ್ನು ಆ ಕಾರ್ಖಾನೆಯಲ್ಲಿ ಪ್ರದರ್ಶಿಸತಕ್ಕದ್ದೆಂದು ಅಗತ್ಯಪಡಿಸಬಹುದು.

**109. ನೋಟೀಸುಗಳ ಜಾರಿ.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗಿನ ಆದೇಶಗಳನ್ನು ಕಾರ್ಖಾನೆಗಳ ಒಡೆಯರಿಗೆ, ಅಧಿಭೋಗದಾರರಿಗೆ ಅಥವಾ ವ್ಯವಸ್ಥಾಪಕರಿಗೆ ಜಾರಿ ಮಾಡುವ ರೀತಿಯನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

**110. ವಿವರ ಪಟ್ಟಿಕೆಗಳು.–** ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ತನ್ನ ಅಭಿಪ್ರಾಯದಲ್ಲಿ ಅಗತ್ಯವಾಗಬಹುದಾದಂಥ ಸಾಂದರ್ಭಿಕ ಅಥವಾ ನಿಯತಕಾಲಿಕ ವಿವರ ಪಟ್ಟಿಕೆಗಳನ್ನು ಸಲ್ಲಿಸುವಂತೆ ಕಾರ್ಖಾನೆಗಳ ಒಡೆಯರನ್ನು, ಅಧಿಭೋಗದಾರರನ್ನು ಅಥವಾ ವ್ಯವಸ್ಥಾಪಕರನ್ನು ಅಗತ್ಯಪಡಿಸಿ ನಿಯಮಗಳನ್ನು ರಚಿಸಬಹುದು.

**111. ಕೆಲಸಗಾರರ ಬಾಧ್ಯತೆಗಳು.–** (1) ಕಾರ್ಖಾನೆಯಲ್ಲಿನ ಯಾರೇ ಕೆಲಸಗಾರನು,–

(ಎ) ಕಾರ್ಖಾನೆಯಲ್ಲಿನ ಕೆಲಸಗಾರರ ಆರೋಗ್ಯವನ್ನು, ಸುರಕ್ಷತೆಯನ್ನು ಅಥವಾ ಕಲ್ಯಾಣವನ್ನು ಸುನಿಶ್ಚಿತಗೊಳಿಸುವ ಉದ್ದೇಶಗಳಿಗಾಗಿ ಅದರಲ್ಲಿ ಒದಗಿಸಲಾದ ಯಾವುದೇ ಸಾಧನ ಸಾಮಗ್ರಿ, ಅನುಕೂಲತೆ ಅಥವಾ ಇತರ ವಸ್ತುವಿಗೆ ಸಂಬಂಧಿಸಿದಂತೆ ಉದ್ದೇಶಪೂರ್ವಕವಾಗಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ ಅಥವಾ ಅವುಗಳನ್ನು ದುರುಪಯೋಗಪಡಿಸಿಕೊಳ್ಳತಕ್ಕದ್ದಲ್ಲ;

(ಬಿ) ತನಗೆ ಅಥವಾ ಇತರರಿಗೆ ಅಪಾಯವನ್ನುಂಟು ಮಾಡುವ ಸಂಭವವಿರುವ ಯಾವುದೇ ಕಾರ್ಯವನ್ನು ಉದ್ದೇಶಪೂರ್ವಕವಾಗಿ ಮತ್ತು ಯುಕ್ತ ಕಾರಣವಿಲ್ಲದೆ ಮಾಡತಕ್ಕದ್ದಲ್ಲ; ಮತ್ತು

(ಸಿ) ಕಾರ್ಖಾನೆಯಲ್ಲಿನ ಕೆಲಸಗಾರರ ಆರೋಗ್ಯ ಅಥವಾ ಸುರಕ್ಷತೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಗಳಿಗಾಗಿ ಅದರಲ್ಲಿ ಒದಗಿಸಿದ ಯಾವುದೇ ಸಾಧನ–ಸಾಮಗ್ರಿಯನ್ನು ಅಥವಾ ಇತರ ವಸ್ತುವನ್ನು ಉಪಯೋಗಿಸುವುದನ್ನು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸತಕ್ಕದ್ದಲ್ಲ.

(2) ಕಾರ್ಖಾನೆಯಲ್ಲಿ ನಿಯೋಜಿತನಾದ ಯಾರೇ ಕೆಲಸಗಾರನು ಈ ಪ್ರಕರಣದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ, ಅವನು ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**111ಎ. ಕೆಲಸಗಾರರ ಹಕ್ಕುಗಳು, ಇತ್ಯಾದಿ.–** ಪ್ರತಿಯೊಬ್ಬ ಕೆಲಸಗಾರನು,–

(i) ಕೆಲಸದಲ್ಲಿ ತೊಡಗಿರುವಾಗ ಅವನ ಆರೋಗ್ಯ ಮತ್ತು ಸುರಕ್ಷತೆಗೆ ಸಂಬಂಧಿಸಿದ ಮಾಹಿತಿಯನ್ನು ಅಧಿಭೋಗದಾರನಿಂದ ಪಡೆಯಲು;

(ii) ಕಾರ್ಖಾನೆಯೊಳಗೆ ಸಾಧ್ಯವಿರುವಲ್ಲೆಲ್ಲಾ ತರಬೇತಿ ಪಡೆಯುವುದು ಅಥವಾ ಚೀಫ್ ಇನ್ಸ್‌ಪೆಕ್ಟರನು ಯಥೋಚಿತವಾಗಿ ಅನುಮೋದಿಸಿದ, ಕೆಲಸದಲ್ಲಿ ತೊಡಗಿರುವ ಕೆಲಸಗಾರರ ಆರೋಗ್ಯ ಮತ್ತು ಸುರಕ್ಷತೆ ಬಗ್ಗೆ ಅವರಿಗೆ ಎಲ್ಲಿ ತರಬೇತಿ ನೀಡಲಾಗುತ್ತಿದೆಯೋ ಆ ತರಬೇತಿ ಕೇಂದ್ರದಲ್ಲಿ ಅಥವಾ ಸಂಸ್ಥೆಯಲ್ಲಿ ತರಬೇತಿ ಪಡೆಯುವುದಕ್ಕಾಗಿ ಅಧಿಭೋಗದಾರನ ಮೂಲಕ ತನ್ನನ್ನು ಪ್ರಾಯೋಜಿಸಿಕೊಳ್ಳಲು;

(iii) ಕಾರ್ಖಾನೆಯಲ್ಲಿ ತನ್ನ ಆರೋಗ್ಯ ರಕ್ಷಣೆಗಾಗಿ ಅಥವಾ ಸುರಕ್ಷತೆಗಾಗಿ ಸಾಕಷ್ಟು ವ್ಯವಸ್ಥೆ ಇಲ್ಲದಿರುವ ವಿಷಯದ ಬಗ್ಗೆ ನೇರವಾಗಿ ಅಥವಾ ತನ್ನ ಪ್ರತಿನಿಧಿಯ ಮೂಲಕ ಇನ್ಸ್‌ಪೆಕ್ಟರನಿಗೆ ನಿರೂಪಿಸಲು

– ಹಕ್ಕನ್ನು ಹೊಂದಿರತಕ್ಕದ್ದು.

**112. ನಿಯಮಗಳನ್ನು ರಚಿಸಲು ಸಾಮಾನ್ಯ ಅಧಿಕಾರ.–** ರಾಜ್ಯ ಸರ್ಕಾರವು ಈ ಅಧಿನಿಯಮದ ಯಾವುದೇ ಉಪಬಂಧದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ ವಿಹಿತವೆಂದು ಪರ್ಯಾಲೋಚಿಸಬಹುದಾದಂಥ ಯಾವುದೇ ವಿಷಯಕ್ಕಾಗಿ ಉಪಬಂಧಿಸಿ ನಿಯಮಗಳನ್ನು ರಚಿಸಬಹುದು.

**113. ನಿರ್ದೇಶನಗಳನ್ನು ನೀಡಲು ಕೇಂದ್ರದ ಅಧಿಕಾರಗಳು.–** ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಬಗ್ಗೆ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

**114. ಸೌಲಭ್ಯಗಳಿಗಾಗಿ ಮತ್ತು ಅನುಕೂಲತೆಗಳಿಗಾಗಿ ಯಾವುದೇ ಚಾರ್ಜು ಇರತಕ್ಕದ್ದಲ್ಲ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಧಿಭೋಗದಾರನು ಒದಗಿಸಬೇಕಾದ ಯಾವುದೇ ವ್ಯವಸ್ಥೆಗೆ ಅಥವಾ ಸೌಲಭ್ಯಗಳಿಗೆ ಅಥವಾ ಸರಬರಾಜು ಮಾಡಬೇಕಾದ ಯಾವುದೇ ಸಾಧನ ಸಾಮಗ್ರಿಗಳಿಗೆ ಅಥವಾ ಪರಿಕರಗಳಿಗೆ ಸಂಬಂಧಿಸಿದಂತೆ 46ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಯಾವುದೇ ಫೀಜನ್ನು ಅಥವಾ ಚಾರ್ಜನ್ನು ಯಾರೇ ಕೆಲಸಗಾರನಿಂದ ವಸೂಲು ಮಾಡತಕ್ಕದ್ದಲ್ಲ.

**115. ನಿಯಮಗಳ ಪ್ರಕಟಣೆ.–** (1) ಈ ಅಧಿನಿಯಮದ ಮೇರೆಗೆ ರಚಿಸಿದ ಎಲ್ಲಾ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಅವು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟಿರತಕ್ಕದ್ದು ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 23ನೇ ಪ್ರಕರಣದ (3)ನೇ ಖಂಡದ ಮೇರೆಗೆ ನಿರ್ದಿಷ್ಟಪಡಿಸಬೇಕಾದ ದಿನಾಂಕವು ಪ್ರಸ್ತಾವಿತ ನಿಯಮಗಳ ಕರಡನ್ನು ಪ್ರಕಟಿಸಿದಂಥ ದಿನಾಂಕದಿಂದ ನಲವತ್ತೈದು ದಿವಸಗಳಿಗೆ ಕಡಿಮೆ ಇಲ್ಲದಂತೆ ಇರತಕ್ಕದ್ದು.

"(2) ಈ ಅಧಿನಿಯಮದ ಅಡಿಯಲ್ಲಿ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸತಕ್ಕದ್ದು."

**116. ಸರ್ಕಾರಿ ಕಾರ್ಖಾನೆಗಳಿಗೆ ಅಧಿನಿಯಮದ ಅನ್ವಯ.–** ಅನ್ಯಥಾ ಉಪಬಂಧಿಸಿದ ಹೊರತು ಈ ಅಧಿನಿಯಮವು ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಕಾರ್ಖಾನೆಗಳಿಗೆ ಅನ್ವಯವಾಗತಕ್ಕದ್ದು.

**117. ಈ ಅಧಿನಿಯಮದ ಮೇರೆಗೆ ಕಾರ್ಯನಿರ್ವಹಿಸುವ ವ್ಯಕ್ತಿಗಳಿಗೆ ರಕ್ಷಣೆ.–** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**118. ಮಾಹಿತಿಯನ್ನು ಬಹಿರಂಗಪಡಿಸುವುದರ ಮೇಲೆ ನಿರ್ಬಂಧ.–** (1) ಯಾರೇ ಇನ್ಸ್‌ಪೆಕ್ಟರ್‌ನು ಸೇವೆಯಲ್ಲಿರುವಾಗ ಅಥವಾ ಆ ಸೇವೆಯನ್ನು ಬಿಟ್ಟ ತರುವಾಯ, ಈ ಅಧಿನಿಯಮದ ಜಾರಿಗೆ ಸಂಬಂಧಿಸಿದಂತೆ ಅಥವಾ ಅದರ ಉದ್ದೇಶಗಳಿಗಾಗಿ ಹೊರತು ಅನ್ಯಥಾ ಅವನ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುವಾಗ ಅವನ ತಿಳುವಳಿಕೆಗೆ ಬರಬಹುದಾದಂಥ ಯಾವುದೇ ತಯಾರಿಕೆಗೆ ಅಥವಾ ವಾಣಿಜ್ಯ ವ್ಯವಹಾರಕ್ಕೆ ಅಥವಾ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸತಕ್ಕದ್ದಲ್ಲ.

(2) ಉಪಪ್ರಕರಣ (1)ರಲ್ಲಿರುವುದು ಯಾವುದೂ, ಅಂಥ ವ್ಯವಹಾರಕ್ಕೆ ಅಥವಾ ಕಾರ್ಯವಿಧಾನಕ್ಕೆ ಸಂಬಂಧಿಸಿದ ಒಡೆಯನ ಲಿಖಿತದ ಪೂರ್ವಸಮ್ಮತಿಯೊಂದಿಗೆ ಅಥವಾ ಈ ಅಧಿನಿಯಮದ ಅನುಸರಣೆಯಲ್ಲಿ ಯಾವುದೇ ಕಾನೂನು ವ್ಯವಹರಣೆಯ (ಮಧ್ಯಸ್ಥಿಕೆಯನ್ನೂ ಒಳಗೊಂಡು) ಅಥವಾ ಈ ಅಧಿನಿಯಮಕ್ಕೆ ಅನುಸಾರವಾಗಿಯಾಗಲಿ ಅಥವಾ ಅನ್ಯಥಾ ಆಗಲಿ ತೆಗೆದುಕೊಳ್ಳಬಹುದಾದಂಥ ಯಾವುದೇ ಕ್ರಿಮಿನಲ್ ವ್ಯವಹರಣೆಯ ಉದ್ದೇಶಗಳಿಗಾಗಿ ಅಥವಾ ಹಿಂದೆ ಹೇಳಿದಂಥ ವ್ಯವಹರಣೆಗಳ ಯಾವುದೇ ವರದಿಯ ಉದ್ದೇಶಗಳಿಗಾಗಿ ಮಾಡಿದ ಯಾವುದೇ ಮಾಹಿತಿಯ ಬಹಿರಂಗಪಡಿಸುವಿಕೆಗೆ ಅನ್ವಯವಾಗತಕ್ಕದ್ದಲ್ಲ.

(3) ಯಾರೇ ಇನ್ಸ್‌ಪೆಕ್ಟರ್‌ನು ಉಪಪ್ರಕರಣ (1)ರ ಉಪಬಂಧಗಳನ್ನು ಉಲ್ಲಂಘಿಸಿದರೆ, ಅವನು ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**118ಎ. ಮಾಹಿತಿಯನ್ನು ಬಹಿರಂಗಪಡಿಸುವುದರ ಮೇಲೆ ನಿರ್ಬಂಧ.–** (1) ಪ್ರತಿಯೊಬ್ಬ ಇನ್ಸ್‌ಪೆಕ್ಟರ್‌ನು, ಈ ಅಧಿನಿಯಮದ ಯಾವುದೇ ಉಪಬಂಧದ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ, ತನ್ನ ಗಮನಕ್ಕೆ ತರಲಾದ ಯಾವುದೇ ಫಿರ್ಯಾದಿನ ಮೂಲವನ್ನು ರಹಸ್ಯವಾದುದೆಂದು ಪರಿಗಣಿಸತಕ್ಕದ್ದು.

(2) ಯಾರೇ ಇನ್ಸ್‌ಪೆಕ್ಟರ್‌ನು, ಈ ಅಧಿನಿಯಮದ ಮೇರೆಗೆ ಪರಿಶೀಲನೆ ಮಾಡುವಾಗ, ದೂರಿನ ಸ್ವೀಕೃತಿಗೆ ಅನುಸಾರವಾಗಿ ಪರಿಶೀಲನೆ ಮಾಡಲಾಗಿದೆ ಎಂದು ಅಧಿಭೋಗದಾರನಿಗೆ, ವ್ಯವಸ್ಥಾಪಕನಿಗೆ ಅಥವಾ ಅವನ ಪ್ರತಿನಿಧಿಗೆ ಬಹಿರಂಗಪಡಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ, ದೂರು ಸಲ್ಲಿಸಿದ ವ್ಯಕ್ತಿಯು ತನ್ನ ಹೆಸರನ್ನು ಬಹಿರಂಗಪಡಿಸಲು ಸಮ್ಮತಿ ನೀಡಿರುವ ಯಾವುದೇ ಸಂದರ್ಭಕ್ಕೆ ಅನ್ವಯಿಸತಕ್ಕದ್ದಲ್ಲ.

**119. 1970ರ 37ನೇ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮವು ಪರಿಣಾಮವನ್ನು ಹೊಂದಿರತಕ್ಕದ್ದು.–** ಈ ಅಧಿನಿಯಮದ ಉಪಬಂಧಗಳು ಕರಾರು ಕಾರ್ಮಿಕ (ವಿನಿಯಮನ ಮತ್ತು ರದ್ಧತಿ) ಅಧಿನಿಯಮ, 1970 (1970ರ 37)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು.

**120. ನಿರಸನ ಮತ್ತು ಉಳಿಸುವಿಕೆಗಳು.–** ಈ ಪ್ರಕರಣಕ್ಕೆ ಅನುಬಂಧಿಸಿದ ಕೋಷ್ಟಕದಲ್ಲಿ ವಿವರಿಸಿದ ಅಧಿನಿಯಮಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, ಸದರಿ ಅಧಿನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು, ಈ ಅಧಿನಿಯಮವು ಜಾರಿಯಲ್ಲಿದ್ದಾಗ ಮಾಡಬಹುದಾಗಿದ್ದರೆ ಅವುಗಳನ್ನು ಈ ಅಧಿನಿಯಮದಡಿಯಲ್ಲಿ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

**ಕೋಷ್ಟಕ:–** (ಅಧಿನಿಯಮಗಳನ್ನು ನಿರಸನಗೊಳಿಸಲಾಗಿದೆ) ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 1950 (1950ರ 35)ರ 2ನೇ ಪ್ರಕರಣ ಮತ್ತು Iನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

## ಮೊದಲನೇ ಅನುಸೂಚಿ

(ಪ್ರಕರಣ 2(ಸಿಬಿ) ನೋಡಿ)

## ಅಪಾಯಕಾರಿ ಕಾರ್ಯವಿಧಾನಗಳನ್ನು ಒಳಗೊಂಡಿರುವ ಕೈಗಾರಿಕೆಗಳ ಪಟ್ಟಿ

1. ಕಬ್ಬಿಣ ಲೋಹದ ಸಂಸ್ಕರಣಾ ಕೈಗಾರಿಕೆಗಳು:
   - ಸಂಯೋಜಿತ ಕಬ್ಬಿಣ ಮತ್ತು ಉಕ್ಕು
   - ಕಬ್ಬಿಣ ಮಿಶ್ರಿತ ಲೋಹಗಳು
   - ವಿಶೇಷ ಉಕ್ಕುಗಳು
2. ಕಬ್ಬಿಣೇತರ ಲೋಹಸಂಸ್ಕರಣಾ ಕೈಗಾರಿಕೆಗಳು
   - ಪ್ರಾಥಮಿಕ ಲೋಹ ಸಂಸ್ಕರಣಾ ಕೈಗಾರಿಕೆಗಳು ಎಂದರೆ ಸತು, ಸೀಸ, ತಾಮ್ರ, ಮ್ಯಾಂಗನೀಸ್ ಮತ್ತು ಅಲ್ಯುಮಿನಿಯಂ
3. ಎರಕಾಗಾರಗಳು (ಕಬ್ಬಿಣ ಮತ್ತು ಕಬ್ಬಿಣೇತರ)
   - ಮರಳಿನ ಮತ್ತು ಸ್ಫೋಟಗೊಳಿಸುವ ಮೂಲಕ ಸ್ವಚ್ಛಗೊಳಿಸುವುದು ಅಥವಾ ಮೃದುಗೊಳಿಸುವುದು; ಒರಟುಗೊಳಿಸುವುದೂ ಸೇರಿದಂತೆ ಎರಕ ಹೊಯ್ಯುವುದು ಮತ್ತು ಆಕಾರ ಕೊಡುವುದು
4. ಕಲ್ಲಿದ್ದಲು (ಕಲ್ಲಿದ್ದಲು ಕಿಟ್ಟ ಸೇರಿದಂತೆ) ಕೈಗಾರಿಕೆಗಳು
   - ಕಲ್ಲಿದ್ದಲು, ಕಂದು ಕಲ್ಲಿದ್ದಲು, ಕಿಟ್ಟ, ಇತ್ಯಾದಿ
   - ಇಂಧನ ಅನಿಲ (ಕಲ್ಲಿದ್ದಲು ಅನಿಲ, ಉತ್ಪಾದಕ ಅನಿಲ, ಜಲ ಅನಿಲ ಸೇರಿದಂತೆ)
5. ವಿದ್ಯುತ್ ಉತ್ಪಾದನಾ ಕೈಗಾರಿಕೆಗಳು
6. ತಿರುಳು ಮತ್ತು ಕಾಗದ (ಕಾಗದ ಉತ್ಪನ್ನಗಳು ಸೇರಿದಂತೆ) ಕೈಗಾರಿಕೆಗಳು
7. ರಸಗೊಬ್ಬರ ಕೈಗಾರಿಕೆಗಳು
   - ನೈಟ್ರೋಜನಸ್
   - ಫಾಸ್‌ಫೆಟಿಕ್
   - ಮಿಶ್ರ
8. ಸಿಮೆಂಟ್ ಕೈಗಾರಿಕೆಗಳು
   - ಪೋರ್ಟ್‌ಲ್ಯಾಂಡ್ ಸಿಮೆಂಟ್ (ಕಿಟ್ಟದ ಸಿಮೆಂಟ್, ಪುಜ್ಜೋಲೋನಾ ಸಿಮೆಂಟ್ ಮತ್ತು ಅವುಗಳ ಉತ್ಪನ್ನಗಳೂ ಸೇರಿದಂತೆ)
9. ಪೆಟ್ರೋಲಿಯಂ ಕೈಗಾರಿಕೆಗಳು
   - ತೈಲ ಶುದ್ಧೀಕರಣ
   - ಕೀಲೆಣ್ಣೆ ಮತ್ತು ಗ್ರೀಸ್
10. ಪೆಟ್ರೋಕೆಮಿಕಲ್ ಕೈಗಾರಿಕೆಗಳು
11. ಔಷಧಗಳು ಮತ್ತು ಔಷಧ ತಯಾರಿಕಾ ಕೈಗಾರಿಕೆಗಳು
    - ನಿದ್ರಾಜನಕಗಳು, ಔಷಧಿಗಳು ಮತ್ತು ಔಷಧ ತಯಾರಿಕೆ
12. ಕಿಣ್ವ ಕೈಗಾರಿಕೆಗಳು (ಭಟ್ಟಿ ಕಾರ್ಖಾನೆಗಳು ಮತ್ತು ಮದ್ಯ ತಯಾರಿಕಾ ಕಾರ್ಖಾನೆಗಳು)
13. ರಬ್ಬರ್ (ಸಿಂಥೆಟಿಕ್ ಕೈಗಾರಿಕೆಗಳು)
14. ಪೇಂಟ್ ಮತ್ತು ವರ್ಣದ್ರವ್ಯ ಕೈಗಾರಿಕೆಗಳು
15. ಚರ್ಮ ಹದಗೊಳಿಸುವ ಕೈಗಾರಿಕೆಗಳು
16. ವಿದ್ಯುಲ್ಲೇಪನ ಕೈಗಾರಿಕೆಗಳು
17. ರಾಸಾಯನಿಕ ಕೈಗಾರಿಕೆಗಳು
    - ಕೋಕ್ ಒಲೆಯ ಉಪ-ಉತ್ಪನ್ನಗಳು ಮತ್ತು ಕೊಲತಾರ ಭಟ್ಟಿ ಉತ್ಪನ್ನಗಳು
    - ಕೈಗಾರಿಕಾ ಅನಿಲಗಳು (ಸಾರಜನಕ, ಆಮ್ಲಜನಕ, ಅಸೆಟಿಲಿನ್, ಆರ್ಗಾನ್, ಇಂಗಾಲಡೈಆಕ್ಸೈಡ್, ಜಲಜನಕ - ಗಂಧಕಾಮ್ಲ, ನೈಟ್ರಸ್ ಆಕ್ಸೈಡ್, ಹ್ಯಾಲೋಕೃತ ಹೈಡ್ರೋಕಾರ್ಬನ್, ಓಜೋನ್, ಇತ್ಯಾದಿ
    - ಕೈಗಾರಿಕಾ ಕಾರ್ಬನ್
    - ಕ್ಷಾರ ಮತ್ತು ಆಮ್ಲ
    - ಕ್ರೋಮೇಟ್ಸ್ ಮತ್ತು ಡೈಕ್ರೋಮೇಟ್ಸ್

– ಸೀಸ ಮತ್ತು ಅದರ ಮಿಶ್ರಣಗಳು

– ವಿದ್ಯುದ್ರಾಸಾಯನಿಕಗಳು (ಮೆಟಾಲಿಕ್ ಸೋಡಿಯಂ, ಪೊಟ್ಯಾಸಿಯಂ ಮತ್ತು ಮ್ಯಾಗ್ನೆಸಿಯಂ, ಕ್ಲೋರೇಟ್ಸ್, ಪೆರ್‌ಕ್ಲೋರೇಟ್ಸ ಮತ್ತು ಪೆರಾಕ್ಸೈಡ್ಸ್)

– ವಿದ್ಯುತ್ ಶಾಖದ ಉತ್ಪನ್ನಗಳು (ಕೃತಕ ಘರ್ಷಕ, ಕ್ಯಾಲ್ಸಿಯಂ ಕಾರ್ಬೈಡ್)

– ನೈಟ್ರೋಜನ್ ಮಿಶ್ರಣಗಳು (ಸೈನೈಡ್ಸ್, ಸೈನಾಮೈಡ್ಸ್ ಮತ್ತು ಇತರ ನೈಟ್ರೋಜನ್ ಮಿಶ್ರಣಗಳು)

– ರಂಜಕ ಮತ್ತು ಅದರ ಮಿಶ್ರಣಗಳು

– ಹ್ಯಾಲೋಜಿನ್ ಮತ್ತು ಹ್ಯಾಲೋಜಿನ್‌ಕೃತ ಮಿಶ್ರಣಗಳು (ಕ್ಲೋರಿನ್, ಫ್ಲೋರಿನ್, ಬ್ರೋಮಿನ್, ಮತ್ತು ಅಯೋಡಿನ್)

– ಸ್ಫೋಟಕಗಳು (ಕೈಗಾರಿಕಾ ಸ್ಫೋಟಕಗಳು ಮತ್ತು ಡೆಟನೇಟರ್ಸ್ ಮತ್ತು ಫ್ಯೂಜ್‌ಗಳೂ ಸೇರಿದಂತೆ)

18. ಕೀಟನಾಶಕಗಳು, ಶಿಲೀಂದ್ರನಾಶಕಗಳು, ಸಸ್ಯನಾಶಕ ಮತ್ತು ಇತರ ಕ್ರಿಮಿನಾಶಕ ಕೈಗಾರಿಕೆಗಳು
19. ಸಿಂಥೆಟಿಕ್ ರೇಜಿನ್ ಮತ್ತು ಪ್ಲಾಸ್ಟಿಕ್
20. ಮಾನವ ನಿರ್ಮಿತ ಫೈಬರ್ (ಕೋಶಯುಕ್ತ ಅಥವಾ ಕೋಶರಹಿತ) ಕೈಗಾರಿಕೆಗಳು
21. ವಿದ್ಯುತ್ಸಂಗ್ರಹಣ ಸಾಧನಗಳ ತಯಾರಿಕೆ ಮತ್ತು ದುರಸ್ತಿ
22. ಗಾಜು ಮತ್ತು ಸಿರಾಮಿಕ್ಸ್
23. ಲೋಹಗಳನ್ನು ಸಾಣೆ ಹಿಡಿಯುವುದು ಅಥವಾ ಹೊಳಪು ಕೊಡುವುದು
24. ಕಲ್ನಾರು ಅಥವಾ ಅದರ ಉತ್ಪನ್ನಗಳ ತಯಾರಿಕೆ, ನಿರ್ವಹಣೆ ಮತ್ತು ಸಂಸ್ಕರಣೆ
25. ವನಸ್ಪತಿ ಮತ್ತು ಪ್ರಾಣಿ ಮೂಲಗಳಿಂದ ತೆಗೆದ ಎಣ್ಣೆ ಮತ್ತು ಕೊಬ್ಬು
26. ಬೆಂಜಿನ್ ಮತ್ತು ಬೆಂಜಿನ್‌ನ್ನು ಒಳಗೊಂಡಿರುವ ಪದಾರ್ಥಗಳ ತಯಾರಿಕಾ ಪ್ರಕ್ರಿಯೆ ಮತ್ತು ಉಪಯೋಗ
27. ಕಾರ್ಬನ್ ಡೈ ಸಲ್ಫೈಡ್ ಒಳಗೊಂಡಿರುವ ತಯಾರಿಕಾ ಪ್ರಕ್ರಿಯೆಗಳು ಮತ್ತು ಕಾರ್ಯಾಚರಣೆ
28. ವರ್ಣ ಮತ್ತು ಅವುಗಳ ಮಧ್ಯವರ್ತಿಗಳೂ ಒಳಗೊಂಡಿರುವ ವರ್ಣದ್ರವ್ಯ ಪದಾರ್ಥ
29. ಭಾರಿ ಉರಿ ಹೊತ್ತುಕೊಳ್ಳುವ ದ್ರವ ಮತ್ತು ಅನಿಲ

## ಎರಡನೇ ಅನುಸೂಚಿ

**(ಪ್ರಕರಣ 41 ಎಫ್ ನೋಡಿ)**

**ಕೆಲಸದ ಪರಿಸರದಲ್ಲಿ ಕೆಲವು ರಾಸಾಯನಿಕ ಪದಾರ್ಥಗಳ ಅಂಗೀಕಾರಾರ್ಹ ಮಟ್ಟಗಳು**

| ಕ್ರಮ ಸಂಖ್ಯೆ | ಪದಾರ್ಥ | ಬಹಿರಂಗವಾಗಿಡುವುದಕ್ಕೆ ಅಂಗೀಕಾರಾರ್ಹ ಮಿತಿಗಳು | | | |
|---|---|---|---|---|---|
| | | ಸಮಯಾಧಾರಿತ ಸರಾಸರಿ ಸಾಂದ್ರೀಕರಣ (8 ಗಂಟೆ) | | ಅಲ್ಪಾವಧಿ ತೆರೆದಿಡುವಿಕೆಯ ಮಿತಿ (15 ನಿಮಿಷ)* | |
| | | ಪಿಪಿಎಂ | ಎಂಜಿ/ಎಂ$^3$ | ಪಿಪಿಎಂ | ಎಂಜಿ/ಎಂ$^3$** |
| 1 | 2 | 3 | 4 | 5 | 6 |
| 1. | ಆಸಿಟಾಲ್ಡಿಹೈಡ್ | 100 | 180 | 150 | 270 |
| 2. | ಆಸೀಟಿಕ್ ಆಮ್ಲ | 10 | 25 | 15 | 37 |
| 3. | ಆಸಿಟೋನ್ | 750 | 1780 | 1000 | 2375 |
| 4. | ಆಕ್ರೋಲಿನ್ | 0.1 | 0.25 | 0.3 | 0.8 |
| 5. | ಆಕ್ರಿಲೋನೈಟ್ರಿಲ್ ಸ್ಕಿನ್ | 2 | 4.5 | – | – |
| 6. | ಆಲ್ಡ್ರಿನ್ ಸ್ಕಿನ್ | – | 0.25 | – | – |
| 7. | ಅಲೈಕ್ಲೋರೈಡ್ | 1 | 3 | 2 | 6 |
| 8. | ಅಮೋನಿಯಾ | 25 | 18 | 35 | 27 |
| 9. | ಅನಿಲೀನ್– ಸ್ಕಿನ್ | 2 | 10 | – | – |
| 10. | ಅನಿಸೆಡಿನ್ (ಓಪಿ–ಐಸೋಮರ್ಸ್) – ಸ್ಕಿನ್ | 0.1 | 0.5 | – | – |

| | | | | | |
|---|---|---|---|---|---|
| 11. | ಅರ್ಸನಿಕ್ ಮತ್ತು ಕರಗಬಲ್ಲ ಮಿಶ್ರಣಗಳು (AS ರೂಪದಲ್ಲಿ) | – | 0.2 | – | – |
| 12. | ಬೆಂಜಿನ್ (HC) | 10 | 30 | – | – |
| 13. | ಬೆರಿಲಿಯಂ ಮತ್ತು ಮಿಶ್ರಣ (ಬೆರಿಲಿಯಂನ ರೂಪದಲ್ಲಿ) (SC) | – | 0.002 | – | – |
| 14. | ಬೊರಾನ್ ಟ್ರೈಫ್ಲ್ಯುರೈಡ್–ಸಿ | 1 | 3 | – | – |
| 15. | ಬ್ರೋಮಿನ್ | 0.1 | 0.7 | 0.3 | 2 |
| 16. | ಬ್ಯೂಟೇನ್ | 800 | 1900 | – | – |
| 17. | 2–ಬ್ಯೂಟೇನೇನ್(ಮೀಥೈಲ್– ಈಥೈಲ್ ಕೆಟೋನ್–ಎಂಇಕೆ) | 200 | 590 | 300 | 835 |
| 18. | ಎನ್–ಬ್ಯೂಟಿಲ್ ಅಸಟೇಟ್ | 150 | 710 | 200 | 950 |
| 19. | ಎನ್–ಬ್ಯೂಟಿಲ್ ಅಲ್ಕೋಹಾಲ್–ಸ್ಕಿನ್–ಸಿ | 50 | 150 | – | – |
| 20. | ಸೆಕ್/ ಟರ್ಟ್ ಬ್ಯೂಟಿಲ್ ಅಸಿಟೇಟ್ | 200 | 950 | – | – |
| 21. | ಬ್ಯೂಟೈಲ್ ಮರ್ಕ್ಯಾಪ್ಟನ್ | 0.5 | 1.5 | – | – |
| 22. | ಕ್ಯಾಡ್ಮಿಯಂ ಧೂಳು ಮತ್ತು ಲವಣ (Cd ರೂಪದಲ್ಲಿ) | – | 0.05 | – | – |
| 23. | ಕ್ಯಾಲ್ಸಿಯಂ ಆಕ್ಸೈಡ್ | – | 2 | – | – |
| 24. | ಕಾರ್ಬರೈಲ್ (ಸೆವಿನ್) | – | 5 | – | – |
| 25. | ಕಾರ್ಬೊ ಫ್ಯೂರಾನ್ (ಫುರಾಡನ್) | – | 0.1 | – | – |
| 26. | ಕಾರ್ಬನ್ ಡೈ ಸಲ್ಫೈಡ್–ಸ್ಕಿನ್ | 10 | 30 | – | – |
| 27. | ಕಾರ್ಬನ್ ಮೊನಾಕ್ಸೈಡ್ | 50 | 55 | 400 | 440 |
| 28. | ಕಾರ್ಬನ್ ಟೆಟ್ರಾಕ್ಲೋರೈಡ್ – ಸ್ಕಿನ್ (SC) | 5 | 30 | – | – |
| 29. | ಕ್ಲೋರೈಡನ್–ಸ್ಕಿನ್ | – | 0.5 | – | 2 |
| 30. | ಕ್ಲೋರಿನ್ | 1 | 3 | 3 | 9 |
| 31. | ಕ್ಲೋರೋಬೆಂಜಿನ್ (ಮೋನೋಕ್ಲೋರೋಬೆಂಜಿನ್) | 75 | 350 | – | – |
| 32. | ಕ್ಲೋರೋಫಾರ್ಮ್ (SC) | 10 | 50 | – | – |
| 33. | ಬೆಸ್ (ಕ್ಲೋರೊಮೆಥಿಲ್) ಈಥರ್ (HC) | 0.001 | 0.005 | – | – |
| 34. | ಕ್ರೋಮಿಕ್ ಆಮ್ಲ ಮತ್ತು ಕ್ರೋಮೇಟ್ಸ್ (cr ರೂಪದಲ್ಲಿ) | – | 0.05 | – | – |
| 35. | ಕ್ರೋಮಸ್ ಲವಣಗಳು (cr ರೂಪದಲ್ಲಿ) | – | 0.5 | – | – |
| 36. | ತಾಮ್ರ ಧೂಮ | – | 0.2 | – | – |
| 37. | ಹತ್ತಿ ಧೂಳು, ಕಚ್ಚಾ* | – | 0.2 | – | – |

| | | | | | |
|---|---|---|---|---|---|
| 38. | ಕ್ರೆಸಾಲ್, ಎಲ್ಲಾ ಐಸೊಮರ್–ಸ್ಕಿನ್ | 5 | 22 | – | – |
| 39. | ಸೈನೈಡ್ (cs[1] ರೂಪದಲ್ಲಿ)–ಸ್ಕಿನ್ | – | 5 | – | – |
| 40. | ಸೈಅನಾಜಿನ್ | – | 10 | 20 | – |
| 41. | ಡಿ.ಡಿ.ಟಿ. (ಡೈಕ್ಲೋರೋಡ್ ಫಿನೈಲ್ ಟ್ರೈಕ್ಲೋರೋ ಈಥೇನ್) | – | 1 | – | – |
| 42. | ಡೈಮೆಟಿನ್–ಸ್ಕಿನ್ | 0.01 | 0.1 | – | – |
| 43. | ಡೈಜೋನಿನ್–ಸ್ಕಿನ್ | – | 0.1 | – | – |
| 44. | ಡೈಬುಟೈಲ್ ಫ್ತಲೇಟ್ | – | 5 | – | – |
| 45. | ಡೈಕ್ಲೋರ್‌ವೋಸ್ (ಡಿಡಿವಿಪಿ) –ಸ್ಕಿನ್ | 0.1 | 1 | – | – |
| 46. | ಡೈಎಲ್ಡ್ರಿನ್–ಸ್ಕಿನ್ | – | 0.25 | – | – |
| 47. | ಡೈನೈಟ್ರೊಬೆಂಜಿನ್ (ಎಲ್ಲಾ ಐಸೊಮೆರ್) –ಸ್ಕಿನ್ | 0.15 | 1 | – | – |
| 48. | ಡೈನೈಟ್ರೊಟೊಲ್ಯುನ್–ಸ್ಕಿನ್ | – | 1.5 | – | – |
| 49. | ಡೈಫಿನಾಯಿಲ್ (ಬೈಫಿನಾಯಿಲ್) | 0.2 | 1.5 | – | – |
| 50. | ಎಂಡೋಸಲ್ಫಾನ್ (ಥಯೋಡಾನ್) –ಸ್ಕಿನ್ | – | 0.1 | – | – |
| 51. | ಎಂಡ್ರಿನ್–ಸ್ಕಿನ್ | – | 0.1 | – | – |
| 52. | ಈಥೈಲ್ ಅಸಿಟೇಟ್ | 400 | 1400 | – | – |
| 53. | ಈಥೈಲ್ ಅಲ್ಕೊಹಾಲ್ | 1000 | 1900 | – | – |
| 54. | ಈಥೈಲಮಿನ್ | 10 | 18 | – | – |
| 55. | ಫ್ಲೋರೈಡ್ಸ್ (F ರೂಪದಲ್ಲಿ) | – | 2.5 | – | – |
| 56. | ಫ್ಲೋರಿನ್ | 1 | 2 | 2 | 4 |
| 57. | ಫಾರ್ಮಾಲ್ಡಿಹೈಡ್ (S.C.) | 1.0 | 1.5 | 2 | 3 |
| 58. | ಫಾರ್ಮಿಕ್ ಆಮ್ಲ | 5 | 9 | – | – |
| 59. | ಗ್ಯಾಸೊಲೀನ್ | 300 | 900 | 500 | 1500 |
| 60. | ಹೈಡ್ರೊಜಿನ್–ಸ್ಕಿನ್ (S.C.) | 0.1 | 0.1 | – | – |
| 61. | ಹೈಡ್ರೊಜಿನ್ ಕ್ಲೋರೈಡ್– C | 5 | 7 | – | – |
| 62. | ಹೈಡ್ರೋಜನ್ ಸೈನೈಡ್–ಸ್ಕಿನ್– C | 10 | 10 | – | – |
| 63. | ಹೈಡ್ರೋಜನ್ ಫ್ಲೋರೈಡ್ (F ರೂಪದಲ್ಲಿ) – C | 3 | 2.5 | – | – |
| 64. | ಹೈಡ್ರೋಜನ್ ಪರಾಕ್ಸೈಡ್ | 1 | 1.5 | – | – |
| 65. | ಹೈಡ್ರೋಜನ್ ಸಲ್ಫೆಡ್ | 10 | 14 | 15 | 21 |
| 66. | ಅಯೋಡೀನ್ – C | 0.1 | 1 | – | – |
| 67. | ಕಬ್ಬಿಣದ ಆಕ್ಸೈಡ್ ಧೂಮ ($Fe_2O_3$) (Fe ರೂಪದಲ್ಲಿ) | – | 5 | – | – |

* ವರ್ಟಿಕಲ್ ಎಲುಟ್ರಿಕೇಟರ್ ಕಾಟನ್ – ಡಸ್ಟ ಸ್ಯಾಂಪಲರ್ ಮೂಲಕ ಅಳತೆ ಮಾಡಲಾದಂತೆ ಲಿಂಟ್ – ಫ್ರೀಡಸ್ಟ್

| | | | | | |
|---|---|---|---|---|---|
| 68. | ಐಸೊಮೈಲ್ ಎಸಟಿಟ್ | 100 | 525 | – | – |
| 69. | ಐಸೊಮೈಲ್ ಅಲ್ಕೊಹಾಲ್ | 100 | 360 | 125 | 4500 |
| 70. | ಐಸೊಬ್ಯೂಟೈಲ್ ಅಲ್ಕೊಹಾಲ್ | 50 | 150 | – | – |
| 71. | ಸೀಸ, ಅಜೈವಿಕ, ಧೂಳು ಮತ್ತು ಧೂಮ (Pb ರೂಪದಲ್ಲಿ) | – | 0.15 | – | – |
| 72. | ಲಿಂಡೇನ್–ಸ್ಕಿನ್ | – | 0.5 | – | – |
| 73. | ಮೆಲಾಥಿಯನ್ – ಸ್ಕಿನ್ | – | 10 | – | – |
| 74. | ಮ್ಯಾಂಗನೀಸ್ (Mn ರೂಪದಲ್ಲಿ) ಧೂಳು ಮತ್ತು ಮಿಶ್ರಣಗಳು – C | – | 5 | – | – |
| 75. | ಮ್ಯಾಂಗನೀಸ್ ಧೂಮ (Mn ರೂಪದಲ್ಲಿ) | – | 1 | – | 3 |
| 76. | ಪಾದರಸ (Hg ರೂಪದಲ್ಲಿ) – ಸ್ಕಿನ್ | | | | |
| | (i) ಆಲ್ಕೈಲ್ ಮಿಶ್ರಣಗಳ | – | 0.01 | – | 0.03 |
| | (ii) ಆಲ್ಕೈಲ್ ವೇಪರ್ ಹೊರತುಪಡಿಸಿ ಎಲ್ಲಾ ರೂಪಗಳು | – | 0.05 | – | – |
| 77. | ಆರೈಲ್ ಮತ್ತು ಅಜೈವಿಕ ಮಿಶ್ರಣಗಳು | – | 0.1 | – | – |
| 78. | ಮಿಥೈಲ್ ಅಲ್ಕೊಹಾಲ್ (ಮೆತನಾಲ್) –ಸ್ಕಿನ್ | 200 | 260 | 250 | 310 |
| 79. | ಮಿಥೈಲ್ ಸೆಲೋಸಾಲ್ವ್ (2–ಮೆಥೂಕ್ಸಿ ಇತೆನಾಲ್) –ಸ್ಕಿನ್ | 5 | 16 | – | – |
| 80. | ಮಿಥೈಲ್ ಐಸೋಬ್ಯೂಟಿಲ್ ಕೆಟೋನ್ | 50 | 205 | 75 | 300 |
| 81. | ಮಿಥೈಲ್ ಐಸೋಸೈನೆಟ್ – ಸ್ಕಿನ್ | 0.02 | 0.05 | – | – |
| 82. | ನ್ಯಾಫ್ಥಲಿನ್ | 10 | 50 | 15 | 75 |
| 83. | ನಿಕ್ಕಲ್ ಕಾರ್ಬಾನೈಲ್ (Fi ರೂಪದಲ್ಲಿ) | 0.05 | 0.35 | – | – |
| 84. | ನೈಟ್ರಿಕ್ ಆಮ್ಲ | 2 | 5 | 4 | 10 |
| 85. | ನೈಟ್ರಿಕ್ ಆಕ್ಸೈಡ್ | 25 | 30 | – | – |
| 86. | ನೈಟ್ರೋಬೆನ್ಜೀನ್ – ಸ್ಕಿನ್ | 1 | 5 | – | – |
| 87. | ನೈಟ್ರೋಜನ್ ಡೈ ಆಕ್ಸೈಡ್ | 3 | 6 | 5 | 10 |
| 88. | ತೈಲಯುಕ್ತ ಖನಿಜ | – | 5 | – | 10 |
| 89. | ಓಜೋನ್ | 0.1 | 0.2 | 0.3 | 0.6 |
| 90. | ಪ್ಯಾರಾಥಿಯನ್ –ಸ್ಕಿನ್ | – | 0.1 | – | – |
| 91. | ಫೆನಾಲ್ –ಸ್ಕಿನ್ | 5 | 19 | – | – |
| 92. | ಫೋರೇಟ್ (ಥೈಮೆಟ್) –ಸ್ಕಿನ್ | – | 0.05 | – | 0.2 |
| 93. | ಫ಼ಾಸ್ಜೀನ್ (ಕಾರ್ಬನಿಲ್ ಕ್ಲೋರೈಡ್) | 0.1 | 0.4 | – | – |
| 94. | ಫ಼ಾಸ್ಫೈನ್ | 0.3 | 0.4 | 1 | 1 |
| 95. | ಫಾಸ್ಫರಿಕ್ ಆಮ್ಲ | – | 1 | – | 3 |
| 96. | ಫಾಸ್ಫರಸ್ (ಹಳದಿ) | – | 0.1 | – | – |

| | | | | | |
|---|---|---|---|---|---|
| 97. | ಫಾಸ್ಫರಸ್ ಪೆಂಟಾಕ್ಲೋರೈಡ್ | 0.1 | 1 | – | – |
| 98. | ಫಾಸ್ಫರಸ್ ಟ್ರೈಕ್ಲೋರೈಡ್ | 0.2 | 1.5 | 0.5 | 3 |
| 99. | ಪಿಕ್‌ರಿಕ್ ಆಮ್ಲ –ಸ್ಕಿನ್ | – | 0.1 | – | 0.3 |
| 100. | ಪಿರಿಡೀನ್ | 5 | 15 | – | – |
| 101. | ಸಿಲಾನ್ (ಸಿಲಿಕಾನ್ ಟೆಟ್ರಾಹೈಡ್ರೈಡ್) | 5 | 7 | – | – |
| 102. | ಸೋಡಿಯಂ ಹೈಡ್ರಾಕ್ಸೈಡ್ – | – | 2 | – | – |
| 103. | ಸ್ಟೈರೀನ್, ಮೋನೋಮರ್ (ಫಿನಾಯಿಲ್ ಈಥೈಲಿನ್) | 50 | 215 | 100 | 425 |
| 104. | ಸಲ್ಫರ್ ಡೈಆಕ್ಸೈಡ್ | 2 | 5 | 5 | 10 |
| 105. | ಸಲ್ಫರ್ ಹೆಕ್ಸಾಫ್ಲೋರೈಡ್ | 1000 | 6000 | – | – |
| 106. | ಸಲ್ಫ್ಯೂರಿಕ್ ಆಮ್ಲ | – | 1 | – | – |
| 107. | ಟೆಟ್ರಾಈಥೈಲ್ ಸೀಸ (Pb ರೂಪದಲ್ಲಿ) – ಸ್ಕಿನ್ | – | 0.1 | – | – |
| 108 | ಟೋಲ್ಯುಇನ್ (ಟೊಲ್ಯುಅಲ್) | 100 | 375 | 150 | 560 |
| 109. | ಓ–ಟೋಲ್ಯುಇಡಿಂಗ್ಝ್ – ಸ್ಕಿನ್ (S.C.) | 2 | 9 | – | – |
| 110. | ಟ್ರೈಬ್ಯುಟಿಲ್ ಫಾಸ್ಫೇಟ್ | 0.2 | 2.5 | – | – |
| 111. | ಟ್ರೈಕ್ಲೋರೋಈಥೈಲಿನ್ | 50 | 270 | 200 | 1080 |
| 112. | ಯುರೇನಿಯಂ, ನೈಸರ್ಗಿಕ (U ರೂಪದಲ್ಲಿ) | – | 0.2 | – | 0.6 |
| 113. | ವಿನೈಲ್ ಕ್ಲೋರೈಡ್ (ಹೆಚ್.ಸಿ) | 5 | 10 | – | – |
| 114. | ವೆಲ್ಡಿಂಗ್ ಧೂಮ | – | 5 | – | – |
| 115. | ಕ್ಸೈಲೀನ್ (ಓ–,ಎಂ–,ಪಿ–ಐಸೋಮರ್ಸ್) | 100 | 435 | 150 | 655 |
| 116. | ಝಿಂಕ್ ಆಕ್ಸೈಡ್ | | | | |
| | (i) ಧೂಮ | – | 5.0 | – | 10 |
| | (ii) ಧೂಳು (ಒಟ್ಟು ಧೂಳು) | – | 10.0 | – | – |
| 117. | ಜಿರ್ಕೋನಿಯಮ್ ಕಂಪೌಂಡ್ಸ್ (Zr ರೂಪದಲ್ಲಿ) | – | 5 | – | 10 |

ಪಿಪಿಎಂ³ — $25^0$ ಸೆ. ಮತ್ತು 760 ಟಾರ್. (ಪಾದರಸದ ಎಂಎಂ) ವಾಲ್ಯುಮ್‌ನಿಂದ ಮಲಿನಗೊಂಡ ವಾಯುವಿನ ಪ್ರತಿ ಮಿಲಿಯನ್ ಭಾಗದಲ್ಲಿರುವ ಭಾಷ್ಪದ ಅಥವಾ ಅನಿಲದ ಅಂಶ

ಎಂಜಿ/ಎಂ³ — ಪ್ರತಿ ಕ್ಯೂಬಿಕ್ ಮೀಟರ್ ವಾಯುವಿನಲ್ಲಿರುವ ಪದಾರ್ಥದ ಮಿಲಿ ಗ್ರಾಂಗಳು

* — ಅನುಕ್ರಮ ತೆರೆದಿಡುವುದರ ನಡುವಿನ ಮಧ್ಯಂತರವು ದಿನದಲ್ಲಿ ಕನಿಷ್ಠಪಕ್ಷ 60 ನಿಮಿಷಗಳೊಂದಿಗೆ ನಾಲ್ಕು ಬಾರಿಗಿಂತ ಹೆಚ್ಚಾಗಿರಬಾರದು

** —

$$\text{ಎಂಜಿ/ಎಂ}^3 = \frac{\text{ಅಣುವಿನ ತೂಕ}}{24.45} \times \text{ಪಿಪಿಎಂ}$$

ಸಿ — ಪರಮಾವಧಿ ಮಿತಿಯನ್ನು ತೋರಿಸುತ್ತದೆ

ಸ್ಕಿನ್ — ಲೋಳೆಪೊರೆ ಮತ್ತು ಕಣ್ಣೂ ಒಳಗೊಂಡಂತೆ ಸ್ಕಿನ್ ಮೂಲಕ ಒಟ್ಟಾರೆ ತೆರೆದಿಡುವುದರ ಸಂಭವನೀಯ ಪರಿಣಾಮವನ್ನು ಸೂಚಿಸುತ್ತದೆ.

ಎಸ್.ಸಿ ಶಂಕಿತ ಮಾನವ ಕ್ಯಾನ್ಸರ್‌ಜನಕವನ್ನು ಸೂಚಿಸುತ್ತದೆ
ಹೆಚ್.ಸಿ. ದೃಢಪಟ್ಟ ಮಾನವ ಕ್ಯಾನ್ಸರ್‌ಜನಕವನ್ನು ಸೂಚಿಸುವುದು

| ಪದಾರ್ಥ | ಅನುಮತಿಸಬಹುದಾದ ಸಮಯಾಧಾರಿತ ಸರಾಸರಿ ಸಾಂದ್ರೀಕೃತ ಭಾರ (ಟಿಡಬ್ಲ್ಯೂಎ) (8 ಗಂಟೆಗಳು) |
|---|---|
| ಸಿಲಿಕಾ $SiO_2$ | |
| (ಎ) ಸ್ಫಟಿಕ ರೂಪದ | |
| (i) ಸ್ಫಟಿಕ ಕಣ | |
| (1) ಧೂಳು ಕಣಗಳ ಪ್ರಮಾಣದಂತೆ | 10600 / (% ಸ್ಫಟಿಕ ಕಣ +10 $SiO_2$) ಎಂಪಿಪಿಸಿಎಂ |
| (2) ಉಸಿರಿನ ಮೂಲಕ ಒಳಸೇರಬಹುದಾದ ಧೂಳಿನ ಪ್ರಮಾಣದಲ್ಲಿ | 10 / (% ಉಸಿರಿನ ಮೂಲಕ ಒಳಸೇರಬಹುದಾದ ಸ್ಫಟಿಕ ಕಣ +2) ಎಂಜಿ/ಎಂ$^3$ |
| (3) ಒಟ್ಟು ಧೂಳಿನ ಪ್ರಮಾಣ | 30 / (% ಸ್ಫಟಿಕ ಕಣ +3 $SiO_2$) ಎಂಜಿ/ಎಂ$^3$ |
| (ii) ಕ್ರಿಸ್ಟೋಬೋಲೈಟ್ | ಸ್ಫಟಿಕ ಕಣದ ಸಂಬಂಧದಲ್ಲಿ ನೀಡಲಾದ ಮಿತಿಗಳ ಅರ್ಧ |
| (iii) ಟ್ರೈಡ್‌ಮೈಟ್ | ಸ್ಫಟಿಕ ಕಣದ ಸಂಬಂಧದಲ್ಲಿ ನೀಡಲಾದ ಮಿತಿಗಳ ಅರ್ಧ |
| (iv) ಸಿಲಿಕಾ, ಫ್ಯೂಸ್ಡ್ | ಸ್ಫಟಿಕ $SiO_2$ ಕಣಗಾಗಿರುವಂಥದೇ ಮಿತಿ |
| (v) ಟ್ರೈಪೋಲಿ | ಸ್ಫಟಿಕ $SiO_2$ ಕಣಕ್ಕೆ ಸಂಬಂಧಿಸಿದಂತೆ ನೀಡಲಾದ (2)ನೇ ಬಾಬಿನಲ್ಲಿನ ಸೂತ್ರದಲ್ಲಿರುವಂಥದೇ ಮಿತಿ |
| [1][(ಬಿ) ಸ್ಫುಟವಲ್ಲದ (ಅಸ್ಫಟಿಕ) ಸಿಲಿಕೇಟ್ | 10ಎಂಜಿ/ಎಂ$^3$, ಒಟ್ಟು ಧೂಳು |
| ಕಲ್ನಾರು (ಎಚ್.ಸಿ)<br>(ಎ) ಅಮೋಸೈಟ್ : 0.1 ಫೈಬರ್/ಸಿಸಿ***<br>(ಬಿ) ಕ್ರಿಸೋಟೈಲ್: 0.1 ಫೈಬರ್/ಸಿಸಿ***<br>(ಸಿ) ಕ್ರೊಸಿಡೋಲೈಟ್ :0.1 ಫೈಬರ್/ಸಿಸಿ*** | 2 ನಾರು ಎಳೆಗಳು/ ಎಂ.ಎಲ್ ಉದ್ದದಲ್ಲಿ 5 ಯುಎಂಗಿಂತ ದೊಡ್ಡದು ಮತ್ತು ಅಗಲದಲ್ಲಿ 3 ಯುಎಂಗಿಂತ ಚಿಕ್ಕದು |
| (ಸಿ) ಪೋರ್ಟ್‌ಲ್ಯಾಂಡ್ ಸಿಮೆಂಟ್ | 10ಎಂಜಿ/ಎಂ$^3$, ಶೇ.1 ಕ್ಕಿಂತ ಕಡಿಮೆ ಸ್ಫಟಿಕ ಕಣವನ್ನು ಒಳಗೊಂಡ ಒಟ್ಟು ಧೂಳು |
| (ಡಿ) ಕಲ್ಲಿದ್ದಲು ಧೂಳು | 2ಎಂಜಿ/ಎಂ$^3$, ಶೇಕಡ 5 ಕ್ಕಿಂತ ಕಡಿಮೆ ಸ್ಫಟಿಕ ಕಣವನ್ನು ಒಳಗೊಂಡಿರುವ ಉಸಿರಿನ ಮೂಲಕ ಒಳಸೇರಬಹುದಾದ ಧೂಳಿನ ಅಂಶ |

1. SO 3422 (ಇ) ದಿನಾಂಕ: 04-11-2013 ರ ಮೂಲಕ 12-11-2013 ರಿಂದ ಜಾರಿಗೆ ಬಂದಿದೆ.

ಎಂಪಿಪಿಸಿಎಂ – ಲೈಟ್ ಫೀಲ್ಡ್ ತಂತ್ರಜ್ಞಾನದ ಮೂಲಕ ಲೆಕ್ಕಹಾಕಿದ ಇಂಪೆಂಜರ್ ಮಾದರಿ ಗಳನ್ನಾಧರಿಸಿದ ಪ್ರತಿ ಕ್ಯೂಬಿಕ್ ಮೀಟರ್ ವಾಯುವಿನಲ್ಲಿರುವ ಮಿಲಿಯನ್ ಕಣಗಳು.

*** [(i) 5 ನಾರು ಎಳೆಗಳು ಉದ್ದದಲ್ಲಿ 5 μm ಗಿಂತ ದೊಡ್ಡದು ಮತ್ತು ಅಗಲದಲ್ಲಿ 5 μm ಗಿಂತ ಚಿಕ್ಕದು ಉದ್ದ ಅಗಲದ ಅನುಪಾತವು 3:1 ಕ್ಕಿಂತ ಸಮನಾಗಿ ಅಥವಾ ಹೆಚ್ಚಾಗಿ ಇರತಕ್ಕದ್ದು.

(ii) 400– 450 x ಮ್ಯಾಗ್ನಿಫಿಕೇಷನ್ (4ಎಂಎಂ ಅಬ್ಜೆಕ್ಟೀವ್) ಫೇಸ್ ಕಾಂಟ್ರಾಸ್ಟ್ ಇಲ್ಯುಮಿನೇಷನ್‌ನಲ್ಲಿ ಮೆಂಬ್ರೇ ಫಿಲ್ಟರ್ ಪದ್ಧತಿಯಲ್ಲಿ ನಿರ್ಧರಿಸಲಾದಂತೆ][1]

ಉಸಿರಾಟದ ಮೂಲಕ ಒಳಸೇರಬಹುದಾದ ಧೂಳು:

ಈ ಕೆಳಕಂಡ ಗುಣಲಕ್ಷಣಗಳೊಂದಿಗೆ ಸೈಜ್ ಸೆಲೆಕ್ಟರ್‌ನಿಂದ ಹಾದುಹೋಗುವ ಅಂಶ:

| ವಾಯುಗತಿಯ ವ್ಯಾಸ (ಯುಎಂ) (ಯೂನಿಟ್ ಸಾಂದ್ರತೆ ಕ್ಷೇತ್ರ) | ಹಾದು ಹೋಗುವ ಸೆಲೆಕ್ಟರ್‌ನ ಶೇಕಡಾ ಪ್ರಮಾಣ |
|---|---|
| < 2 | 90 |
| 2.5 | 75 |
| 3.5 | 50 |
| 5.0 | 25 |
| 10 | 0 |

[1][ಲೋಹ ಮನರ್ಬಳಕೆ ಕೈಗಾರಿಕೆಗಳಲ್ಲಿ ಸಾಮಾನ್ಯವಾಗಿ ಎದುರಾಗುವ (ಸಂಧಿಸುವ) ಕೆಲವು ರೇಡಿಯೋ ನ್ಯೂಕ್ಲೈಡ್‌ಗಳಿಗಾಗಿ ಅನುಮತಿಸಬಹುದಾದ ಸಾಂದ್ರೀಕರಣ ಕ್ರಿಯೆಯ ಮಟ್ಟ ಈ ಕೆಳಕಂಡಂತಿದೆ:

| ರೇಡಿಯೋ ನ್ಯೂಕ್ಲೈಡ್ | ರೇಡಿಯೋ ನ್ಯೂಕ್ಲೈಡ್ ಸಾಂದ್ರೀಕರಣ (ಬಿಕ್ಯೂ/ಜಿ*) |
|---|---|
| Co-60 | 0.1 |
| Cs-137 | 0.1 |
| Am-241 | 0.1 |
| Ir-192 | 0.1 |

**ಅಡಿ ಟಿಪ್ಪಣಿ:**

**1.** ಬಿಕ್ಯೂ/ಜಿ ಇದು ಪ್ರತಿ ಗ್ರಾಂಗೆ ಬೆಕೆರಲ್ ಪ್ರಮಾಣ. ಬೆಕೆರಲ್ ಎಂದರೆ ಪ್ರತಿ ಸೆಕೆಂಡಿಗೆ ರೇಡಿಯೋ ನ್ಯೂಕ್ಲೈಡ್‌ನ ಪರಿವರ್ತ ಮತ್ತು ಅಣು ವಿಕಿರಣ ಪಟುತ್ವದ ಎಸ್‌ಐ (SI) ಘಟಕ.

2. ಅಳತೆ ಸ್ಥಳದಲ್ಲಿ ಲೋಹ ಚೂರುಗಳ, ಅರೆ ಪೂರ್ಣಗೊಂಡ ಮತ್ತು ಪೂರ್ಣಗೊಳಿಸಿದ ಉತ್ಪನ್ನಗಳ ಹಾಗೆಯೇ ಹಿಂ ಹಂತಗಳ ಮೇಲಿನ ಅಳತೆಯು ಹೊರ ವಿಕಿರಣ ಮಟ್ಟಗಳನ್ನು ಅಳತೆಯು ಒಳಗೊಂಡಿರತಕ್ಕದ್ದು ಮತ್ತು ಅದರ ದಾಖಲೆಗಳ ಇಡತಕ್ಕದ್ದು. ವಸ್ತುವಿನ ಮೇಲೆ ವಿಕಿರಣ ಮಟ್ಟವು 20μ/h (ಪ್ರತಿ ಗಂಟೆಗೆ ಮೈಕ್ರೊ ವಿಕಿರಣ) ನಿಂದ ಹಿಂದಿನ ವಿಕಿರಣ ಮಟ್ಟವ ಮೀರಿದರೆ ಅದನ್ನು ಅಣು ಶಕ್ತಿ ನಿಯಂತ್ರಣ ಮಂಡಳಿಗೆ ಶೀಘ್ರವಾಗಿ ತಿಳಿಸತಕ್ಕದ್ದು.]

**ಮೂರನೇ ಅನುಸೂಚಿ**

**(89 ಮತ್ತು 90ನೇ ಪ್ರಕರಣಗಳನ್ನು ನೋಡಿ)**

**ಅಧಿಸೂಚಿಸಬಹುದಾದ ರೋಗಗಳ ಪಟ್ಟಿ**

1. ಸೀಸದ ಯಾವುದೇ ತಯಾರಿಕೆ ಮಿಶ್ರಣದ ಮೂಲಕ ವಿಷ ಸೇವನೆಯನ್ನು ಒಳಗೊಂಡು ಸೀಸದ ವಿಷಸೇವನೆ ಅಥ ಅದರಿಂದುಂಟಾಗುವ ರೋಗ
2. ಸೀಸದ ಪೆಟ್ರಾ ಈಥೈಲ್ ವಿಷ ಪರಿಣಾಮ
3. ರಂಜಕ ವಿಷ ಪರಿಣಾಮ ಅಥವಾ ಅದರಿಂದುಂಟಾಗುವ ಬೇರೆ ರೋಗ
4. ಪಾದರಸ ವಿಷ ಪರಿಣಾಮ ಅಥವಾ ಅದರಿಂದುಂಟಾಗುವ ಬೇರೆ ರೋಗ
5. ಮ್ಯಾಂಗನೀಸ್ ವಿಷ ಪರಿಣಾಮ ಅಥವಾ ಅದರಿಂದುಂಟಾಗುವ ಬೇರೆ ರೋಗ
6. ಆರ್ಸೆನಿಕ್ ವಿಷ ಪರಿಣಾಮ ಅಥವಾ ಅದರಿಂದುಂಟಾಗುವ ಬೇರೆ ರೋಗ

7. ನೈಟ್ರಸ್ ಹೊಗೆ ಮೂಲಕ ವಿಷ ಪರಿಣಾಮ
8. ಇಂಗಾಲ ಬೈಸಲ್ಫೈಡ್ ವಿಷ ಪರಿಣಾಮ
9. ಬೆನ್‌ಝೀನ್‌ನ ಯಾವುದೇ ಸದೃಶ ಅವುಗಳ ನೈಟ್ರೋ ಅಥವಾ ಅಮೈಡ್ ಉತ್ಪನ್ನಗಳ ಮೂಲಕ ವಿಷಪರಿಣಾಮವನ್ನು ಒಳಗೊಂಡು ಬೆನ್‌ಝೀನ್ ವಿಷ ಪರಿಣಾಮ ಅಥವಾ ಅದರಿಂದುಂಟಾಗುವ ಬೇರೆ ರೋಗ
10. ಕ್ರೋಮ್ ಅಲ್ಸರೇಷನ್ ಅಥವಾ ಅದರಿಂದುಂಟಾಗುವ ಬೇರೆ ರೋಗ
11. ಉಗ್ರ ವ್ರಣ (ಕೆಟ್ಟ ಹುಣ್ಣು)
12. ಸಿಲಿಕರೋಗ
13. ಕಾರ್ಬನ್ ಪರಮಾಣುಗಳ ತೆರೆದ ಸರಣಿಗಳ ಹೈಡ್ರೋಕಾರ್ಬನ್ನುಗಳ ಹ್ಯಾಲೋಜಿನ್ ಅಥವಾ ಹ್ಯಾಲೋಜಿನ್ ಉತ್ಪನ್ನಗಳ ಮೂಲಕ ವಿಷ ಪರಿಣಾಮ
14. (ಎ) ರೇಡಿಯಂ ಅಥವಾ ಇತರ ವಿದ್ಯುತ್ ವಿಕಿರಣ ಪದಾರ್ಥಗಳಿಂದ
    (ಬಿ) ಕ್ಷಕಿರಣಗಳಿಂದ
    ಉಂಟಾದ ರೋಗ ಲಕ್ಷಣದ ಸ್ಪಷ್ಟೀಕರಣಗಳು
15. ಚರ್ಮದ ಮೇಲ್ಪದರಿನ ಪ್ರಾರಂಭಿಕ ಕ್ಯಾನ್ಸರ್
16. ವಿಷದಿಂದ ಉಂಟಾದ ರಕ್ತ ಹೀನತೆ
17. ವಿಷಪೂರಿತ ವಸ್ತುಗಳಿಂದುಂಟಾದ ವಿಷಯುಕ್ತ ಕಾಮಾಲೆ ರೋಗ
18. ಖನಿಜ ತೈಲಗಳಿಂದ ಮತ್ತು ಖನಿಜ ತೈಲದ ಮೂಲ ಇರುವ ಮಿಶ್ರಣಗಳಿಂದ ಉಂಟಾದ ಜಿಡ್ಡು ಮೊಡವೆ ಅಥವಾ ಚರ್ಮದ ಉರಿಯೂತ
19. ಅರಳೆ ಬೇನೆ (ಬೈಸಿಯೋನೊಸಿಸ್)
20. ಕಲ್ನಾರು ಬೇನೆ
21. ರಾಸಾಯನಿಕಗಳು ಮತ್ತು ಬಣ್ಣಗಳೊಂದಿಗೆ ನೇರ ಸಂಪರ್ಕದಿಂದ ಉಂಟಾದ ವೃತ್ತೀಯ ಅಥವಾ ಸಂಪರ್ಕ ಜನ್ಯ ಚರ್ಮದ ಉರಿಯೂತ ಇವುಗಳು ಎರಡು ಬಗೆಯವು, ಅಂದರೆ ಪ್ರಾಥಮಿಕ ವೇದನ ಕಾರಕಗಳು ಮತ್ತು ಅಲರ್ಜಿಯನ್ನುಂಟು ಮಾಡುವ ಸೂಕ್ಷ್ಮ ಸಂವೇದಕಗಳು
22. ಶಬ್ಧದಿಂದ ಉಂಟಾದ ಶ್ರವಣ ನಷ್ಟ (ಅಧಿಕ ಶಬ್ದಮಟ್ಟಗಳಿಗೆ ಒಡ್ಡುವಿಕೆ)
23. ಬೆರಿಲಿಯಮ್ ಪಾಯಿಸನಿಂಗ್
24. ಕಾರ್ಬನ್ ಮೊನಾಕ್ಸೈಡ್ ಪಾಯಿಸನಿಂಗ್
25. ಕಲ್ಲಿದ್ದಲು ಗಣಿಗಾರರ ಶ್ವಾಸಕೋಶದ ಧೂಳು ರೋಗ
26. ಫಾಸ್ಫೈನ್ ವಿಷ ಪರಿಣಾಮ
27. ವೃತ್ತೀಯ ಕ್ಯಾನ್ಸರ್
28. ಐಸೊಸೈನೆಟ್ಸ್ ವಿಷಪರಿಣಾಮ
29. ವಿಷಯುಕ್ತ ಮೂತ್ರಪಿಂಡದ ಉರಿಯೂತ

* * * * *